ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 9 ಶನಿವಾರ 2022

ಸಂಪುಟ: 43 | ಸಂಚಿಕೆ: 84 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರಲ್ಲಿ ಮಳೆಯ ಅವಾಂತರಕ್ಕೆ ವಿಶೇಷ ಟಾಸ್ಕ್‌ಫೋರ್ಸ್ ರಚನೆ

● ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಸೂಚನೆ ● ಪಾಲಿಕೆ, ಮುಡಾ ಅಧಿಕಾರಿಗಳೊಂದಿಗೆ ಸಭೆ ● ದಸರಾ ವೇಳೆಗೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ ● ಸ್ವಚ್ಛ ಮೈಸೂರು, ಹಸಿರು ಮೈಸೂರಿಗೆ ಆದ್ಯತೆ ನೀಡಲು ಸಲಹೆ




ಮೈಸೂರು ನಗರಪಾಲಿಕೆ ಸಭಾಂಗಣದಲ್ಲಿ ಶುಕ್ರವಾರ ನಡೆದ ಪ್ರಗತಿಪರಿಶೀಲನಾ ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು, ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಹೆಚ್ಚುವರಿ ಆಯುಕ್ತರಾದ ಎಂ.ಜೆ.ರೂಪ, ಎಂ.ಕೆ.ಸವಿತ, ಅಧೀಕ್ಷಕ ಅಭಿಯಂತರ ಮಹೇಶ್, ಮುಡಾ ಕಾರ್ಯದರ್ಶಿ ವೆಂಕಟರಾಜು, ಪಾಲಿಕೆ ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ ಹಾಜರಿದ್ದರು.

ಮೈಸೂರು, ಜು.8(ಎಂಟಿವೈ)– ಮೈಸೂರು ನಗರದಲ್ಲಿ ಮಳೆಯ ಅವಾಂತರ ತಡೆಗೆ ವಿಶೇಷ ಟಾಸ್ಕ್‌ಫೋರ್ಸ್ ರಚನೆ ಮಾಡುವಂತೆ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಸೂಚಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಶುಕ್ರವಾರ ಮೈಸೂರು ನಗರದ ಅಭಿವೃದ್ಧಿ ಕಾಮಗಾರಿಗಳ ಕುರಿತಂತೆ ಪಾಲಿಕೆ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪ್ರಗತಿಯಲ್ಲಿರುವ ವಿವಿಧ ಕಾಮಗಾರಿಗಳ ಮಾಹಿತಿ ಸಂಗ್ರಹಿಸಿದ ಬಳಿಕ ಮಾತನಾಡಿ, ಕಳೆದ ಕೆಲವು ದಿನಗಳಿಂದ ಉತ್ತಮ ಮಳೆಯಾಗುತ್ತಿದೆ. ಮುಂಬರುವ ದಿನಗಳಲ್ಲಿ ಮಳೆ ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆಯಿದೆ. ಮಳೆಯ ಅವಾಂತರ ತಡೆಗೆ ಮೊದಲೇ ಸಜ್ಜಾಗಬೇಕು. ತಗ್ಗು ಪ್ರದೇಶಗಳಿಗೆ ಮಳೆ ನೀರು ನುಗ್ಗಿ ಉಂಟು ಮಾಡುವ ಹಾನಿ ತಡೆಗೆ ಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ವಿಶೇಷ ಟಾಸ್ಕ್‌ಫೋರ್ಸ್ ರಚಿಸಬೇಕು. ಹಗಲು, ರಾತ್ರಿ ವೇಳೆ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸಲು ಎರಡು ತಂಡ ರಚಿಸಬೇಕು. ರಕ್ಷಣಾ ಕಾರ್ಯಕ್ಕೆ ಬೇಕಾದ ಸಲ ಕರಣೆಗಳಿರಬೇಕು. ಇದರಲ್ಲಿ ಪಾಲಿಕೆ, ಮುಡಾ ಅಧಿಕಾರಿಗಳು, ಸಿಬ್ಬಂದಿ ಇರಬೇಕು. ಮಳೆಯಿಂದ ಹಾನಿಗೊಳಗಾದ ಬಗ್ಗೆ ದೂರು ಬಂದ ತಕ್ಷಣ ಸ್ಥಳಕ್ಕೆ ಭೇಟಿ ನೀಡಿ, ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು. ಮಳೆ ನೀರು ಹರಿದುಹೋಗುವಂತೆ ಚರಂಡಿಗಳನ್ನು ಸ್ವಚ್ಛ ಮಾಡಿಸಬೇಕು. ಕಾಲುವೆಗಳ ಮೂಲಕ ಕೆರೆಗಳಿಗೆ ನೀರು ಸರಾಗವಾಗಿ ಹರಿದುಹೋಗುವಂತೆ ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ದಸರಾ ವೇಳೆಗೆ ಕಾಮಗಾರಿ ಪೂರ್ಣಗೊಳಿಸಿ: ನಾಡಹಬ್ಬ ಸಮೀಪಿಸುತ್ತಿದೆ. ಈಗಾಗಲೇ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಗುಣಮಟ್ಟ ▶ 8ನೇ ಪುಟಕ್ಕೆ


ಮೈಸೂರು ಪ್ರವಾಸೋದ್ಯಮದ ಮತ್ತೊಂದು ಆಕರ್ಷಣೆ ಕಾವೇರಿ ಕಲಾ ಗ್ಯಾಲರಿ: ಜು.13ಕ್ಕೆ ಉದ್ಘಾಟನೆ



ಮೈಸೂರು, ಜು.8(ಎಸ್‌ಬಿಡಿ)– ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ನಿರ್ಮಾಣವಾಗಿರುವ ಅತ್ಯಾಕರ್ಷಕ 'ಕಾವೇರಿ ಕಲಾ ಗ್ಯಾಲರಿ' ಜು.13ಕ್ಕೆ ಉದ್ಘಾಟನೆಯಾಗಲಿದ್ದು, ಈ ಮೂಲಕ ನಗರದ ಪ್ರವಾಸಿ ಸ್ಥಳಗಳ ಪಟ್ಟಿಗೆ ಮತ್ತೊಂದು ಸೇರ್ಪಡೆಯಾಗಲಿದೆ.

ಪ್ರವಾಸೋದ್ಯಮ ಇಲಾಖೆ ಹಾಗೂ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ನೆರವಿನೊಂದಿಗೆ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ಪರಿಕಲ್ಪನೆಯಂತೆ ಕೇಂದ್ರೀಯ ಸಂಸ್ಕೃತಿ ಸಚಿವಾಲಯದ ರಾಷ್ಟ್ರೀಯ ವಿಜ್ಞಾನ ವಸ್ತು ಸಂಗ್ರಹಾಲಯವು ಕಾವೇರಿ ನದಿ ಸಂಬಂಧ ಸಂಶೋಧನೆ ನಡೆಸಿ, ವಸ್ತುಪ್ರದರ್ಶನ ಆವರಣದ ಕನ್ನಡ ಕಾರಂಜಿ ಕಟ್ಟಡದಲ್ಲಿ ನಿರ್ಮಿಸಿರುವ 'ಕಾವೇರಿ ಕಲಾ ಗ್ಯಾಲರಿ'ಯನ್ನು ಪ್ರವಾಸೋದ್ಯಮ ▶ 8ನೇ ಪುಟಕ್ಕೆ

ಸೊರಗಿರುವ ಮೈಸೂರು ಲಲಿತಮಹಲ್ ಹೋಟೆಲ್‌ಗೆ ಐಷರಾಮಿ ಟೆಂಟ್‌ಗಳ ಸೊಬಗು



(ಸಾಂದರ್ಭಿಕ ಚಿತ್ರ)

● ತದ ನಂತರವೇ ಖಾಸಗಿಯವರಿಗೆ ವಹಿಸಿಕೊಡಲು ತೀರ್ಮಾನ
● ಹೋಟೆಲ್‌ಗೆ ಸೇರಿದ 54 ಎಕರೆಯಲ್ಲಿ ಪ್ರವಾಸೋದ್ಯಮ ಸ್ನೇಹಿ ಟೆಂಟ್ ನಿರ್ಮಾಣಕ್ಕೆ ನಿರ್ಧಾರ

ಬೆಂಗಳೂರು, ಜು.8(ಕೆಎಂಶಿ)–ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್ ಆವರಣದಲ್ಲಿ ಸುಸಜ್ಜಿತ ಹಾಗೂ ಐಷಾರಾಮಿ ಟೆಂಟುಗಳು ತಲೆ ಎತ್ತಲಿವೆ. ಸಮರ್ಪಕ ನಿರ್ವಹಣೆ ಇಲ್ಲದೆ ಸೊರಗಿರುವ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್‌ಗೆ ಮರು ಜೀವ ಕೊಡಲು ನಿರ್ಧರಿಸಿರುವ ರಾಜ್ಯ ಸರ್ಕಾರ ಟಾಟಾ ಇಲ್ಲವೆ ವಿಶ್ವದ ಹೆಸರಾಂತ ಹೋಟೆಲ್ ಉದ್ಯಮಕ್ಕೆ ಇದನ್ನು ವಹಿಸಿಕೊಡುವ ತೀರ್ಮಾನ ಕೈಗೊಳ್ಳಲಾಗಿದೆ.

ಸಚಿವ ಸಂಪುಟದ ಉಪ ಸಮಿತಿಯ ಸೂಚನೆಯಂತೆ ಪ್ರವಾಸೋದ್ಯಮ ಇಲಾಖೆಯು ಲಲಿತಮಹಲ್ ಪ್ಯಾಲೇಸ್ ಹೋಟೆಲನ್ನು ಖಾಸಗಿಯವರಿಗೆ ಹಸ್ತಾಂತರಿಸಲು ವಿಶ್ವ ಮಟ್ಟದ ಟೆಂಡರ್ ಕರೆದಿದೆ. ಹೋಟೆಲ್‌ನಲ್ಲಿ ಕೇವಲ 54 ರೂಮ್‌ಗಳು ಇರುವುದರಿಂದ ಲಾಭದಾಯಕವಲ್ಲವೆಂದು ಯಾವ ಹೋಟೆಲ್ ಉದ್ದಿಮೆದಾರರು ಇದನ್ನು ವಹಿಸಿಕೊಳ್ಳಲು ಬರುತ್ತಿಲ್ಲ. ಈ ಕಾರಣದಿಂದ ಹೋಟೆಲ್ ಆವರಣ 54 ಎಕರೆ ಇದ್ದು, ಪ್ರವಾಸಿಗರನ್ನು ಆಕರ್ಷಿಸುವ, ▶ 8ನೇ ಪುಟಕ್ಕೆ

ಸಹಜ ಯೋಗ ವಿಧಾನದ ಮಾತಾಜಿ ದಿ.ನಿರ್ಮಲಾದೇವಿ ಜನ್ಮ ಶತಮಾನೋತ್ಸವ

ನಾಳೆ ಮೈಸೂರಿಗೆ ಚೈತನ್ಯ ರಥ ಆಗಮನ

ಮೈಸೂರು, ಜು.8(ಆರ್‌ಕೆಬಿ)– ಸಹಜ ಯೋಗ ವಿಧಾನದ ಮಾತಾಜಿ ದಿವಂಗತ ನಿರ್ಮಲಾದೇವಿ ಅವರ ಜನ್ಮ ಶತಮಾನೋತ್ಸವ ಆಚರಣಾ ಚೈತನ್ಯ ರಥ ಜು. 10 ರಂದು ಮೈಸೂರಿಗೆ ಆಗಮಿಸುತ್ತಿದ್ದು, ಬೆಳಗ್ಗೆ 9 ಗಂಟೆಗೆ ಮೈಸೂರಿನ ಗೋಪಾಲಸ್ವಾಮಿ ಶಾಲೆಗೆ ತಲುಪಲಿದೆ ಎಂದು ಯೋಗ ವಿಧಾನ ಅನುಸರಿಸುತ್ತಿರುವ ಡಿ. ಸುಚೇತಾ ತಿಳಿಸಿದರು. ಮೈಸೂರು



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 9 ಗಂಟೆಗೆ ಗೋಪಾಲಸ್ವಾಮಿ ಶಾಲೆಯಿಂದ ಹೊರಡುವ ಚೈತನ್ಯರಥ ಸಂಜೆ ಸಂಜೆ 6ಕ್ಕೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನ ತಲುಪಲಿದೆ ಎಂದರು.

ಅಲ್ಲಿ ನಡೆಯಲಿರುವ ಸಮಾರಂಭದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ ಕುಮಾರ್, ಶಾಸಕ ಜಿ.ಟಿ.ದೇವೇಗೌಡ ಇನ್ನಿತರರು ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಸಹಜ ಯೋಗ ವಿಧಾನವನ್ನು ಯಾವುದೇ ಧರ್ಮದವರೂ ಯಾವುದೇ ಸಾಂಸಾರಿಕ ತ್ಯಾಗ ಮಾಡದೇ ಅನುಸರಿಸುತ್ತಿರುವ ಮೂಲಕ ಉನ್ನತಿ ಹೊಂದಬಹುದಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವಿನುತಾ ಮೂರ್ತಿ ಉಪಸ್ಥಿತರಿದ್ದರು.

ಖಾದ್ಯ ತೈಲ ದರದಲ್ಲಿ 15 ರೂ. ಕಡಿತಕ್ಕೆ ಕೇಂದ್ರ ಸರ್ಕಾರ ಆದೇಶ

ನವದೆಹಲಿ, ಜು.8– ಖಾದ್ಯ ತೈಲ ದರ ಏರಿಕೆಯಿಂದ ಕಂಗಾಲಾಗಿರುವ ಗ್ರಾಹಕರಿಗೆ ಕೇಂದ್ರ ಸರ್ಕಾರ ಅಲ್ಪ ಪ್ರಮಾಣದ ರಿಲೀಫ್ ನೀಡಿದ್ದು, ತಕ್ಷಣದಿಂದಲೇ ಜಾರಿಗೆ ಬರುವಂತೆ ಅಡುಗೆ ಎಣ್ಣೆಗಳ ದರದಲ್ಲಿ ಪ್ರತಿ ಲೀಟರ್‌ಗೆ 15 ರೂ. ಕಡಿತಗೊಳಿಸಿ ಆದೇಶ ಹೊರಡಿಸಿದೆ. ಈ ಕುರಿತಂತೆ ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯವು ನಿರ್ದೇಶನ ಹೊರಡಿಸಿದ್ದು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಖಾದ್ಯ ತೈಲಗಳ ಗರಿಷ್ಠ ಚಿಲ್ಲರೆ ಬೆಲೆಯಲ್ಲಿ 15 ರೂ.ಗಳ ಕಡಿತವನ್ನು ಖಚಿತಪಡಿಸಿಕೊಳ್ಳಲು ಪ್ರಮುಖ ಖಾದ್ಯ ತೈಲ ಸಂಘಗಳಿಗೆ ನಿರ್ದೇಶನ ನೀಡಿದೆ ಎಂದು ಸಚಿವಾಲಯ ಶುಕ್ರವಾರ ತಿಳಿಸಿದೆ. ಅಂತೆಯೇ ಈ ಆದೇಶವು ಈ ಕ್ಷಣದಿಂದಲೇ ಜಾರಿಗೆ ಬರಬೇಕೆಂದು ಖಾದ್ಯ ತೈಲ ಸಂಘಗಳಿಗೆ ಸೂಚನೆ ನೀಡಿದೆ.

ಬಕ್ರೀದ್ ಹಬ್ಬ: ಭರ್ಜರಿ ತರಾವರಿ ಕುರಿ ವ್ಯಾಪಾರ



ಮೈಸೂರು, ಜು.8(ಜಿಎ)– ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಕುರಿ ವ್ಯಾಪಾರ ಜೋರಾಗಿದೆ. ಪ್ರಮುಖವಾಗಿ ಬನ್ನಿಮಂಟಪ ಎಲ್‌ಐಸಿ ವೃತ್ತ(ಮಿಲೇನಿಯಂ ಸರ್ಕಲ್)ದಲ್ಲಿ ಕುರಿಗಳ ಭರ್ಜರಿ ವ್ಯಾಪಾರ ನಡೆದಿದ್ದು, ಮೈಸೂರಿನ ವಿವಿಧೆಡೆ ಹಾಗೂ ಸುತ್ತಮುತ್ತಲ ಜಿಲ್ಲೆಗಳಿಂದ ಕುರಿಗಳನ್ನು ತಂದು ಇಲ್ಲಿ ಮಾರಾಟ ಮಾಡಲಾಗುತ್ತಿದೆ.

ಈ ಬಾರಿಯೂ ಮಂಡ್ಯ, ಶ್ರೀರಂಗಪಟ್ಟಣ, ಬನ್ನೂರು, ಪಾಂಡವಪುರ, ಕೆಆರ್‌ಎಸ್, ಮದ್ದೂರು, ತಿ.ನರಸೀಪುರ, ಹೊಳೆನರಸೀಪುರ, ಚಾಮರಾಜನಗರ ಮತ್ತಿತರ ಭಾಗದ ವ್ಯಾಪಾರಿಗಳು ತಾವು ಸಾಕಿದ ವಿವಿಧ ತಳಿಯ ಕುರಿಗಳನ್ನು ತಂದು ಮಾರಾಟ ಮಾಡುತ್ತಿದ್ದಾರೆ. ಬನ್ನೂರು ಕುರಿ, ಬನ್ನೂರು ನಾಟಿ ಕುರಿ ಮತ್ತು ಬಂಡೂರು ಕುರಿಗಳಿಗೆ ಬೇಡಿಕೆ ಹೆಚ್ಚಿದ್ದು, ಬೆಲೆಯೂ ಅಧಿಕವಾಗಿದೆ. ಕೊರೊನಾ ಕಾರಣದಿಂದ ಕಳೆದೆರಡು ವರ್ಷ ಸರಳವಾಗಿ ಹಬ್ಬ ಆಚರಿಸಲಾಗಿತ್ತು. ಆದರೆ ಈ ಸಂಬಂಧಿಕರೊಡಗೂಡಿ ಅದ್ಧೂರಿಯಾಗಿ ಆಚರಿಸಲು ಸಜ್ಜಾಗಿರುವ ಪರಿಣಾಮ ಕುರಿಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಕಳೆದ ಬಾರಿ ಬೆಲೆಗಿಂತ ಐದಾರು ಸಾವಿರ ರೂ. ಹೆಚ್ಚಾಗಿದೆ. ತ್ಯಾಗ ಬಲಿದಾನದ ಸಂಕೇತವಾದ ಬಕ್ರೀದ್(ಜು.10) ಹಬ್ಬಕ್ಕೆ ಇನ್ನೆರಡು ದಿನ ಬಾಕಿ ಇರುವುದರಿಂದ ಮಿಲೇನಿಯಂ ವೃತ್ತ ಮಾತ್ರವಲ್ಲದೆ ಬನ್ನೂರು ರಸ್ತೆ, ತಿ.ನರಸೀಪುರ ರಸ್ತೆ ಸೇರಿದಂತೆ ಮೈಸೂರನ್ನು ಸಂಪರ್ಕಿಸುವ ಪ್ರಮುಖ ರಸ್ತೆಗಳ ಖಾಲಿ ಸ್ಥಳದಲ್ಲೂ ಕುರಿಗಳ ಮಾರಾಟ ಮಾಡಲಾಗುತ್ತಿದೆ. ಆಯಾ ಭಾಗದ ವ್ಯಾಪಾರಿಗಳು ಹಾಗೂ ಗ್ರಾಹಕರಿಗೂ ಅನುಕೂಲವಾಗುತ್ತದೆ ಎಂಬ ಕಾರಣಕ್ಕೆ ಅಲ್ಲಲ್ಲಿ ಕುರಿಗಳ ಬಿಕರಿ ನಡೆಸಲಾಗುತ್ತಿದೆ. ಕುರಿಯ ಗಾತ್ರ, ವಯಸ್ಸು, ಅದರಿಂದ ಸಿಗಬಹುದಾದ ಮಾಂಸದ ಪ್ರಮಾಣವನ್ನು ಅಂದಾಜಿಸಿ ಬೆಲೆ ಕಟ್ಟಿ, ಕೊಳ್ಳುತ್ತಾರೆ. ಕೆಲವರು ಕುರಿಯ ಬೆನ್ನನ್ನು ಬಿಗಿಯಾಗಿ ಹಿಡಿದು ಮಾಂಸ ಎಷ್ಟು ಸಿಗಬಹುದೆಂದು ಅಂದಾಜಿಸುವುದೂ ಸಾಮಾನ್ಯವಾಗಿದೆ.

ಸೂಕ್ತ ಸ್ಥಳ ನೀಡಿ: ಹಬ್ಬಗಳ ಸಂದರ್ಭದಲ್ಲಿ ಮಾರುಕಟ್ಟೆಗಳ ಬಳಿ ವಾಹನ ಹಾಗೂ ಜನದಟ್ಟಣೆ ಸಾಮಾನ್ಯ. ಆದರೆ ಮೈಸೂರು–ಬೆಂಗಳೂರು ಮುಖ್ಯರಸ್ತೆ ಮಿಲೇನಿಯಂ ವೃತ್ತದಲ್ಲಿ ಬಕ್ರೀದ್ ಸಂದರ್ಭದಲ್ಲಿ ಸೃಷ್ಟಿಯಾಗುವ ಸಮಸ್ಯೆ ವಿಭಿನ್ನ. ನಾಲ್ಕು ಕಡೆಗಳಿಂದ ಸಂಚರಿಸುವ ವಾಹನಗಳು ವೃತ್ತ ಬಳಸುವುದು ಕಷ್ಟ ಸಾಧ್ಯವಾಗುತ್ತದೆ. ವೃತ್ತದೆಲ್ಲೆಡೆ ಕುರಿಗಳೇ ಕಾಣುತ್ತವೆ. ಜೊತೆಗೆ ಕೊಳ್ಳುವವರು, ಮಾರುವವರು ಮಾತ್ರವಲ್ಲದೆ ಕುರಿಗಳನ್ನು ನೋಡುವ ಆಸಕ್ತಿವುಳ್ಳವರೂ ಸಿಕ್ಕಲ್ಲಿ ತಮ್ಮ ವಾಹನ ನಿಲ್ಲಿಸಿರುತ್ತಾರೆ. ಕುರಿಗಳನ್ನು ಕರೆತಂದ ವಾಹನಗಳೂ ಅಲ್ಲಲ್ಲೇ ನಿಂತಿರುತ್ತವೆ. ಪರಿಣಾಮ 10–15 ದಿನ ಸಂಜೆ ವೇಳೆ ವಾಹನ ದಟ್ಟಣೆ ವಿಪರೀತವಾಗಿರುತ್ತದೆ. ಜಿಲ್ಲಾಡಳಿತ ಕುರಿ ವ್ಯಾಪಾರಕ್ಕೆ ಸೂಕ್ತ ಸ್ಥಳಾವಕಾಶ ಕಲ್ಪಿಸಿದರೆ ಟ್ರಾಫಿಕ್ ಸಮಸ್ಯೆ ತಪ್ಪುವುದರ ಜೊತೆಗೆ ಸುರಕ್ಷಿತವಾಗಿ ಕುರಿ ವ್ಯಾಪಾರ ನಡೆಸುವುದಕ್ಕೂ ಅನುಕೂಲವಾಗುತ್ತದೆ ಎಂದು ವ್ಯಾಪಾರಿಗಳು ತಿಳಿಸಿದರು.

ಜೆಕೆ ಟೈರ್ ಅಧ್ಯಕ್ಷರಾಗಿ ಅನುಜ್ ಕಥೂರಿಯಾ ನೇಮಕ

ಮೈಸೂರು, ಜು.8– ಜೆಕೆ ಟೈರ್ & ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷರಾಗಿ



(ಭಾರತ) ಅನುಜ್ ಕಥೂರಿಯಾ ಅವರನ್ನು ನೇಮಿಸಲಾಗಿದೆ. ದೆಹಲಿಯಲ್ಲಿರುವ ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ (ಸಿಎಂಡಿ) ಡಾ. ರಘುಪತಿ ಸಿಂಘಾನಿಯಾ ಮತ್ತು ವ್ಯವಸ್ಥಾಪಕ ನಿರ್ದೇಶಕ ಅನ್ಶುಮಾನ್ ಸಿಂಘಾನಿಯಾ ಅವರ ನೇತೃತ್ವದಲ್ಲಿ ಕಥೂರಿಯಾ ಕಾರ್ಯ ನಿರ್ವಹಿಸಲಿದ್ದಾರೆ. ಕಥೂರಿಯಾ ಅವರು ಪ್ರತಿಷ್ಠಿತ ಆಟೋಮೊಬೈಲ್ ಕಂಪನಿಗಳಾದ ಅಶೋಕ್ ಲೇಲ್ಯಾಂಡ್ ಮತ್ತು ಟಾಟಾ ಮೋಟಾರ್ಸ್‌ನಲ್ಲಿ ಹಿರಿಯ ವ್ಯವಸ್ಥಾಪಕ (ನಿರ್ವಹಣಾ) ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ, ಸುದೀರ್ಘ 31 ವರ್ಷಗಳ ಅನುಭವ ಹೊಂದಿದ್ದಾರೆ. ಇಂಜಿನಿಯರ್ ಆಗಿ, ಮಾರುಕಟ್ಟೆ ಮತ್ತು ಹಣಕಾಸು ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು, ಹಾರ್ವರ್ಡ್ ಬಿಸಿನೆಸ್ ಸ್ಕೂಲ್ ಹಳೆಯ ವಿದ್ಯಾರ್ಥಿ. ಅವರು ಹೊರರಾಷ್ಟ್ರಗಳ ಆಟೋಮೊಬೈಲ್ ಕ್ಷೇತ್ರದಲ್ಲೂ ಹಿರಿಯ ವ್ಯವಸ್ಥಾಪಕರ ಹುದ್ದೆಗಳಲ್ಲಿ ಕೆಲಸ ಮಾಡಿರುವ ಅನುಭವ ಹೊಂದಿದ್ದಾರೆ.



ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಕಲಾಭಾರತಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಈ ವೇಳೆ ಸಂಸ್ಥೆ ಕಾರ್ಯದರ್ಶಿ ಲಕ್ಕೇಗೌಡ, ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಮುದ್ದುರಂಗಯ್ಯ, ನಿವೃತ್ತ ಉಪ ಪ್ರಾಂಶುಪಾಲ ಜವರೇಗೌಡ, ಎಂ.ಕೆ. ಬೋರೇಗೌಡ ಮತ್ತಿತರರು ಹಾಜರಿದ್ದರು.

ಸಾಧಕ ವೈದ್ಯರಿಗೆ ಪೇಜಾವರ ಶ್ರೀಗಳಿಂದ 'ವೈದ್ಯ ಭಾಸ್ಕರ ಪ್ರಶಸ್ತಿ' ಪ್ರದಾನ

ಮೈಸೂರು, ಜು.8(ಆರ್‌ಕೆಬಿ)– ವೈದ್ಯರ ದಿನಾಚರಣೆ ಅಂಗವಾಗಿ ಉಡುಪಿಯ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರು ಹಲವು ಸಾಧಕ ವೈದ್ಯರಿಗೆ ವೈದ್ಯ ಭಾಸ್ಕರ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.



ಮೈಸೂರಿನ ಸರಸ್ವತಿಪುರಂ ಶ್ರೀಕೃಷ್ಣ ಧಾಮ ಆವರಣದಲ್ಲಿ ಶ್ರೀಕೃಷ್ಣ ಮಿತ್ರ ಮಂಡಳಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ, ಅಪೂರ್ವ ಸ್ನೇಹ ಬಳಗ, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಜಂಟಿಯಾಗಿ ಕಾರ್ಯಕ್ರಮ ಆಯೋಜಿಸಿದ್ದವು. ವೈದ್ಯರಾದ ಡಾ.ಎಂ.ಎನ್.ರವಿ, ಡಾ.ಆರತಿ, ಡಾ. ರೂಪಾ ಪ್ರಕಾಶ್, ಡಾ.ಕೆ.ಪಿ.ಶ್ರೀಧರ್, ಡಾ.ಪ್ರಶಾಂತ್, ಡಾ.ಜಿ.ಎನ್.ಕಿರಣ್, ಡಾ.ಆರ್.ಯೋಗೀಶ್, ಡಾ.ಈ.ಸುಹಾಸ್ ಅವರನ್ನು ಸನ್ಮಾನಿಸಲಾಯಿತು.

ನಂತರ ಮಾತನಾಡಿದ ಪೇಜಾವರ ಶ್ರೀಗಳು, ವೈದ್ಯರ ಸೇವೆಯಿಂದ ಆರೋಗ್ಯವಂತ ಸಮಾಜದ ನಿರ್ಮಾಣವಾಗಲಿದೆ. 'ವೈದ್ಯೋ ನಾರಾಯಣೋ ಹರಿ' ಎನ್ನುತ್ತೇವೆ. ಅವರಲ್ಲಿ ಯಾವುದೇ ಜಾತಿ, ಮತ ಇರುವುದಿಲ್ಲ. ವೈದ್ಯರು ನೀಡುವ ಔಷಧಗಳಿಗಿಂತ ರೋಗಿಗಳಿಗೆ ಅವರು ನೀಡುವ ಆತ್ಮಸ್ಥೈರ್ಯ ಮುಖ್ಯ. ಆತ್ಮಸ್ಥೈರ್ಯ ಇದ್ದರೆ ಎಂತಹ ಮಾರಕ ರೋಗಗಳನ್ನು ಗುಣಪಡಿಸಬಹುದು. ವೈದ್ಯರನ್ನು ಅವಲಂಬಿಸಿರುವ ನಾವು ಅದೇ ರೀತಿ ಅವರನ್ನು ಗೌರವಿಸುವುದು ನಮ್ಮ ಕರ್ತವ್ಯವಾಗಬೇಕು ಎಂದು ಹೇಳಿದರು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಮಾತನಾಡಿ, ರೋಗಿಗಳಿಗೆ ಔಷಧಿಗಿಂತ ವೈದ್ಯರು ಅವರಲ್ಲಿ ತುಂಬುವ ಆತ್ಮಸ್ಥೈರ್ಯದಿಂದ ಎಂತಹ ರೋಗಗಳಿದ್ದರೂ ರೋಗಿ ಗುಣಮುಖನಾಗುತ್ತಾನೆ. ರೋಗಿಗಳ ಜೀವ ಉಳಿಸುವ ಕಾರ್ಯದಲ್ಲಿ ತೊಡಗಿರುವ ಕೆಲಸ ಪುಣ್ಯದ ಕೆಲಸ ಎಂದರು.

ಕಾಮಾಕ್ಷಿ ಆಸ್ಪತ್ರೆ ಮುಖ್ಯಸ್ಥ ಮಹೇಶ್ ಶೆಣೈ ಮಾತನಾಡಿ, ಯುವಪೀಳಿಗೆ ಪಾಶ್ಚಾತ್ಯ ಸಂಸ್ಕೃತಿಯಿಂದ ಹೊರಬರಬೇಕು. ಆರೋಗ್ಯ ವಿದ್ದರೆ ಮಾತ್ರ ಸಾಧನೆ ಸಂಪಾದನೆ ಮಾಡಲು ಸಾಧ್ಯ. ವೇದ ಆಯುರ್ವೇದಲ್ಲಿ ಆರೋಗ್ಯ ಸ್ಥಿರತೆ ನಿಯಂತ್ರಣದ ಬಗ್ಗೆ ಮಾಹಿತಿಯಿದೆ, ಯೋಗ, ಧ್ಯಾನ, ಹೋಮ ಹವನ, ವಾಯುವಿಹಾರ ಸಂಗೀತದಿಂದ ಆರೋಗ್ಯ ವೃದ್ಧಿಸುತ್ತದೆ ಎಂದು ಹೇಳಿದರು.

ಹಿರಿಯ ಚಿಂತಕ ಕೆ.ರಘುರಾಂ ವಾಜಪೇಯಿ ಮಾತನಾಡಿ, 4500 ವರ್ಷಗಳ ಹಿಂದೆಯೇ ನಮ್ಮ ಭಾರತೀಯ ವೈದ್ಯ ಪದ್ಧತಿಯಲ್ಲಿ ಚರಕ ಸುಶ್ರುತ ಧನ್ವಂತ್ರಿ ರೂಪದಲ್ಲಿ ಸೇವೆ ಮಾಡಿರುವುದನ್ನು ಕೇಳಿದ್ದೇವೆ. ಹಾಗೆಯೇ ಶಸ್ತ್ರ ಚಿಕಿತ್ಸಾ ಶಾಸ್ತ್ರ ಹಾಗೂ ದೇಹ ರಚನಾ ಶಾಸ್ತ್ರದ ಆದ್ಯ ಪ್ರವರ್ತಕರಾಗಿ ಇಂದಿಗೂ ಅವರ ಜ್ಞಾನವನ್ನು ವಿಶ್ವವೇ ನಿಬ್ಬೆರಗಾಗುವಂತೆ ಮಾಡಿದೆ ಎಂದು ತಿಳಿಸಿದರು

ಹಿರಿಯ ನಾಗರಿಕರು ಆರೋಗ್ಯ ತಪಾಸಣೆಯಲ್ಲಿ ಹೆಚ್ಚಾಗಿ ಭಾಗವಹಿಸಿ ಆರೋಗ್ಯ ಸಮಸ್ಯೆಗಳ ಸೂಕ್ಷ್ಮತೆ ಅರಿತರೆ ರೋಗರುಜಿನಗಳು ಪ್ರಥಮ ಹಂತದಲ್ಲೇ ನಿವಾರಣೆ ಮಾಡಿಕೊಳ್ಳಬಹುದು. ಆರೋಗ್ಯವಿಮೆ ಮಾಡಿಸುವ ನಾವು ಪರಿಸರ ಸಂರಕ್ಷಣೆಯ ಕಡೆ ಗಮನ ಕೊಡುತ್ತಿಲ್ಲ. ವಿದ್ಯಾರ್ಥಿಗಳು ಪದವೀಧರರಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ನಗರಪಾಲಿಕೆ ಸದಸ್ಯ ಜಗದೀಶ್, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ವಿನಯ್ ಕಣಗಾಲ್, ಸುಧೀಂದ್ರ, ಸುಚೀಂದ್ರ, ಚಕ್ರಪಾಣಿ, ನಾಗಶ್ರೀ ಸುಚೇಂದ್ರ, ವಿದ್ಯಾ ಇನ್ನಿತರರು ಉಪಸ್ಥಿತರಿದ್ದರು.

'ರೋಪ್‌ವೇ' ಪ್ರಸ್ತಾವ ಕೈಬಿಟ್ಟ ಸರ್ಕಾರಕ್ಕೆ ಚಾಮುಂಡಿಬೆಟ್ಟ ಉಳಿಸಿ ಸಮಿತಿ ಸ್ವಾಗತ

ಬೆಟ್ಟದ ತಂಟೆ ಬೇಡ, ಮೈಸೂರು ನಗರ ಅಭಿವೃದ್ಧಿಪಡಿಸಿ

ಮೈಸೂರು, ಜು.8(ಆರ್‌ಕೆಬಿ)– ಚಾಮುಂಡಿ ಬೆಟ್ಟ ಸಂರಕ್ಷಿಸುವ ದೃಷ್ಟಿಯಿಂದ ಚಾಮುಂಡಿ ಬೆಟ್ಟ ಉಳಿಸಿ ಸಮಿತಿ ಹಾಗೂ ಇನ್ನಿತರೆ ಪರಿಸರ ಪ್ರೇಮಿಗಳ ಸಾರ್ವತ್ರಿಕ ವಿರೋಧವನ್ನು ಪರಿಗಣಿಸಿ, ಸರ್ಕಾರವು ಚಾಮುಂಡಿ ಬೆಟ್ಟದಲ್ಲಿ ರೋಪ್‌ವೇ ನಿರ್ಮಿಸುವ ಪ್ರಸ್ತಾವ ಕೈಬಿಟ್ಟಿರುವುದನ್ನು ಚಾಮುಂಡಿ ಬೆಟ್ಟ ಉಳಿಸಿ ಸಮಿತಿ ಸ್ವಾಗತಿಸಿದೆ.



ಮೈಸೂರು ಪತ್ರಕರ್ತರ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಸಮಿತಿಯ ಪರ ಮಾತನಾಡಿದ ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಬೆಟ್ಟಕ್ಕೆ ರೋಪ್‌ವೇ ನಿರ್ಮಿಸುವ ಸರ್ಕಾರದ ಕ್ರಮವನ್ನು ವಿರೋಧಿಸಿ 55 ಸಾವಿರ ಭೌತಿಕ ಸಹಿ ಸಂಗ್ರಹಿಸಲಾಗಿತ್ತು. ತಜ್ಞರು ಒಳಗೊಂಡಂತೆ ದುಂಡುಮೇಜಿನ ಸಭೆ ನಡೆಸಿ ಸಂಗ್ರಹವಾದ ಅಭಿಪ್ರಾಯಗಳನ್ನು ಲಿಖಿತ ರೂಪದಲ್ಲಿ ಜಿಲ್ಲಾಡಳಿತ ಮತ್ತು ಸಚಿವರಿಗೆ ಕಳಿಸಲಾಗಿತ್ತು. ಹೀಗಾಗಿ ಸರ್ಕಾರ ರೋಪ್‌ವೇ ನಿರ್ಮಾಣದ ನಿರ್ಧಾರವನ್ನು ಕೈಬಿಟ್ಟಿದೆ. ಇದು ಸ್ವಾಗತಾರ್ಹ ಕ್ರಮ ಎಂದರು. ಬೆಟ್ಟದಲ್ಲಿ ಕೇಂದ್ರ ಸರ್ಕಾರದ ಪ್ರಸಾದ ಯೋಜನೆಯಡಿ ಕೈಗೊಂಡಿರುವ ವಿವಿಧ ಕಟ್ಟಡ ಕಾಮಗಾರಿಗಳನ್ನು ಕೂಡಲೇ ಕೈಬಿಡಬೇಕು. ಮೆಟ್ಟಿಲುಗಳಿಗೆ ರೈಲಿಂಗ್ ಅಳವಡಿಸಬಾರದು. ಬೆಟ್ಟದ ಸಮಗ್ರ ನಿರ್ವಹಣೆಗಾಗಿ ಚಾಮುಂಡಿಬೆಟ್ಟ ಶಾಸನ ಬದ್ಧ ಪ್ರಾಧಿಕಾರ ರಚಿಸಬೇಕು. ಬೆಟ್ಟಕ್ಕೆ ಎಲ್ಲ ರೀತಿಯ ಖಾಸಗಿ ವಾಹನ ಸಂಚಾರ ನಿರ್ಬಂಧಿಸಿ ವಿದ್ಯುತ್ ಚಾಲಿತ ಬಸ್‌ಗಳನ್ನು ಮಾತ್ರ ಓಡಿಸಬೇಕು. ಬೆಟ್ಟದ ಮೇಲಿನ ಅಕ್ರಮ ಕಟ್ಟಡ ನೆಲಸಮ ಮಾಡಬೇಕು. ವಾಣಿಜ್ಯ ಚಟುವಟಿಕೆ ಕನಿಷ್ಠ ಮಟ್ಟಕ್ಕೆ ತರಬೇಕು. ಬೆಟ್ಟದ ಮೇಲೆ ಮಳೆ ನೀರು ಕೊಯ್ಲು ಮತ್ತು ಸಮರ್ಪಕ ತ್ಯಾಜ್ಯ ನಿರ್ವಹಣೆಗಳ ಮೂಲಕ ಬೆಟ್ಟವನ್ನು ಇಡೀ ದೇಶದಲ್ಲಿ ಮಾದರಿ ತಾಣವಾಗಿ ರೂಪಿಸಬೇಕು ಎಂದು ಆಗ್ರಹಿಸಿದರು. ಅಭಿವೃದ್ಧಿ ನೆಪದಲ್ಲಿ ಚಾಮುಂಡಿ ಬೆಟ್ಟಕ್ಕೇಕೆ ಕಣ್ಣು ಹಾಕುತ್ತೀರಿ. ಅದರ ಬದಲು ಮೈಸೂರು ನಗರವನ್ನೇ ಅಭಿವೃದ್ಧಿಪಡಿಸಿ ಎಂದು ಸಮಿತಿಯ ಪ್ರೊ.ಕೆ.ಕಾಳಚನ್ನೇಗೌಡ ಆಗ್ರಹಿಸಿದರು. ಚಾಮುಂಡಿಬೆಟ್ಟದಲ್ಲಿ ಹೊಸದಾಗಿ ಮನೆ ಅಥವಾ ಇನ್ಯಾವುದೇ ಕಟ್ಟಡ ನಿರ್ಮಿಸಲು ಅವಕಾಶ ನೀಡುವುದು ಬೇಡ. ಹೀಗೆಂದು ಸರ್ಕಾರ ಆದೇಶ ಹೊರಡಿಸ ಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಸದಸ್ಯರಾದ ಪರಶುರಾಮೇಗೌಡ, ಲೀಲಾ ಶಿವಕುಮಾರ್, ಲೀಲಾ ವೆಂಕಟೇಶ್, ಗಂಟಯ್ಯ ಉಪಸ್ಥಿತರಿದ್ದರು.

ಮೈಸೂರು ಯೋಗ ಒಕ್ಕೂಟದ ನೂತನ ಪದಾಧಿಕಾರಿಗಳು

ಮೈಸೂರು, ಜು. 8– ಮೈಸೂರು ಯೋಗ ಒಕ್ಕೂಟದ ಸರ್ವ ಸದಸ್ಯರ ಮಹಾಸಭೆಯಲ್ಲಿ ನೂತನ ಪದಾಧಿಕಾರಿಗಳನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಡಾ. ಎ.ಎಸ್. ಚಂದ್ರಶೇಖರ್–ಗೌರವ ಅಧ್ಯಕ್ಷರು, ಟಿ. ಜಲೇಂದ್ರಕುಮಾರ್–ಅಧ್ಯಕ್ಷ, ಎಂ.ಎಸ್. ರಮೇಶ್ ಕುಮಾರ್, ಎಂ.ಎಸ್. ಶಿವಪ್ರಕಾಶ್–ಉಪಾಧ್ಯಕ್ಷರು, ಡಾ. ಬಿ.ಪಿ. ಮೂರ್ತಿ, ಬಿ. ಶಾಂತಾ ರಾವ್–ಕಾರ್ಯಾಧ್ಯಕ್ಷರು, ಕೆ.ಜಿ. ದೇವರಾಜು–ಪ್ರಧಾನ ಕಾರ್ಯದರ್ಶಿ, ನರಸಿಂಹ, ಭವಾನಿ–ಸಹ ಕಾರ್ಯದರ್ಶಿಗಳು, ಸಿ.ಜಿ. ಅನಿಲ್ –ಖಜಾಂಚಿ, ಕೆ. ಚಂದ್ರ, ಮಧುಬಾಲ ಗುಪ್ತ –ಸಂಘಟನಾ ಕಾರ್ಯದರ್ಶಿಗಳು, ಎ. ಲಕ್ಷ್ಮಮ್ಮ, ಬಿ.ಎಸ್. ಲಕ್ಷ್ಮೀ, ಯೋಗ ಕುಮಾರ್, ವಿನಯ ಶಾಂತರಾಮ್ ಅವರು ನಿರ್ದೇಶಕರಾಗಿ ಆಯ್ಕೆಗೊಂಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.07.2022 ಶನಿವಾರ, ಮಳೆ ನಕ್ಷತ್ರ : ಪುನರ್ವಸು 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ
ತಿಥಿ: ದಶಮೀ, ನಕ್ಷತ್ರ : ಸ್ವಾತಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಡು ಹೇಳಿದ ಕಥೆ, ರಚನೆ– ಶ್ರೀನಿವಾಸ ಪ್ರಸಾದ್, ಪ್ರಸ್ತುತಿ–ಮೈಸೂರು ಉಮೇಶ್, 6.50 ವನಮಹೋತ್ಸವ, ಪ್ರಾಯೋಜಕರು– ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 9.00 ರಾಗಲಹರಿ–ಕರ್ನಾಟಕ ಶಾಸ್ತ್ರೀಯ ಸಂಗೀತದ ರಾಗಗಳ ಚಿತ್ತಾರ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳುವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಡಾ.ಈಮನಿ ಶಂಕರಶಾಸ್ತ್ರಿ – ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.45 ಜನಪದಗೀತೆ–ಜಯಲಕ್ಷ್ಮಮ್ಮ ಮತ್ತು ಸಂಗಡಿಗರು, 1.20 ಭಾವಗೀತೆ–ಕೆ.ಪಿ. ರೇವತಿ, 3.35 ಮಕ್ಕಳ ಮಂಟಪ– ಮುಖಾಮುಖಿ–ನಾನು ಮತ್ತು ಪರಿಸರ ಕುರಿತು ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ ಪರಿಸರ ಪ್ರೇಮಿ ಕೆ. ಮನು, 4.30 ನೆನಪಿನಂಗಳ–ಖ್ಯಾತ ಅಂಕಣಕಾರರಾದ ಡಾ. ಹಾ.ಮಾ.ನಾಯಕ್ ಅವರೊಂದಿಗೆ ಡಾ.ಎನ್.ಎಸ್.ತಾರಾನಾಥ್ ಅವರು ನಡೆಸಿದ್ದ ಸಂವಾದ, ಪ್ರಸ್ತುತಿ– ಎಸ್. ಲಕ್ಷ್ಮೀನಾರಾಯಣ, 6.50 ಕೃಷಿರಂಗ–ಕಿಸಾನ್‌ವಾಣಿ, ತೋರಣ ಹೂರಣ – ಸಾಪ್ತಾಹಿಕ ಸರಣಿ ಕಾರ್ಯಕ್ರಮ, 9.00 ಲಾಕ್‌ಡೌನ್–ಕಥಾನಾಟಕ. ಲಾಕ್‌ಡೌನ್ ಕಥೆಗಳನ್ನಾಧರಿಸಿದ ಸರಣಿ, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 9.15 ವಿಶ್ವವಿದ್ಯಾಲಯ–ಭಾರತೀಯ ಪರಿಕಲ್ಪನೆ, ಪ್ರೊ.ಆರ್. ಪ್ರದೀಪ್ ಕುಮಾರ್ ದೀಕ್ಷಿತ್ ಅವರೊಡನೆ ಸಂದರ್ಶನ, 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ರತನ್ ಮೋಹನ್ ಶರ್ಮ–ಹಾಡುಗಾರಿಕೆ, 11.00 ಸವಿನೆನಪು

■ **ಮೈಸೂರು ಹಿರಿಯರ ಕನಸಿನ ವೇದಿಕೆ :** 40 ವರ್ಷ ಮೇಲ್ಪಟ್ಟವರಿಗಾಗಿ ಹಾಡುಗಾರಿಕೆ ಕಾರ್ಯಕ್ರಮ, ಸ್ಥಳ : ರಾಮಕೃಷ್ಣನಗರ ಚರ್ಚ್, ಲಿಂಗಾಂಬುಧಿ ಪಾಳ್ಯ, ಬೆಳಗ್ಗೆ 8 ರಿಂದ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗುಜರಾತ್ ಕರಕುಶಲ ಮೇಳ–2022, ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆವರೆಗೆ.

■ **ನ ಭೂತೋ ನ ಭವಿಷ್ಯತಿ ಟೆಕ್ ಪ್ರೈವೇಟ್ ಲಿಮಿಟೆಡ್ :** ಇವಿ–ಕಾರ್ಟ್ ತ್ರಿಚಕ್ರ ವಾಹನ ಬಿಡುಗಡೆ ಸಮಾರಂಭ, ಉದ್ಘಾಟನೆ : ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ಬೆಳಗ್ಗೆ 9ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಮಹಿಳಾ ಉದ್ಯಮಿಗಳ ವಸ್ತು ಪ್ರದರ್ಶನ ಮತ್ತು ಮಾರಾಟ, ಸ್ಥಳ: ಕ್ರೀಡಾ ಸಭಾಂಗಣ, ಕರ್ನಾಟಕ ರಾಜ್ಯ ಮುಕ್ತ ವಿವಿ, ಬೆಳಗ್ಗೆ 9 ರಿಂದ.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೊಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ರವರೆಗೆ.

■ **ತರಳಬಾಳು ಪದವಿಪೂರ್ವ ಕಾಲೇಜು :** ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಟಾಪರ್ಸ್‌ಗೆ ಸನ್ಮಾನ ಮತ್ತು ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಶ್ರೀ ಬಸವೇಶ್ವರ ಕೇಂದ್ರದ ಅಧ್ಯಕ್ಷ ಪ್ರೊ. ಚಂದ್ರಶೇಖರಯ್ಯ, ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ. ಜಿ.ಆರ್. ಶಿವಮೂರ್ತಿ, ತರಳಬಾಳು ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿ.ಆನಂದಪ್ಪ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಡಿ. ನಾಗೇಂದ್ರಪ್ಪ, ಸ್ಥಳ: ಕಾಲೇಜು ಸೆಲ್ಲಾರ್, ಬೆಳಗ್ಗೆ 10ಕ್ಕೆ.

■ **ಮೈಸೂರ್ ಸೈನ್ಸ್ ಫೌಂಡೇಷನ್, ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿಪೂರ್ವ ಕಾಲೇಜು :** ದಶಮಾನೋತ್ಸವ ಸಂಭ್ರಮ, ಸೈನ್ಸ್ ಎಕ್ಸಿಬಿಷನ್, ಉದ್ಘಾಟನೆ : ಇಸ್ರೋ ವಿಶ್ರಾಂತ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ಅಧ್ಯಕ್ಷತೆ : ಮೈಸೂರ್ ಸೈನ್ಸ್ ಫೌಂಡೇಷನ್ ಅಧ್ಯಕ್ಷ ಸಿ. ಕೃಷ್ಣೇಗೌಡ, ಮುಖ್ಯ ಅತಿಥಿಗಳು : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಇಸ್ರೋ ವಿಶ್ರಾಂತ ವಿಜ್ಞಾನಿ ಸಿ.ಡಿ. ಪ್ರಸಾದ್, ಸಾರ್ವಜನಿಕ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಭಾರತಿ, ಸ್ಥಳ: ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿಪೂರ್ವ ಕಾಲೇಜು, ವಿಜಯನಗರ, ಬೆಳಗ್ಗೆ 10ಕ್ಕೆ.

■ **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಔಪಾಸನೆ ಉಯ್ಯಾಲೋತ್ಸವ, ಸ್ಥಳ: ಅರಮನೆ ಆವರಣದಲ್ಲಿರುವ ಕೋಟೆ ತ್ರಿಣೇಶ್ವರ ದೇವಾಲಯ.

■ **ಡಾ. ಮೈಲಹಳ್ಳಿ ರೇವಣ್ಣ ಅಭಿನಂದನಾ ಸಮಿತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ :** ಡಾ. ಮೈಲಹಳ್ಳಿ ರೇವಣ್ಣ ಅವರ ಅಭಿನಂದನಾ ಸಮಾರಂಭ ಹಾಗೂ ಕಾಲುದಾರಿಯ ಮೈಲುಗಲ್ಲು ಗ್ರಂಥ ಬಿಡುಗಡೆ, ಗ್ರಂಥ ಬಿಡುಗಡೆ : ಸಾಹಿತಿ ಡಾ. ಅರವಿಂದ ಮಾಲಗತ್ತಿ, ಕೃತಿ ಕುರಿತು ಮಾತನಾಡುವವರು : ಜಾನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಅಭಿನಂದನಾ ನುಡಿ : ಜಾನಪದ ವಿದ್ವಾಂಸ ಡಾ. ಕೆ.ಆರ್. ದುರ್ಗಾದಾಸ್, ಮುಖ್ಯ ಅತಿಥಿಗಳು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಡಾ. ವಿಜಯಕುಮಾರಿ ಎಸ್. ಕರಿಕಲ್, ಉಪಸ್ಥಿತರು : ಶಾ.ಮಂ. ಕೃಷ್ಣರಾಯ, ಅಧ್ಯಕ್ಷತೆ : ಜಾನಪದ ವಿದ್ವಾಂಸ ಡಾ. ಡಿ.ಕೆ. ರಾಜೇಂದ್ರ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ, ತಿಂಗಳ ಸಾಧಕರು 75 ವಸಂತ ಕಂಡ ನೃತ್ಯಗುರು ಕೇಶವ, ಮುಖ್ಯ ಅತಿಥಿಗಳು : ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರದ ಸಂಸ್ಥಾಪಕರಾದ ಡಾ. ಕೃಪಾ ಫಡ್ಕೆ, ಅಧ್ಯಕ್ಷತೆ : ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ವಿಶೇಷ ಆಹ್ವಾನಿತರು : ಪಿಟೀಲು ವಾದಕ ಜಿ.ಆರ್. ರಾಘವೇಂದ್ರರಾವ್, ತಬಲ ವಾದಕ ಆರ್. ದಾಸಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಲಯನ್ಸ್ ಕ್ಲಬ್ ಆಫ್ ಮೈಸೂರು ಜಯಲಕ್ಷ್ಮಿಪುರಂ :** ಪದಗ್ರಹಣ ಸಮಾರಂಭ, ಪದಗ್ರಹಣ ಅಧಿಕಾರಿ : ಸುರೇಶ್ ರಾಮು, ಲಯನ್ಸ್ ಕ್ಲಬ್ ಆಫ್ ಬೆಂಗಳೂರು ನಂದಿ ನೂತನ ಕ್ಲಬ್ ಉದ್ಘಾಟನೆ : ಲಯನ್ ಕೆ. ದೇವೇಗೌಡ, ಗೌರವ ಅತಿಥಿಗಳು : ಆರ್ಕಿಟೆಕ್ಟ್ ಪಾರ್ವತಿ ರಾಮಕೃಷ್ಣ, ಅಧ್ಯಕ್ಷತೆ : ಅಧ್ಯಕ್ಷ ಜೆ. ರಾಧಾಕೃಷ್ಣ, ಸ್ಥಳ: ದಿ ರೂಸ್ಟ್, ಹಿನಕಲ್, ಬೆಳಗ್ಗೆ 11ಕ್ಕೆ.

■ **ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೆನ್ಷನರ್ಸ್ ಕಮ್ಯೂನ್ :** ರಜತ ಮಹೋತ್ಸವ ಸಮಾರಂಭ, ಮೈಸೂರು ಬ್ಯಾಂಕ್ ವಿಶ್ರಾಂತಿ ಗೃಹ ಉದ್ಘಾಟನೆ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ. ದೇವೇಗೌಡ, ಎಲ್. ನಾಗೇಂದ್ರ, ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಉಪ ಪ್ರಧಾನ ವ್ಯವಸ್ಥಾಪಕರಾದ ಎಂ. ಅರುಣಗಿರಿ, ರಾಜೇಶ್ ಕುಮಾರ್ ಚೌಧರಿ, ಟಿ. ಶಿವಪ್ರಕಾಶ್, ಅಧ್ಯಕ್ಷತೆ : ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೆನ್ಷನರ್ಸ್ ಕಮ್ಯೂನ್ ಅಧ್ಯಕ್ಷ ಜಿ.ಹೆಚ್. ಹುಚ್ಚಪ್ಪ, ಸ್ಥಳ: ಐಶ್ವರ್ಯ ಪಾರ್ವತಿ ಬಡಾವಣೆ, ಬೋಗಾಧಿ–ಗದ್ದಿಗೆ ಮುಖ್ಯ ರಸ್ತೆ, ಬೆಳಗ್ಗೆ 11ಕ್ಕೆ, ರಜತ ಮಹೋತ್ಸವ ಸಮಾರಂಭ, ಸ್ಥಳ: ಬೋಗಾದಿ ಬಸವೇಶ್ವರ ಸಮುದಾಯ ಭವನ, ಬೆಳಗ್ಗೆ 11.30ಕ್ಕೆ.

■ **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಮತ್ತು ಜಿಲ್ಲೆ :** ಪ್ರಭುಚನ್ನಬಸವ ಸ್ವಾಮೀಜಿ (ಅಥಣೀಶ) ವಿರಚಿತ ಮಹಾತ್ಮರ ಚರಿತಾಮೃತ ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿ ಲೋಕಾರ್ಪಣೆ : ಸಾಹಿತಿ ವೀರಭದ್ರಪ್ಪ, ಕೃತಿ ಕುರಿತು ಮಾತನಾಡುವವರು : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಎಂ.ಎನ್. ನಂದೀಶ್ ಹಂಚೆ, ಉಪಸ್ಥಿತರು : ಪ್ರಭುಚನ್ನಬಸವ ಸ್ವಾಮೀಜಿ, ಎಸ್. ಷಡಕ್ಷರಿ, ಸ್ಥಳ: ಶ್ರೀ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಪಕ್ಕ, ಎಂ.ಜಿ. ರಸ್ತೆ, ಬೆಳಗ್ಗೆ 11ಕ್ಕೆ.

■ **ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ :** ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜದ ವಾರ್ಷಿಕೋತ್ಸವ ಮತ್ತು ಶಿವರಾತ್ರಿ ರಾಜೇಂದ್ರ ವೈಭವ ನೃತ್ಯ ರೂಪಕ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಶಿವರಾತ್ರಿ ರಾಜೇಂದ್ರ ವೈಭವ ನೃತ್ಯರೂಪಕ ಚುಟುಕು ಕೃತಿ ಲೋಕಾರ್ಪಣೆ : ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ : ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ತೋಂಟದಾರ್ಯ, ಅಧ್ಯಕ್ಷತೆ : ಡಾ. ಎಂ.ಜಿ.ಆರ್. ಅರಸ್, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ರತ್ನ ಹಾಲಪ್ಪಗೌಡ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು ಹಾಸ್ಟೆಲ್ ಆವರಣ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾಂಸರಾದ ಪಂಡಿತ್ ಖೇಡಾ ವೇದವ್ಯಾಸ ಚಾರ್ಯರಿಂದ ಶ್ರೀ ವಾದಿರಾಜ ಗುರುಗಳ ವಿರಚಿತ 'ಶ್ರೀ ರುಕ್ಮಿಣೀಶ ವಿಜಯ' ಕುರಿತು ವಿಶೇಷ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಕಲಾಶ್ರೀ ಮ್ಯೂಸಿಕಲ್ ಟ್ರಸ್ಟ್, ಮಂಡ್ಯ :** ಹಳೆಯ ಕನ್ನಡ ಮಧುರ ಗೀತೆಗಳ ನಿನಾದ, ಮುಖ್ಯ ಅತಿಥಿಗಳು : ಕೆ. ಕೃಷ್ಣೇಗೌಡ, ಎನ್. ಸುಬ್ರಮಣ್ಯ, ವಿಜಯರಾಮೇಗೌಡ, ಕೆ. ರಘುರಾಂ ವಾಜಪೇಯಿ, ಸ್ಥಳ: ಪುರಭವನ, ಸಂಜೆ 5ಕ್ಕೆ.

■ **ಫೋರಂ ಫಾರ್ ಹ್ಯೂಮನ್ ರೈಟ್ಸ್ ಅಂಡ್ ಆಂಟಿ ಕರಪ್ಷನ್ :** ಸಮಾಜ ಸುಧಾರಕರಿಗೆ ಅಭಿನಂದನಾ ಸಮಾರಂಭ, ಸ್ಥಳ: ಮುಲಕನಾಡು ಭವನ, ಹುಣಸೂರು ರಸ್ತೆ, ಸಂಜೆ 5 ರಿಂದ.

■ **ಮಂಥನ ಮೈಸೂರು :** ಲೇಖಕ, ಅಂಕಣಕಾರ ಸಂದೀಪ್ ಬಾಲಕೃಷ್ಣ ಅವರಿಂದ ಹಿಂದೂ ದೇವಾಲಯಗಳನ್ನು ಮರು ಪಡೆಯುವುದು : 360 ಡಿಗ್ರಿ ನೋಟ ಕುರಿತು ಉಪನ್ಯಾಸ, ಸ್ಥಳ: ಎಸ್.ಪಿ. ಭಟ್ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 5.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ವಿಪ್ರಾನಂದ ಅವರಿಂದ ಉಪನಿಷತ್ತುಗಳ ಸಾರ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಸಂಗೀತ ಕಾರ್ಯಕ್ರಮ, ವಿದುಷಿ ಕು. ಪೃಥ್ವಿ ಭಾಸ್ಕರ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಕೇಶವ್–ಪಿಟೀಲು, ವಿದ್ವಾನ್ ವಿಕ್ರಂ–ಮೃದಂಗ, ಸ್ಥಳ: ಶ್ರೀರಾಮ ಮಂದಿರ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

■ **ಅಂತರಾಷ್ಟ್ರೀಯ ಲಯನ್ಸ್ ಸಂಸ್ಥೆಗಳ ಒಕ್ಕೂಟ :** ನೂತನ ತಂಡದ ಅಧ್ಯಕ್ಷ ಬಿ.ಎಂ. ಮಲ್ಲಿಕಾರ್ಜುನ ಮತ್ತು ತಂಡಕ್ಕೆ ಪದಗ್ರಹಣ ಸಮಾರಂಭ, ಪ್ರತಿಜ್ಞಾ ಬೋಧನೆ : ಲಯನ್ ಡಾ. ನಾಗರಾಜ್ ವಿ. ಬೈರಿ, ಅಧ್ಯಕ್ಷತೆ : ನಿಕಟಪೂರ್ವ ಅಧ್ಯಕ್ಷ ಕೆ.ವಿ. ಪಾರ್ಥರಾಜು, ಪದಗ್ರಹಣ ಅಧ್ಯಕ್ಷತೆ : ಎಸ್.ಪಿ. ಮಹದೇವಸ್ವಾಮಿ, ಸ್ಥಳ: ಹೋಟೆಲ್ ಪೈ ವಿಸ್ತಾ ಮಿನಿ ಹಾಲ್, ಬಿ.ಎನ್. ರಸ್ತೆ, ಸಂಜೆ 6.30ಕ್ಕೆ.

■ **ಕುತೂಹಲಿ–ಕಲಾಸುರುಚಿ ಸೈನ್ಸ್ ಸಂಜೆ :** ಶುಭಾರಂಭ, ವೈದ್ಯ ಸಾಹಿತಿ ಡಾ. ನಾ. ಸೋಮೇಶ್ವರ, ಗುಂಪಿನಲ್ಲಿ ಗೋವಿಂದದ ಗಣಿತ : ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಸಹ ಪ್ರಾಧ್ಯಾಪಕ ಡಾ. ವಿಶ್ವೇಶ ಗುತ್ತಲ್, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 6.30ಕ್ಕೆ.

ಜಪಾನ್ ಮಾಜಿ ಪ್ರಧಾನಿ ಶಿಂಜೊ ಅಬೆ ಹತ್ಯೆ



ಟೋಕಿಯೊ, ಜು.8– ಜಪಾನ್ ಮಾಜಿ ಪ್ರಧಾನಮಂತ್ರಿ ಶಿಂಜೊ ಅಬೆ ಹತ್ಯೆಗೀಡಾಗಿದ್ದಾರೆ. ಜಪಾನಿನ ಮೇಲ್ಮನೆ ಚುನಾವಣೆ ಹಿನ್ನೆಲೆಯಲ್ಲಿ ಶುಕ್ರವಾರ ಬೆಳಗ್ಗೆ 11.30ರ ಸುಮಾರಿನಲ್ಲಿ ಪೂರ್ವ ಜಪಾನ್‌ನ ನಾರಾ ನಗರದಲ್ಲಿ ಪ್ರಚಾರ ಭಾಷಣ ಮಾಡುತ್ತಿದ್ದ ವೇಳೆ ದುಷ್ಕರ್ಮಿಯೋರ್ವ ಅವರ ಮೇಲೆ ಗುಂಡಿನ ದಾಳಿ ನಡೆಸಿದ್ದ.

ಇದರಿಂದ ಅವರ ಕುತ್ತಿಗೆ, ಎದೆ ಭಾಗದಲ್ಲಿ ಗುಂಡು ಹೊಕ್ಕಿ ತೀವ್ರ ರಕ್ತಸ್ರಾವ ವಾಗಿದ್ದು, ಹೃದಯ ಸ್ತಂಭನಕ್ಕೊಳಗಾಗಿದ್ದ ಶಿಂಜೊ ಅಬೆಯವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ಜಪಾನ್‌ನಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ಪ್ರಧಾನಮಂತ್ರಿ ಅಬೆ 2006–07 ಮತ್ತು 2012–20 ರವರೆಗೆ ಎರಡು ಬಾರಿ ಪ್ರಧಾನಿಯಾಗಿದ್ದರು. ಆರೋಗ್ಯ ಕಾರಣಗಳನ್ನು ಉಲ್ಲೇಖಿಸಿ 2020ರಲ್ಲಿ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಅವರ ನಂತರ ಯೋಶಿಹಿಡೆ ಸುಗಾ ಮತ್ತು ನಂತರ ಫ್ಯೂಮಿಯೊ ಕಿಶಿಡಾ ಅವರು ಅಧಿಕಾರ ವಹಿಸಿಕೊಂಡರು. ಅಬೆ ಅವರು ಭಾಷಣ ಮಾಡುತ್ತಿದ್ದ ವೇಳೆ ಅವರ ಹಿಂದೆಯೇ ನಿಂತಿದ್ದ 41 ವರ್ಷದ ವ್ಯಕ್ತಿ ಏಕಾಏಕಿ ಅವರ ಬೆನ್ನಿಗೆ ಗುಂಡು ಹಾರಿಸಿದ್ದಾನೆ. ಆಗ ಅವರು ತಿರುಗಿ ನೋಡುತ್ತಿದ್ದಂತೆಯೇ ಎದೆ ಭಾಗಕ್ಕೆ ಮತ್ತೊಂದು ಗುಂಡು ಹಾರಿಸಿದ್ದಾನೆ. ತಕ್ಷಣವೇ ಪೊಲೀಸರು ಆತನನ್ನು ಬಂಧಿಸಿ, ಅಬೆ ಅವರನ್ನು ಆಸ್ಪತ್ರೆಗೆ ಸಾಗಿಸಿದರು. ಜಪಾನ್ ಪ್ರಧಾನಿಯನ್ನು ಹತ್ಯೆ ಮಾಡಿದ ವ್ಯಕ್ತಿಯನ್ನು ತುಸುಯಾ ಯಮಗಾಮಿ ಎಂದು ಗುರುತಿಸಲಾಗಿದ್ದು, ಈತ ಈ ಹಿಂದೆ ಅಬೆ ಅವರ ಸ್ವಯಂ ರಕ್ಷಣಾ ಪಡೆಯ ಸದಸ್ಯನಾಗಿದ್ದ. ಅಬೆ ವಿರುದ್ಧ ತೀವ್ರ ಅಸಮಾಧಾನ ಹೊಂದಿದ್ದ ಈತ ತಾನೇ ಸಿದ್ಧಪಡಿಸಿದ ಬಂದೂಕಿನಿಂದ ಅಬೆ ಅವರನ್ನು ಹತ್ಯೆ ಮಾಡಿದ್ದಾಗಿ ವಿಚಾರಣೆ ವೇಳೆ ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತದಲ್ಲಿ ಒಂದು ದಿನ ಶೋಕಾಚರಣೆ: ನಮ್ಮ ಪರಮ ಮಿತ್ರ ಜಪಾನ್ ಮಾಜಿ ಪ್ರಧಾನಿ ಶಿಂಜೊ ಅಬೆ ಅವರ ಗೌರವಾರ್ಥ ನಾಳೆ (ಜು. 14) ಒಂದು ದಿನ ದೇಶಾದ್ಯಂತ ಶೋಕಾಚರಣೆ ಮಾಡಲಾಗುವುದು ಎಂದು ಪ್ರಧಾನಿ ಮೋದಿ ಘೋಷಿಸಿದ್ದಾರೆ. ಈ ವೇಳೆ ರಾಷ್ಟ್ರ ಧ್ವಜ ಅರ್ಧಕ್ಕೆ ಇಳಿಸಲಾಗುತ್ತದೆ.

ಭಾರತದಲ್ಲಿ ಒಂದು ದಿನ ಶೋಕಾಚರಣೆ

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಅಡಿ www.eproc.karnataka.gov.in ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ ಸಂ	ಟೆಂಡರ್ ಪ್ರಕಟಣೆ ಸಂಖ್ಯೆ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	100-291/MYMUL/PUR/Consultant/2022	ಮೈಸೂರು ಹಾಲು ಒಕ್ಕೂಟದಲ್ಲಿ UHT ಘಟಕ ಸ್ಥಾಪಿಸುವ ಸಂಬಂಧ ತಾಂತ್ರಿಕ ಯೋಜನೆಗೆ ಸಿವಿಲ್/ಮೆಕ್ಯಾನಿಕಲ್/ಎಲೆಕ್ಟ್ರಿಕಲ್ ಸಮಾಲೋಚಕರ ಸೇವೆ ಪಡೆಯುವ ಬಗ್ಗೆ.	27.07.2022 ಸಂಜೆ 5.00 ಗಂಟೆಯವರೆಗೆ
2	KMF/2022-23/IND10165 (ಅಲ್ಪಾವಧಿ ಟೆಂಡರ್)	ಆಗ್ರೋಬೇಸ್ಡ್ ಬ್ರಿಕೆಟ್ಸ್ ಅನ್ನು ವಾರ್ಷಿಕ ದರ ಆಧಾರದ ಮೇಲೆ ಖರೀದಿಸುವ ಬಗ್ಗೆ.	16.07.2022 ಸಂಜೆ 5.00 ಗಂಟೆಯವರೆಗೆ
3	100-291/MYMUL/PUR/MKT/DTC/CMS/2022	ಎರಡು ವರ್ಷಗಳ ಅವಧಿಗೆ ಕಾರು, ಹಾಲು ವಿತರಣಾ ವಾಹನಗಳು, ಪ್ರದರ್ಶನ (ಡಿಸ್ಪ್ಲೆ) ವಾಹನಗಳು ಹಾಗೂ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಕೆನೆ ಭರಿತ ಹಾಲಿನ ಪುಡಿಯ ಪೂರೈಕೆಗಾಗಿ ವಿತರಣಾ ವಾಹನಗಳನ್ನು ಗುತ್ತಿಗೆ ವಹಿಸಿಕೊಡುವ ಬಗ್ಗೆ.	03.08.2022 ಸಂಜೆ 5.00 ಗಂಟೆಯವರೆಗೆ
4	100/MYMUL/PURR/P&I-PTC/E-PROC/2202	[illegible]	06.08.2022 ಸಂಜೆ 5.00 ಗಂಟೆಯವರೆಗೆ
5	KMF/2022-23/IND10063	ಗೀ ಕೊಠಡಿಗೆ ಹುಡ್ ಡಕ್ಟ್ ಮಾಡಿಫಿಕೇಶನ್ ಮತ್ತು ಫ್ರೆಶ್ ಏರ್ ಯ್ಯೂನಿಟ್ ಅನ್ನು ಖರೀದಿಸಿ, ಅಳವಡಿಸಿ, ಸರಬರಾಜು ಮಾಡುವ ಬಗ್ಗೆ.	18.07.2022 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (6366430803 / 9845284700) ಮೂಲಕ ಸಂಪರ್ಕಿಸಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ನಂ.MYS-LBPAS-13812/21-22/BP ದಿನಾಂಕ:06.07.2022

ಸಾರ್ವಜನಿಕ ಪ್ರಕಟಣೆ

ಮೈಸೂರು ನಗರ, ಸಾತಗಳ್ಳಿ ಬಡಾವಣೆ, 1ನೇ ಹಂತ, ಸ್ವತ್ತಿನ ಸಂಖ್ಯೆ: ಸಿಎ–02 ರಲ್ಲಿ ಹೊಸದಾಗಿ ಧಾರ್ಮಿಕ ಉದ್ದೇಶದ ಕಟ್ಟಡವನ್ನು ನಿರ್ಮಿಸಲು ರಹದಾರಿ ಕೋರಿ ಅಧ್ಯಕ್ಷರು, ದಿ ಮೈಸೂರು ಡಯೋಸೀಸಿಷನ್ ಸೊಸೈಟಿ (ರಿ) ರವರು ಮೈಸೂರು ಮಹಾನಗರ ಪಾಲಿಕೆಗೆ ಅರ್ಜಿ ಸಲ್ಲಿಸಿರುತ್ತಾರೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 13–01–2021 ರಂದು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ಪ್ರಶ್ನಿತ ಸ್ವತ್ತಿನ ಪೂರ್ವಕ್ಕೆ 9.00 ಮೀ., ಉತ್ತರಕ್ಕೆ 15.00 ಮೀ ಮತ್ತು ಪಶ್ಚಿಮಕ್ಕೆ 12.00 ಮೀ ಅಗಲದ ರಸ್ತೆಯ ಸಂಪರ್ಕವನ್ನು ಹೊಂದಿರುತ್ತದೆ. ಸದರಿ ಧಾರ್ಮಿಕ ಕಟ್ಟಡ ನಿರ್ಮಾಣದ ಬಗ್ಗೆ ಯಾವುದೇ ಆಕ್ಷೇಪಣೆಗಳು / ಸಲಹೆಗಳಿದ್ದಲ್ಲಿ ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನದೊಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬಹುದಾಗಿದೆ.

ಸಹಿ/– ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನೈಋತ್ಯ ರೈಲ್ವೆ
ಇ–ಸಿಂಗಲ್ ಟೆಂಡರ್ ಪ್ರಕಟಣೆ ಸಂ. 20/ಎಂವೈಎಸ್/2022
ದಿನಾಂಕ : 04–07–2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು, ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ	ಕೆಲಸದ ಹೆಸರು	ಅಂದಾಜು ಮೌಲ್ಯ
1	ಮೈಸೂರು ವಿಭಾಗ : ಡಿಜಿಟಲ್ ಅಲ್ಟ್ರಾಸೋನಿಕ್ ಸಿಂಗಲ್ ರೈಲ್ ಟೆಸ್ಟರ್, ಮಾಡೆಲ್ : ಎಸ್‌ಆರ್‌ಟಿ–511ಡಿ/0189, ಪಾರಸ್ ನಿರ್ಮಿತ ಇದರ ವಾರ್ಷಿಕ ನಿರ್ವಹಣಾ ಗುತ್ತಿಗೆ.	ರೂ. 1,96,600/–
2	ಮೈಸೂರು ವಿಭಾಗ : ಡಿಜಿಟಲ್ ಅಲ್ಟ್ರಾಸೋನಿಕ್ ಡಬಲ್ ರೈಲ್ ಟೆಸ್ಟರ್, ಮಾಡೆಲ್ : ರೈಲ್ ಸ್ಕ್ಯಾನ್–200ಡಬ್ಲ್ಯು, ಡಿಆರ್–0124/0318, ಮಾಡ್‌ಸೋನಿಕ್ ನಿರ್ಮಿತ ಇದರ ವಾರ್ಷಿಕ ನಿರ್ವಹಣಾ ಗುತ್ತಿಗೆ.	ರೂ. 1,06,082/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 26–07–2022ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಹಿರಿಯ ವಿಭಾಗೀಯ ಇಂಜಿನಿಯರ್ / ಸಮನ್ವಯ
ಪಿಯುಬಿ/211/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23 ಮೈಸೂರು
S.W.Railways SWRRLY SWRRLY

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು ಅನುಸೂಚಿ ಸ್ವತ್ತಿನ ಮಾಲೀಕರಾದ ಶ್ರೀ.ಕೆ.ಎ. ಗಣಪತಿರವರ ಮಗ ಶ್ರೀ.ಗಿರೀಶ್.ಕೆ.ಜಿ. ಹಾಗೂ ಲೇಟ್.ಕೆ.ಎಮ್. ಜೋಯಪ್ಪ ರವರ ಮಗ ಶ್ರೀ.ಕೆ.ಶರೀನ್ ಮುತ್ತಣ್ಣ ರವರಿಂದ ಅನುಸೂಚಿ ಸ್ವತ್ತನ್ನು ಖರೀದಿಸುವ ಈರಾದೆಯಿಂದ ಕ್ರಯ ಪತ್ರವನ್ನು ಮಾಡಿಕೊಳ್ಳಲು ಮುಂದಾಗಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ ಸಂಬಂಧ ಯಾರಾದರು ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಯಾರಿಗಾದರು, ಹಕ್ಕು, ಆಸಕ್ತಿ, ಕ್ಲೈಮ್. ಆಧಾರ, ಸಾಲ ಬಾಕಿ, ಇತರೆ ತಂಟೆ ತಕಾರರು ಇದ್ದಲ್ಲಿ, ಅವರು ಖುದ್ದಾಗಿ ಸದರಿ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 15 (ಹದಿನೈದು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಕ್ಲೈಮ್. ಆಧಾರ, ಸಾಲ ಬಾಕಿ, ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಕರಾರು ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

ಅನುಸೂಚಿ ಸ್ವತ್ತಿನ ವಿವರ ಮೈಸೂರು ಜಿಲ್ಲೆ, ಹುಣಸೂರು ಬ್ಲಾಕ್ ದೊಡ್ಡಹೆಜ್ಜೂರು ಗ್ರಾಮ ಪಂಚಾಯಿತಿ, ಭರತವಾಡಿ ಗ್ರಾಮದ ಸ್ವತ್ತಿನ ಸಂಖ್ಯೆ : 152200203015020009 ಗ್ರಾಮ ಪಂಚಾಯಿತಿ ಸ್ವತ್ತಿನ ಸಂಖ್ಯೆ : 283/301 ರಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು ಇವರಿಂದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಣಿಜ್ಯ ಉದ್ದೇಶಕ್ಕಾಗಿ ದಿನಾಂಕ 15.12.2008ರಂದು ನಂ: ಎಎಲೆನ್ (2) ಸಿ.ಆರ್.212/2008–09 ರಂತೆ ಅನುಮೋದಿತ, ಪೂರ್ವ–ಪಶ್ಚಿಮ 74.18 ಮೀಟರ್ ಹಾಗು ಉತ್ತರ–ದಕ್ಷಿಣ 270.00 ಮೀಟರ್ ಒಟ್ಟು 20028.60 ಚದರ ಮೀಟರ್‌ಗಳುಳ್ಳ ವಾಣಿಜ್ಯ ನಿವೇಶನದ (ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು ಹನಗೂಡು ಹೋಬಳಿ ಭಾರತವಾಡಿ ಗ್ರಾಮದ ಹಳೆಯ ಸರ್ವೇ ಸಂಖ್ಯೆ: 58 ರಲ್ಲಿ 4 ಎಕರೆ 38 ಗುಂಟೆ) ಚಕ್ಕುಬಂದಿ. ಪೂರ್ವಕ್ಕೆ : ಶ್ರೀ.ಬಾಲಕೃಷ್ಣರವರ ಜಮೀನು, ಪಶ್ಚಿಮಕ್ಕೆ : ಶ್ರೀ.ರಾಜು ರವರ ಜಮೀನು, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ರಸ್ತೆ

sd/- Chandrashekar H.N
Advocate & Legal Consultant
Chambers:# 75/B, 1st Floor, 5th Main
Kuvempunagar, Mysuru-570023,
Karnataka

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕನನೀಸ ಮತ್ತು ಒಳಚರಂಡಿ ಮಂಡಳಿ, ವಿಭಾಗ ಕಛೇರಿ,
ಜಲಭವನ, 1ನೇ ಮಹಡಿ, ಪಿ–4, 10ನೇ ಮುಖ್ಯ ರಸ್ತೆ, 3ನೇ ಅಡ್ಡ ರಸ್ತೆ, ಸರಸ್ವತಿಪುರಂ, ಮೈಸೂರು–09.
ದೂರವಾಣಿ: 0821–2543552 ಇಮೇಲ್: kwbmysdiv@gmail.com

ಸಂ:ಕಜಮಂ/ಕಾಅ/ತಾಂತ್ರಿಕ/ಸಅ–1/827/2022–23 ದಿನಾಂಕ:04.07.2022

ಟೆಂಡರ್ ಅಧಿಸೂಚನೆ

ಈ ಕೆಳಕಂಡ ಕಾಮಗಾರಿಗಾಗಿ ಬಿಡ್ ದಾಖಲೆಯಲ್ಲಿ ವಿವರಿಸಿದ ಆರ್ಥಿಕ ಮತ್ತು ತಾಂತ್ರಿಕ ಅರ್ಹತೆಯ ಅಗತ್ಯತೆಗಳನ್ನು ತೃಪ್ತಿಕರವಾಗಿ ಪೂರೈಸಿರುವ ಸಂಸ್ಥೆ/ಗುತ್ತಿಗೆದಾರರುಗಳಿಂದ ಶೇಕಡವಾರು ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮೂಲಕ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ	ಬಿಡ್ ಭದ್ರತೆ (ರೂ)
1	ಟೆಂಡರ್ ಸಂಖ್ಯೆ: ಕಜಮಂ/ಕಾಅ/ತಾಂತ್ರಿಕ/ಸಅ–1/827/2022–23		
	2022–23ನೇ ಸಾಲಿನ ಜಲಭವನ ವಾರ್ಷಿಕ ನಿರ್ವಹಣೆಯಡಿ ಮೈಸೂರು ಜಲಭವನ ಕಟ್ಟಡಕ್ಕೆ ಸೆಕ್ಯುರಿಟಿ ಸೇವೆಗಳನ್ನು ಒದಗಿಸುವ ಕಾಮಗಾರಿ.	ರೂ.8,51,414.00	21,300/–
2	ಟೆಂಡರ್ ಸಂಖ್ಯೆ: ಕಜಮಂ/ಕಾಅ/ತಾಂತ್ರಿಕ/ಸಅ–1/828/2022–23		
	2022–23ನೇ ಸಾಲಿನ ಜಲಭವನ ವಾರ್ಷಿಕ ನಿರ್ವಹಣೆಯಡಿ ಮೈಸೂರು ಜಲಭವನ ಕಟ್ಟಡಕ್ಕೆ ಸ್ವಚ್ಛತಾಗಾರರನ್ನು, ಎಲೆಕ್ಟ್ರೀಷಿಯನ್ ಒಡಗಿಸುವುದು ಮತ್ತು ಸ್ವಚ್ಛತಾಗಾರಕ್ಕೆ ಬೇಕಾಗುವ ಸಾಮಾಗ್ರಿಗಳನ್ನು ಒದಗಿಸುವ ಕಾಮಗಾರಿ.	ರೂ.10,61,438.51	26,550/–
3	ಟೆಂಡರ್ ಸಂಖ್ಯೆ: ಕಜಮಂ/ಕಾಅ/ತಾಂತ್ರಿಕ/ಸಅ–1/829/2022–23		
	ಠೇವಣಿ ಕೊಡುಗೆ ಆಧಾರದಡಿ ಬಿಎನ್‌ಪಿಎಮ್‌ಐಪಿಲ್ ನೀರು ಸರಬರಾಜು ಯೋಜನೆಯ ಪಂಪ್‌ಹೌಸ್‌ನಲ್ಲಿ ಜುಲೈ–2022 ರಿಂದ ಮಾರ್ಚ್–2023 ರವರೆಗೆ ವಾರ್ಷಿಕ ನಿರ್ವಹಣೆಯಡಿ ಹೊರಗುತ್ತಿಗೆ ನೌಕರರನ್ನು ಒದಗಿಸುವ ಕಾಮಗಾರಿ.	ರೂ.8,12,414.00	20,350/–
4	ಟೆಂಡರ್ ಸಂಖ್ಯೆ: ಕಜಮಂ/ಕಾಅ/ತಾಂತ್ರಿಕ/ಸಅ–2/831/2022–23		
	ಸಹಾಯಕ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಉಪ–ವಿಭಾಗ ಚಾಮರಾಜನಗರ ಕಛೇರಿಯಲ್ಲಿ ಜುಲೈ–2022 ರಿಂದ ಮಾರ್ಚ್–2023 ರವರೆಗೆ ಹೊರಗುತ್ತಿಗೆ ಆಧಾರದಲ್ಲಿ 1 ಸಂಖ್ಯೆ ಡೇಟಾ ಎಂಟ್ರಿ ಆಪರೇಟರ್‌ರನ್ನು ಪಡೆಯುವ ಕಾಮಗಾರಿ.	ರೂ.1,58,738.00	4,000/–

ಟೆಂಡರ್ ಅವಧಿ: 9 ತಿಂಗಳು, **ಟೆಂಡರ್ ಸಂಸ್ಕರಣ ಶುಲ್ಕ:** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಂತೆ.
ಟೆಂಡರ್ ಕಾರ್ಯಸೂಚಿ: 1) ಟೆಂಡರ್ ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 18–07–2022 ರ 5:30 ಗಂಟೆಯುವರೆಗೆ. 2) ಟೆಂಡರ್‌ನ್ನು ತೆರೆಯುವ ದಿನಾಂಕ: 20–07–2022 ರಂದು ಬೆಳಿಗ್ಗೆ 11.00 ರ ಮೇಲೆ.
ಹೆಚ್ಚಿನ ವಿವರಗಳಿಗಾಗಿ ಕೆಳ ಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರು,
ಕ.ನ.ನೀ.ಸ ಮತ್ತು ಒಳಚರಂಡಿ ಮಂಡಳಿ, ವಿಭಾಗ, ಮೈಸೂರು
DIPR/MYS/KAVITA/220/2022-23

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಹುಣಸೂರು ವಿಭಾಗ, ಹುಣಸೂರು.


ಕರ್ನಾಟಕ ಅರಣ್ಯ ಕಾಯ್ದೆ–1963 ರಡಿ ಉದ್ಘೋಷಣೆಗೊಂಡ ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು, ಅರೇನಹಳ್ಳಿ ಗ್ರಾಮ.

ಹುಣಸೂರು: ದಿ: 04.07.2022 – ಕರ್ನಾಟಕ ಅರಣ್ಯ ಕಾಯ್ದೆ– 1963 ಕಲಂ 4ರಡಿ ಹುಣಸೂರು ಪ್ರಾದೇಶಿಕ ವಿಭಾಗದ ವ್ಯಾಪ್ತಿಯ ಪಿರಿಯಾಪಟ್ಟಣ ತಾಲ್ಲೋಕಿನ/ವಲಯದ, ರಾವಂದೂರು ಹೋಬಳಿ ಅರೇನಹಳ್ಳಿ ಗ್ರಾಮದ ಸರ್ವೇ ನಂ. 105ರಲ್ಲಿ ಒಟ್ಟು 6.81 ಹೆಕ್ಟೇರ್ ಪ್ರದೇಶವು ಅಧಿಸೂಚನೆಯಾಗಿರುತ್ತದೆ.

ಕರ್ನಾಟಕ ಅರಣ್ಯ ಕಾಯ್ದೆ–1963 ರಡಿ 5ನೇ ಪ್ರಕರಣದಿಂದ 17ನೇ ಪ್ರಕರಣದ ಅನ್ವಯದ ವಿಚಾರಣೆಯನ್ನು ನಡೆಸಿ ಅಧಿಸೂಚಿತ ಅರಣ್ಯ ಪ್ರದೇಶವನ್ನು ಅಂತಿಮಗೊಳಿಸಲು ಅರಣ್ಯ ವ್ಯವಸ್ಥಾಪನಾಧಿಕಾರಿಗಳು, ಹುಣಸೂರು ವಿಭಾಗ ರವರು ಅಧಿನಿಯಮ 5 ರಡಿಯಲ್ಲಿ ಸಾರ್ವಜನಿಕರ ಗಮನಕ್ಕಾಗಿ ದಿ: 04.07.2022 ರಂದು ಉದ್ಘೋಷಣೆಯನ್ನು ಹೊರಡಿಸಿರುತ್ತಾರೆ, ಈ ಅಧಿಸೂಚನೆಯ ಭೂಮಿಯಲ್ಲಿ ಯಾವ ಒಡೆತನದ ಉತ್ತರಾಧಿಕಾರದ ಹಕ್ಕು ಅನುದಾನ ಮಾರಾಟವು ಪಡೆದಿದ್ದ ವ್ಯಕ್ತಿಯೊಂದಿಗೆ ಅಥವಾ ಸರ್ಕಾರದೊಂದಿಗೆ ಒಡೆತನದ ಅಧಿಕಾರವನ್ನು ನಡೆಸಬಾರದೆಂದು ಸಂಬಂಧಪಟ್ಟ ಜನರಿಗೆ ತಿಳಿಸಲಾಗಿದ್ದು, ಭೂಮಿಯ ಮೇಲೆ ಮರಗಳನ್ನು ಬೆಳೆಸುವುದಾಗಲೀ, ಹೊಸ ಮನೆಗಳನ್ನು ಕಟ್ಟುವುದಾಗಲಿ ಮಾಡಬಾರದು.

ವ್ಯವಸಾಯಕ್ಕಾಗಿ ಅಥವಾ ಮತ್ತಾವುದೇ ಉದ್ದೇಶಕ್ಕಾಗಿ ಈ ಭೂಮಿಯ ಪ್ರದೇಶವನ್ನು ಸ್ವಚ್ಛ ಮಾಡಬಾರದು, ಈ ಭೂಮಿಯ ಮೇಲಿರುವ ಮರಗಳನ್ನು ಉತ್ಪಾದನೆ ಅಥವಾ ವ್ಯಾಪಾರದ ಸಲುವಾಗಿ ಕಡಿಯಬಾರದು. ಈ ಜಮೀನಿನಲ್ಲಿ ರಾಜ್ಯ ಸರ್ಕಾರದ ಪರವಾನಗಿ ಇಲ್ಲದೇ ಪಟ್ಟಾವನ್ನಾಗಲೀ, ಒಡೆತನದ ಹಕ್ಕನ್ನಾಗಲೀ ಮಂಜೂರು ಮಾಡಬಾರದು. ಘೋಷಿಸಿದ ಜಮೀನಿನಲ್ಲಿ ಅಥವಾ ಯಾವುದೇ ಸೀಮಿತ ಭಾಗದಲ್ಲಿ ಯಾವುದೇ ಒಡೆತಹ, ಹಕ್ಕು ಅಥವಾ ಅರಣ್ಯ ಉತ್ಪನ್ನಗಳ ತಕರಾರನ್ನು ಸಿವಿಲ್ ಕೋರ್ಟ್ ವಿಚಾರಣೆ ನಡೆಸಲು ನಿಷೇಧಿಸಲಾಗಿದೆ. ಸಾರ್ವಜನಿಕರ ಗಮನಕ್ಕಾಗಿ ಈ ಉದ್ಘೋಷಣೆಯನ್ನು ಸಂಬಂಧಪಟ್ಟ ಗ್ರಾಮಪಂಚಾಯಿತಿ, ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದ ಕಂದಾಯ ಇಲಾಖೆಯ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳ ಕಾರ್ಯಲಯಗಳಲ್ಲಿ ವ್ಯಾಪಕವಾಗಿ ಪ್ರಚಾರಪಡಿಸಲಾಗಿದೆ. ದಿ: 04.07.2022 ರಂದಿನ ಸದರಿ ಈ ಉದ್ಘೋಷಣೆ ಪ್ರಕಟವಾದ ಮೂರು ತಿಂಗಳ ಒಳಗಾಗಿ ಮೇಲೆ ತಿಳಿಸಿರುವ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ಹಿತಾಶಕ್ತಿಯುಳ್ಳ ವ್ಯಕ್ತಿಗಳು ಯಾವುದೇ ತಕರಾರು ಅಥವಾ ಆಕ್ಷೇಪಣೆ ಇದ್ದಲ್ಲಿ, ಲಿಖಿತ ಅರ್ಜಿಯನ್ನು ಖುದ್ದಾಗಿ ಅಧಿಕೃತ ದಾಖಲಾತಿಗಳೊಂದಿಗೆ ಅರಣ್ಯ ವ್ಯವಸ್ಥಾಪನಾಧಿಕಾರಿಗಳು ಹುಣಸೂರು ಉಪವಿಭಾಗ, ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ಕಛೇರಿ ಆವರಣ, ಹುಣಸೂರು ವಿಭಾಗ ಇವರ ಸಮ್ಮುಖದಲ್ಲಿ ಮಂಡಿಸತಕ್ಕದ್ದು ಎಂದು ಹುಣಸೂರು ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಹುಣಸೂರು ವಿಭಾಗ, ಹುಣಸೂರು.
DIPR/DD-MYS/MCA/227/2022-23



ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ನಾನು ಕೊಟ್ಟ ಔಷಧ ಮುಗಿಯಿತಾ?"
ಗುಂಡ : ಇಲ್ಲ ಡಾಕ್ಟ್ರೇ
ಡಾಕ್ಟರ್ : ಯಾಕೆ?
ಗುಂಡ : ಔಷಧಿ ಬಾಟಲಿಯ ಮೇಲೆ ಯಾವಾಗಲೂ ಮುಚ್ಚಿಡಿ ಎಂದು ಬರೆದಿತ್ತು, ಅದಕ್ಕೆ ನಾನು ಔಷಧ ಬಾಟಲಿಯ ಮುಚ್ಚಳ ತೆಗಿಯಲೇ ಇಲ್ಲ!

ಮೈಸೂರು ಮಿತ್ರ

ಶನಿವಾರ, 9 ಜುಲೈ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಳ್ಳೆಯ ಕೆಲಸವನ್ನು ಮಾಡುವವನು ಯಾವತ್ತೂ ದುರ್ಗತಿ ಹೊಂದುವುದಿಲ್ಲ – ಭಗವದ್ಗೀತೆ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬಾಯಿ ಬಿಟ್ಟರೆ ಬಣ್ಣಗೇಡು

ನಿಮ್ಮ ಪತ್ರಗಳು

ರಸ್ತೆ ಡುಬ್ಬ ನಿರ್ಮಿಸಿ, ಅಪಾಯ ತಪ್ಪಿಸಿ



ಮಾನ್ಯರೆ,

ಮೈಸೂರಿನ ಉದಯಗಿರಿಯ ಮಹದೇವಪುರ ಜೋಡಿ ರಸ್ತೆಯಲ್ಲಿ ಇತ್ತೀಚಿಗೆ ರಸ್ತೆ ಅಗಲಿಕರಣ ಮಾಡಿ ಹೊಸದಾಗಿ ಡಾಂಬರ್ ಹಾಕಿದ್ದು, ಹಂಪ್ಸ್ ಹಾಕದೇ ಹಾಗೇ ಬಿಟ್ಟಿರುವುದರಿಂದ ಈ ರಸ್ತೆಯಲ್ಲಿ ವಾಹನ ಸವಾರರು ವೇಗವಾಗಿ ಚಲಿಸಲು ಆರಂಭಿಸಿದ್ದಾರೆ. ಇದರಿಂದ ಪೊಲೀಸ್ ಪಬ್ಲಿಕ್ ಶಾಲೆಯ ಮಕ್ಕಳಿಗೆ ಮತ್ತು ಪೋಷಕರಿಗೆ ತುಂಬಾ ತೊಂದರೆಯಾಗುತ್ತಿದೆ. ಈ ರಸ್ತೆಯಲ್ಲಿ ಪ್ರತಿದಿನ ಸಣ್ಣಪುಟ್ಟ ಅಪಘಾತಗಳು ಸರ್ವೆ ಸಾಮಾನ್ಯವಾಗಿ ಬಿಟ್ಟಿದೆ. ಇದರಿಂದ ಮಕ್ಕಳು ತುಂಬಾ ಭಯಭೀತರಾಗಿ ರಸ್ತೆ ದಾಟಬೇಕಾಗಿದೆ. ರಸ್ತೆಗೆ ಬ್ಯಾರಿಕೇಡ್ ಹಾಕಿದ್ದು, ಅದನ್ನು ವಾಹನ ಸವಾರರು ಬದಿಗೆ ತಳ್ಳಿ ವಾಹನವನ್ನು ವೇಗವಾಗಿ ಓಡಿಸುತ್ತಾರೆ. ಈ ಹಿಂದೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತರಿಗೂ ಮನವಿ ಸಲ್ಲಿಸಿದ್ದು, ಯಾವುದೇ ಪ್ರಯೋಜನವಾಗಿರುವುದಿಲ್ಲ. ಮತ್ತು ಮಹದೇವಪುರ ಜೋಡಿ ರಸ್ತೆಯಿಂದ ಜಲಪುರಿಗೆ ಹೋಗುವ ರಸ್ತೆಯಲ್ಲೂ ಸಹ ರಸ್ತೆ ಉಬ್ಬು ನಿರ್ಮಿಸಿ ಮುಂದೆ ಸಂಭವಿಸಬಹುದಾದ ಭಾರಿ ಅನಾಹುತವನ್ನು ತಡೆಗಟ್ಟಲು ಸಂಬಂಧಪಟ್ಟ ಅಧಿಕಾರಿಗಳು ಕ್ರಮಕೈಗೊಳ್ಳಬೇಕಾಗಿ ಮನವಿ.

–ಎಂ.ಕೆ. ಕಿರಣ್, ಟೆಲಿಕಾಂ ಕಾಲೋನಿ, ಮೈಸೂರು.

ಡಾ. ವಿರೇಂದ್ರ ಹೆಗಡೆ ರಾಜ್ಯಸಭೆಗೆ ನಾಮನಿರ್ದೇಶನ ಸ್ವಾಗತಾರ್ಹ



ಮಾನ್ಯರೆ,

ಎಂಟು ಶತಮಾನಗಳ ಇತಿಹಾಸ ಹೊಂದಿರುವ ಕರ್ನಾಟಕದ ಧಾರ್ಮಿಕ ಕ್ಷೇತ್ರ ಧರ್ಮಸ್ಥಳ, ನಾಡಿನ ಪುಣ್ಯ ಕ್ಷೇತ್ರ, ಸಮಾಜದ ಎಲ್ಲಾ ವರ್ಗದವರು ದರ್ಶನ ಪಡೆಯುವ ಧಾರ್ಮಿಕ ಕ್ಷೇತ್ರ. ಇಲ್ಲಿನ ಅನ್ನದಾನ ಜಗತ್ಪ್ರಸಿದ್ಧ. ವಿದ್ಯಾದಾನ, ಸಾಮೂಹಿಕ ವಿವಾಹದ ಮೂಲಕ ಸಮಾನತೆಯ, ಸಮಾಜಮುಖಿ ಕೆಲಸವನ್ನು ಮಾಡುತ್ತಿರುವುದರ ಜೊತೆಗೆ ರಾಜ್ಯಾದ್ಯಂತ ಆಧ್ಯಾತ್ಮಿಕ, ಶಿಕ್ಷಣ, ಆರೋಗ್ಯ ಮಹಿಳಾ ಸಂಘ ಸಂಸ್ಥೆಗಳ ಕ್ಷೇತ್ರಗಳಲ್ಲಿ ಮಹತ್ತರ ಕಾರ್ಯಗಳನ್ನು ಮಾಡಿ ರಾಜ್ಯದ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿರುವ ಧರ್ಮಸ್ಥಳ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗಡೆ ಅವರನ್ನು ರಾಜ್ಯಸಭೆಗೆ ನಾಮ ನಿರ್ದೇಶನ ಮಾಡಿರುವುದು ಸ್ವಾಗತಾರ್ಹ.

–ಕಂಗಾಣಿಸೋಮು ಪಿ ಸಿ, ಕ್ಯಾತಮಾರನಹಳ್ಳಿ ಮೈಸೂರು


'ಸೂತ್ರಧಾರ' ನಾಟಕ ರಾಜ್ಯದ ಎಲ್ಲೆಡೆ ಪ್ರದರ್ಶಿಸುವಂತಾಗಲಿ

ಮಾನ್ಯರೆ,

ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ವಿಶೇಷ ಘಟಕ ಯೋಜನೆಯಡಿ ಸರ್ವರಿಗೂ ಸಂವಿಧಾನ ಆಶಯದೊಂದಿಗೆ ಸಿದ್ಧಪಡಿಸಿದ "ಸೂತ್ರಧಾರ" ನಾಟಕ ಸರ್ಕಾರದ ಸೂಚನೆ ಮೇರೆಗೆ ಮೈಸೂರಿನ ರಂಗಾಯಣದಲ್ಲಿ ಕಳೆದ ಭಾನುವಾರ 50ನೇ ಪ್ರದರ್ಶನ ಏರ್ಪಡಿಸಲಾಗಿತ್ತು. ಬಾಲ್ಯದಿಂದಲೂ ಅಂಬೇಡ್ಕರ್ ಅವರ ಹೋರಾಟದ ಬದುಕು, ಅವರ ವಿಚಾರಧಾರೆಗಳನ್ನು ಓದಿ ತಿಳಿದಿರುವುದರಿಂದ ಸಾಕಷ್ಟು ಪ್ರಭಾವಕ್ಕೆ ಒಳಗಾಗಿರುವ ನನಗೆ ಸಂವಿಧಾನ ರಚನೆಯಲ್ಲಿ ಅವರ ಕಾರ್ಯ ವೈಖರಿಯ ಬಗ್ಗೆ ಬೆಳಕು ಚೆಲ್ಲುವ ಈ ನಾಟಕ ವೀಕ್ಷಿಸಲು ಅವಕಾಶ ಸಿಕ್ಕಿತ್ತು. ನಾನು, ನನ್ನ ಪತ್ನಿ ಸಮೇತ ರಂಗಾಯಣಕ್ಕೆ ಕುತೂಹಲದಿಂದ ಹೋಗಿದ್ದೆ. "ದೇಶಮಂಟೆ ಮಟ್ಟಿ ಕಾದು. ದೇಶಮಂಟೆ ಮನುಷ್ಯುಲು" ಎಂಬ ಮಾತಿನೊಂದಿಗೆ ಆರಂಭವಾಗುವ ಈ ಕಥೆ ಸ್ವಾಂತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯ ನಂತರ, ಅನಿಷ್ಟ ಪದ್ಧತಿಯಾದ ಜಾತೀಯತೆ, ಅಸಮಾನತೆ, ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಅತ್ಯಾಚಾರ, ಭಾರತ–ಪಾಕ್ ವಿಭಜನೆ, ಮಹಮದ್ ಆಲಿ ಜಿನ್ನಾ, ನೆಹರು, ಗಾಂಧೀಜಿ, ಪಟೇಲ್ ಮತ್ತು ಅಂಬೇಡ್ಕರ್ ಹೇಗೆ..? ತಮ್ಮ ವಿಶಿಷ್ಟ ಬುದ್ಧಿಶಕ್ತಿಯಿಂದ ಅಂದಿನ ಕಾಲ ಘಟ್ಟದಲ್ಲಿ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುತ್ತ ತಮ್ಮದೇ ಹಾದಿಯಲ್ಲಿ ರಚನಾತ್ಮಕ ಪರಿಹಾರ ನೀಡುತ್ತಿದ್ದರು. ಸಾಮಾಜಿಕ ಪರಿಕಲ್ಪನೆಯ ನ್ಯಾಯದ ಬಗ್ಗೆ ಅಪಾರವಾಗಿ ಚಿಂತಿಸುತ ಸರ್ವರಿಗೂ ಸಮಾನತೆ ಸಿಗುವ ವಿಚಾರವಾಗಿ ಅಂಬೇಡ್ಕರ್ ಅವರು ಸಂವಿಧಾನಾತ್ಮಕವಾಗಿ ಜಾರಿಗೆ ತಂದ ಕಾನೂನು. ಇವೆಲ್ಲವುಗಳ ದೃಶ್ಯ ಕಾವ್ಯ ಕಣ್ಣಿಗೆ ಹಬ್ಬದಂತೆ ರಸಮಯವಾಗಿತ್ತು.

ಈ ನಾಟಕವನ್ನು ನೋಡಿ ನನಗೆ ಅನಿಸಿದ್ದು... ಈ ನಾಟಕವನ್ನು ಸಕರಾತ್ಮಕ ದೃಷ್ಟಿಕೋನದಿಂದ ಜನ ಸಮೂಹಕ್ಕೆ ಇನ್ನಷ್ಟು ಹತ್ತಿರವಾಗಿಸಲು ರಾಜ್ಯದ ಪ್ರತಿಯೊಂದು ತಾಲೂಕು/ಹೋಬಳಿ ಮಟ್ಟದ ಕೇಂದ್ರಗಳಲ್ಲಿ ಉಚಿತವಾಗಿ ಪ್ರದರ್ಶಿಸಿದರೆ ದೇಶದ ಪವಿತ್ರ ಗ್ರಂಥ ಸಂವಿಧಾನ ಹಾಗೂ ಅದರ ಆಶಯಗಳು, ಮೂಲಭೂತ ಹಕ್ಕಿನ ಜವಾಬ್ದಾರಿ, ಗೌರವ, ನಾಗರಿಕರಲ್ಲಿ ಹೆಚ್ಚಾಗುವುದರ ಜೊತೆಗೆ ತಿಳುವಳಿಕೆ ಮೂಡುವುದರಲ್ಲಿ ಸಂದೇಹವೇ ಇಲ್ಲ. ಧರ್ಮ ಬೋಧನೆಗಳ ಅವಶ್ಯಕತೆಗಿಂತ ಪವಿತ್ರ ಸಂವಿಧಾನದ ತಿಳುವಳಿಕೆ ಬಗ್ಗೆ ಎಲ್ಲರಲ್ಲೂ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಈ ಕುರಿತು ರಂಗಾಯಣದ ನಿರ್ದೇಶಕರಾದ ಅಡ್ಡಂಡ ಸಿ. ಕಾರ್ಯಪ್ಪ ಅವರು ಸರ್ಕಾರದ ಮಟ್ಟದಲ್ಲಿ ಧ್ವನಿ ಎತ್ತಬೇಕಿದೆ. ಏಕೆಂದರೆ, ಇವತ್ತು ಇಡೀ ವಿಶ್ವದಲ್ಲೇ ಜಾತ್ಯತೀತ ರಾಷ್ಟ್ರವಾಗಿ ಶಾಂತಿ ಸಹಬಾಳ್ವೆಯಿಂದ ಪ್ರತಿಯೊಂದು ಹೆಜ್ಜೆಗಳಲ್ಲಿ ಮುನ್ನಡೆ ಸಾಧಿಸುತ್ತ ಅಭಿವೃದ್ಧಿಯಾಗುತ್ತಿದೆ ಎಂದರೆ ಅದಕ್ಕೆ ಸಮಾನತೆಯ ಹರಿಕಾರ ಅಂಬೇಡ್ಕರ್ ಕೊಟ್ಟ ಸಂವಿಧಾನವೇ ಮೂಲ ಕಾರಣ ವಿನಃ ಪರ್ಯಾಯ ಯಾವುದೂ ಅಲ್ಲ. ಈ ನೆಲದಲ್ಲಿ ಸಂವಿಧಾನ ಗೌರವಿಸುವವರು ಎಂದೆಂದೂ ನಿಜವಾದ ರಾಷ್ಟ್ರ ಪ್ರೇಮಿಗಳು ಎಂದು ಹೆಮ್ಮೆಯಿಂದ ಹೇಳಬಹುದು ಎಂದನಿಸುತ್ತದೆ.


– ಅನಿಲ್ ಕುಮಾರ್, ನಂಜನಗೂಡು.



ಕಾರ್ಕಳ ಆನಂದಭಟ್
ಮೊ.7676554198

ದಿಕ್ಕುದೆಸೆ

ಶಬ್ದಮಾಲಿನ್ಯ 'ಸೈಲೆಂಟ್ ಕಿಲ್ಲರ್'



ಈ ವರ್ಷ ಏಪ್ರಿಲ್‌ನಲ್ಲಿ ವಿಶ್ವ ಸಂಸ್ಥೆಯ ಒಂದು ಏಜೆನ್ಸಿಯು ತನ್ನ ವರದಿಯಲ್ಲಿ ಶಬ್ದ ಮಾಲಿನ್ಯಕ್ಕೆ ಸಂಬಂಧಪಟ್ಟಂತೆ ಬೆಚ್ಚಿ ಬೀಳಿಸುವಂತಹ ಮಾಹಿತಿಗಳನ್ನು ನೀಡಿದೆ. ಜಗತ್ತು ಇದುವರೆಗೆ ವಾಯು ಮಾಲಿನ್ಯ, ಜಲ ಮಾಲಿನ್ಯ, ಪರಿಸರ ಮಾಲಿನ್ಯಗಳ ಕುರಿತು ತಿಳಿದಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಅಷ್ಟೇನೂ ತಿಳಿಯದೇ ಇದ್ದ ಶಬ್ದ ಮಾಲಿನ್ಯ ಕೇವಲ ಮನುಷ್ಯ ಮಾತ್ರವಲ್ಲ, ಪ್ರಾಣಿಗಳೂ, ಸೂಕ್ಷ್ಮಾಣು ಜೀವಿಗಳು, ಜಲಚರಗಳ ಆರೋಗ್ಯದ ಮೇಲೆ ತೀವ್ರ ತರದ ಪರಿಣಾಮ ಬೀರುತ್ತಿದೆ ಎಂದು ಈ ವರದಿಯು ಬಹಿರಂಗಪಡಿಸಿದೆ.

ವೈದ್ಯಕೀಯ ವಿಜ್ಞಾನದಲ್ಲಿ ಮುಂದುವರಿದ ಅಮೇರಿಕದಲ್ಲಿ ಶಬ್ದ ಮಾಲಿನ್ಯದಿಂದ 30 ಮಿಲಿಯನ್ ಜನರು ಪೀಡಿತರಾಗಿದ್ದಾರೆ. 2012ರಲ್ಲಿ ನ್ಯೂಯಾರ್ಕ್ ನಗರ ಒಂದರಲ್ಲೇ ಶಬ್ದ ಮಾಲಿನ್ಯದಿಂದಾದ ಆರೋಗ್ಯ ಸಮಸ್ಯೆಗೆ ಸಂಬಂಧಿಸಿದಂತೆ 40,000 ದೂರುಗಳು ದಾಖಲಾಗಿದ್ದವು. ಯುರೋಪಿಯನ್ ಪರ್ಯಾವರಣ ಏಜೆನ್ಸಿಯ ಮಾಹಿತಿಯಂತೆ ಯೂರೋಪ್‌ನಲ್ಲಿ ವಾಹನಗಳ ಸದ್ದಿನಿಂದ ಒಂದು ನೂರು ಮಿಲಿಯನ್ (20%) ಜನರು ಆರೋಗ್ಯ ಸಮಸ್ಯೆಗಳಿಂದ ಪೀಡಿತರಾಗಿದ್ದಾರೆ. ಶಬ್ದ ಮಾಲಿನ್ಯದಿಂದ ಪ್ರತಿ ವರ್ಷ ಸುಮಾರು 70 ಸಾವಿರ ಜನರು ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. 22 ಮಿಲಿಯನ್ ಜನರು ವಿವಿಧ ರೀತಿಯ ಚಿತ್ತ ವಿಕಾರದಿಂದ ಬಳಲುತ್ತಿದ್ದರೆ, 6.5 ಮಿಲಿಯನ್ ಜನರು ನಿದ್ರಾಹೀನತೆಯ ಸಮಸ್ಯೆಗೊಳಗಾಗಿದ್ದಾರೆ. 48,000 ಮಂದಿ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದರೆ, ಸುಮಾರು 12 ಸಾವಿರ ಮಂದಿ ಅಕಾಲಿಕ ಸಾವಿಗೀಡಾಗುತ್ತಿದ್ದಾರೆ.

ಭಾರತಕ್ಕೆ ಸಂಬಂಧಪಟ್ಟಂತೆ ವಿಶ್ವ ಸಂಸ್ಥೆಯ ಪರ್ಯಾವರಣ ಕಾರ್ಯಕ್ರಮದ (UNEP) 'ಫ್ರಾಂಟಿಯರ್ ರಿಪೋರ್ಟ್–2022'ರ ಅನ್ವಯ ಭಾರತದಲ್ಲಿ ಧ್ವನಿ ಪ್ರದೂಷಣೆಯಿಂದ (Noise Pollution) ಸುಮಾರು 6.3 ಕೋಟಿ ಜನರು ಕಿವುಡುತನದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಶಬ್ದ ಮಾಲಿನ್ಯವು ಶಾರೀರಿಕ ಹಾಗೂ ಮಾನಸಿಕ ಸ್ವಾಸ್ಥ್ಯದ ಮೇಲೆ ತೀವ್ರ ಸಕಾರಾತ್ಮಕ ಪರಿಣಾಮ ಬೀರುತ್ತಿದೆ (WHO) ಧ್ವನಿ ಪ್ರದೂಷಣೆಯಿಂದ ಭಾರತದ ವಿಶೇಷವಾಗಿ ಯುವ ಜನತೆ ತನ್ನ ಶ್ರವಣ ಶಕ್ತಿಯನ್ನು ಅತ್ಯಂತ ವೇಗದಲ್ಲಿ ಕಳೆದುಕೊಳ್ಳುತ್ತಿದೆ. ಪರಿಸ್ಥಿತಿ ಇದೇ ರೀತಿ ಮುಂದುವರಿದಲ್ಲಿ 2030ರ ವೇಳೆಗೆ ಭಾರತದಲ್ಲಿ ಅರೆ ಕಿವುಡರ ಸಂಖ್ಯೆ ದುಪ್ಪಟ್ಟು (ಸುಮಾರು 1.3 ಕೋಟಿ) ಹೆಚ್ಚಾಗಲಿದೆ. ಭಾರತದಲ್ಲಿ ಪ್ರತಿ ಹತ್ತರಲ್ಲಿ ಇಬ್ಬರು ಮಾತ್ರ ಶ್ರವಣ ಸಮಸ್ಯೆಗೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಬ್ದ ಮಾಲಿನ್ಯವು ನಿಧಾನವಾಗಿ ನಿಶ್ಶಬ್ದವಾಗಿ ವ್ಯಕ್ತಿಯನ್ನು ಸಾಯಿಸುತ್ತದೆ (Silent Killer). ತತ್‌ಕ್ಷಣದಲ್ಲಿ ಈ ಸಮಸ್ಯೆ ಅರಿವಿಗೆ ಬರುವುದಿಲ್ಲ. ಈ ಕಾರಣದಿಂದ ಜನಸಾಮಾನ್ಯರು ಇದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಶಬ್ದ ಮಾಲಿನ್ಯ ಸ್ಪಷ್ಟವಾಗಿ ತಿಳಿಯಲು ಸಾಮಾನ್ಯ ತೀವ್ರತೆಯ ಮಾತಿಗೆ ಧ್ವನಿ ಅಥವಾ ಶಬ್ದವೆಂದರೆ, ಭಾರೀ ತೀವ್ರತೆಯ ಧ್ವನಿಗೆ ಕೋಲಾಹಲ, ಗುಲ್ಲು, ಗಲಾಟೆ ಎನ್ನುತ್ತಾರೆ. ಈ ಕೋಲಾಹಲವೇ ಶಬ್ದ ಮಾಲಿನ್ಯವಾಗಿದೆ. ಮಾನವ 60 ಡೆಸಿಬಲ್ ತೀವ್ರತೆವರೆಗಿನ ಸದ್ದನ್ನು ಕೇಳುವ ಕ್ಷಮತೆ ಹೊಂದಿದ್ದಾನೆ. ಇದಕ್ಕಿಂತ ಹೆಚ್ಚಿನ ತೀವ್ರತೆಯ ಧ್ವನಿ ಮಾತ್ರ ಕೇಳುತ್ತಿದೆ ಎಂದಾದಲ್ಲಿ ಆತನಿಗೆ ಶ್ರವಣ ಸಮಸ್ಯೆ ಅಥವಾ ಕಿವುಡುತನದ ಸಮಸ್ಯೆ ಇದೆಯೆಂದು ತಿಳಿಯಬಹುದು.

> ಶಬ್ದ ಮಾಲಿನ್ಯವು ನಿಧಾನವಾಗಿ ನಿಶ್ಶಬ್ದವಾಗಿ ವ್ಯಕ್ತಿಯನ್ನು ಸಾಯಿಸುತ್ತದೆ (Silent Killer). ತತ್‌ಕ್ಷಣದಲ್ಲಿ ಈ ಸಮಸ್ಯೆ ಅರಿವಿಗೆ ಬರುವುದಿಲ್ಲ. ಈ ಕಾರಣದಿಂದ ಜನಸಾಮಾನ್ಯರು ಇದನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ಶಬ್ದ ಮಾಲಿನ್ಯ ಸ್ಪಷ್ಟವಾಗಿ ತಿಳಿಯಲು ಸಾಮಾನ್ಯ ತೀವ್ರತೆಯ ಮಾತಿಗೆ ಧ್ವನಿ ಅಥವಾ ಶಬ್ದವೆಂದರೆ, ಭಾರೀ ತೀವ್ರತೆಯ ಧ್ವನಿಗೆ ಕೋಲಾಹಲ, ಗುಲ್ಲು, ಗಲಾಟೆ ಎನ್ನುತ್ತಾರೆ. ಈ ಕೋಲಾ ಹಲವೇ ಶಬ್ದ ಮಾಲಿನ್ಯವಾಗಿದೆ. ಮಾನವ 60 ಡೆಸಿಬಲ್ ತೀವ್ರತೆವರೆಗಿನ ಸದ್ದನ್ನು ಕೇಳುವ ಕ್ಷಮತೆ ಹೊಂದಿದ್ದಾನೆ. ಇದಕ್ಕಿಂತ ಹೆಚ್ಚಿನ ತೀವ್ರತೆಯ ಧ್ವನಿ ಮಾತ್ರ ಕೇಳುತ್ತಿದೆ ಎಂದಾದಲ್ಲಿ ಆತನಿಗೆ ಶ್ರವಣ ಸಮಸ್ಯೆ ಅಥವಾ ಕಿವುಡುತನದ ಸಮಸ್ಯೆ ಇದೆಯೆಂದು ತಿಳಿಯಬಹುದು.

ಶಬ್ದ ಮಾಲಿನ್ಯಕ್ಕೆ ಔದ್ಯೋಗಿಕ, ನಿರ್ಮಾಣ ಪ್ರದೇಶಗಳಲ್ಲಿರುವ ಯಂತ್ರಗಳ ದೊಡ್ಡ ರೀತಿಯಲ್ಲಿ ಯೋಗದಾನವಿದೆ. ಇದಕ್ಕೆ ಹೊರತಾಗಿ ವಾಹನಗಳ, ಅವುಗಳ ಹಾರ್ನ್‌ಗಳ ಸದ್ದು, ಮನೋರಂಜನೆಯ ಮಾಧ್ಯಮಗಳಾದ ಟಿ.ವಿ., ರೇಡಿಯೋ, ಡಿ.ಜೆ.ಗಳು ವಿಭಿನ್ನ ಸಾಮಾಜಿಕ, ಧಾರ್ಮಿಕ, ರಾಜಕೀಯ ಕಾರ್ಯಕ್ರಮಗಳು, ರಾಜಕೀಯ ಪಕ್ಷಗಳ ರ‍್ಯಾಲಿಗಳು, ಸಭೆಗಳು ಇತ್ಯಾದಿಗಳಿಂದ ಶಬ್ದ ಮಾಲಿನ್ಯವಾಗುತ್ತಿದೆ. ವಿಮಾನಗಳಿಂದ ಬಾನಲ್ಲೂ, ಬೃಹತ್ ಹಡಗುಗಳು, ಯುದ್ಧ ನೌಕೆಗಳು, ಸಾಗರದಾಳದಲ್ಲಿ ಸಂಚರಿಸುವ ಜಲಾಂತರ್ಗಾಮಿಗಳಿಂದ ಸಾಗರಗಳಲ್ಲೂ ಶಬ್ದ ಮಾಲಿನ್ಯವಾಗುತ್ತಿದೆ.

ಶಬ್ದ ಮಾಲಿನ್ಯದ ಅಪಾಯಗಳು: ದೇಶದ ನಾಗರಿಕರಿಗೆ ನೆಮ್ಮದಿಯಿಂದ ಜೀವಿಸುವ, ಸುಖವಾಗಿ ನಿದ್ರಿಸುವ ಹಕ್ಕನ್ನು ಸಂವಿಧಾನ ನೀಡಿದೆ. ಆದರೆ ಶಬ್ದ ಮಾಲಿನ್ಯವು ಈ ಹಕ್ಕನ್ನು ಕಸಿದುಕೊಂಡಿದೆ. ಶಬ್ದ ಮಾಲಿನ್ಯದಿಂದ ಮಾತಿನಲ್ಲಿ ಆತಂಕ, ಉದ್ವೇಗ, ನಿದ್ರಾಹೀನತೆ ಹಾಗೂ ಆತಂಕದಿಂದ ಉತ್ಪನ್ನವಾಗುವ ತೀವ್ರ ಪರಿಣಾಮಗಳು ಮಾನವನ ಸ್ವಾಸ್ಥ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿವೆ. ಶಬ್ದದ ತೀವ್ರತೆ 90 ಡೆಸಿಬಲ್‌ಗಿಂತ ಅಧಿಕವಾದಲ್ಲಿ ಶ್ರವಣ ಶಕ್ತಿ ಕ್ಷೀಣಿಸುವುದು. ಮಾನಸಿಕ ಅಸಂತುಲನ, ಮಾಂಸಖಂಡ, ಸ್ನಾಯುಗಳಲ್ಲಿ ಸೆಳೆತ ಉಂಟಾಗುವುದು. ಅತಿರಕ್ತದೊತ್ತಡ, ಹೃದ್ರೋಗ, ಕಣ್ಣಿನ ರೆಪ್ಪೆಗಳಲ್ಲಿ ಸೆಳೆತ, ಮಹಿಳೆಯರಲ್ಲಿ ಗರ್ಭಪಾತ, ಕಾರ್ಯಕ್ಷಮತೆಯಲ್ಲಿ ಕುಸಿತ, ಮೊದಲಾದ ವಿಭಿನ್ನ ಪ್ರಕಾರದ ಶಾರೀರಿಕ, ಮಾನಸಿಕ ಸಮಸ್ಯೆಗಳು ಕಾಡುವ ಸಾಧ್ಯತೆ ಇದೆ. ಸುದೀರ್ಘ ಕಾಲದಿಂದ ಉಚ್ಚ ಸ್ತರದ ಧ್ವನಿ, ಕೋಲಾಹಲ ಕೇಳುತ್ತಿರುವವರಲ್ಲಿ ದೈಹಿಕ ಶ್ರವಣ ಶಕ್ತಿಯೊಂದಿಗೆ ಸ್ಮರಣ ಶಕ್ತಿಯು ಕುಸಿಯಲಿದೆ ಎನ್ನುತ್ತದೆ ವರದಿ. ಧ್ವನಿ ಪ್ರದೂಷಣೆಯು, ಮಾನವ, ಮೂಕ ಪ್ರಾಣಿಗಳು ಮಾತ್ರವಲ್ಲ, ಸೂಕ್ಷ್ಮ ಜೀವಿಗಳು, ಸಾಗರ ಜೀವಿಗಳ ಮೇಲೂ ನಕಾರಾತ್ಮಕ ಪರಿಣಾಮ ಬೀರಿ ಪರ್ಯಾವರಣದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತಿದೆ.

ಧ್ವನಿಯ ಅಪೇಕ್ಷಿತ ಪ್ರಮಾಣ: ವಿಶ್ವ ಆರೋಗ್ಯ ಸಂಸ್ಥೆಯು ಶಬ್ದದ ಉಚ್ಚ ಸ್ತರವನ್ನು ಹಗಲು ಹೊತ್ತಿನಲ್ಲಿ 4.5 ಡೆಸಿಬಲ್ ಹಾಗೂ ರಾತ್ರಿಯಲ್ಲಿ 35 ಡೆಸಿಬಲ್ ನಿಗದಿಪಡಿಸಿದೆ. ಭಾರತದಲ್ಲಿ ಔದ್ಯೋಗಿಕ, ಕೈಗಾರಿಕಾ ಪ್ರದೇಶಗಳಲ್ಲಿ ಹಗಲು 75 ಡೆಸಿಬಲ್, ರಾತ್ರಿ 70 ಡೆಸಿಬಲ್, ವಾಣಿಜ್ಯ ವಲಯಗಳಲ್ಲಿ ಹಗಲು 65 ಡೆಸಿಬಲ್, ರಾತ್ರಿ 55 ಡೆಸಿಬಲ್, ವಸತಿ ಪ್ರದೇಶಗಳಲ್ಲಿ ಹಗಲು 55 ಡೆಸಿಬಲ್, ರಾತ್ರಿ 45 ಡೆಸಿಬಲ್, ಶಾಲೆ, ಆಸ್ಪತ್ರೆ, ನ್ಯಾಯಾಲಯ ಮೊದಲಾದ ಸ್ಥಾನಗಳಲ್ಲಿ ಹಗಲು 50 ಡೆಸಿಬಲ್, ರಾತ್ರಿ 40 ಡೆಸಿಬಲ್ ಆಗಿದೆ. ಹಗಲಿನ ಅವಧಿ ಬೆಳಗ್ಗೆ 6 ರಿಂದ 10 ಗಂಟೆವರೆಗೆ ಹಾಗೂ ರಾತ್ರಿ ಹೊತ್ತು 10 ರಿಂದ ಬೆಳಗಿನ ಜಾವ 6 ಗಂಟೆವರೆಗೆಂದು ನಿಗದಿಪಡಿಸಿದೆ. ವಿಶ್ವ ಆರೋಗ್ಯ ಸಂಸ್ಥೆಯೂ ರಾತ್ರಿಯ ನಿದ್ರೆಯ ಸಮಯ ಶಬ್ದ ತೀವ್ರತೆ 35 ಡೆಸಿಬಲ್‌ಗಿಂತ ಹೆಚ್ಚು ಇರಬಾರದೆಂದು ನಿಗದಿಗೊಳಿಸಿದೆ.

ಪರಿಸ್ಥಿತಿಯ ಗಂಭೀರತೆಯನ್ನು ತಿಳಿದ ಭಾರತದ ಕೇಂದ್ರೀಯ ಪ್ರದೂಷಣ ನಿಯಂತ್ರಣ ಮಂಡಲಿಯು ದೇಶದ ಪ್ರಮುಖ ನಗರಗಳಾದ ದಿಲ್ಲಿ, ಬೆಂಗಳೂರು, ಚೆನ್ನೈ, ಹೈದರಾಬಾದ್, ಲಕ್ನೋ ಹಾಗೂ ಮುಂಬೈಗಳಲ್ಲಿ ಧ್ವನಿ ಪ್ರದೂಷಣೆಯನ್ನು ನಿರಂತರವಾಗಿ ದಾಖಲಿಸುವ ಕೇಂದ್ರಗಳನ್ನು ಸ್ಥಾಪಿಸಿದೆ. ಈ ನಗರಗಳಲ್ಲಿನ 80%ಕ್ಕಿಂತ ಹೆಚ್ಚು ಕೇಂದ್ರಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ತೀವ್ರತೆಯು ದಾಖಲಾಗಿವೆ. ಈ ನಗರಗಳಲ್ಲಿ 60 ಡೆಸಿಬಲ್ ನಿಂದ 17.1%, 70 ಡೆಸಿಬಲ್‌ನಿಂದ 29.4%, 75 ಡೆಸಿಬಲ್‌ನಿಂದ 39.6%, 80 ಡೆಸಿಬಲ್‌ಗಿಂತ ಹೆಚ್ಚು ಧ್ವನಿ ಪ್ರದೂಷಣೆಯಿಂದ ಶೇ.49.6 ಜನರು ಅನಿದ್ರೆ, ಆತಂಕ ಮೊದಲಾದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ದಿಲ್ಲಿಯಲ್ಲಿ ಅತೀ ಹೆಚ್ಚು ಅಂದರೆ ಹಗಲು 77 ರಿಂದ 80 ಡೆಸಿಬಲ್ ಹಾಗೂ ರಾತ್ರಿ 55 ರಿಂದ 65 ಡೆಸಿಬಲ್ ದಾಖಲಾಗಿದೆ. ದಿಲ್ಲಿಯಲ್ಲಿ ಹಾಗೂ ಇತರ ಮಹಾನಗರಗಳಲ್ಲಿ ಹೆದ್ದಾರಿ, ರೈಲ್ವೆ ನಿಲ್ದಾಣಗಳ ಸಮೀಪದಲ್ಲಿ ವಾಸಿಸುವವರು ಧ್ವನಿ ಪ್ರದೂಷಣೆಯಿಂದ ಭಾರೀ ಪ್ರಮಾಣದ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಈ ಪ್ರದೇಶದಲ್ಲಿ ವಾಸಿಸುವವರಲ್ಲಿ ಶೇ.26ರಷ್ಟು ಜನರು ನಿದ್ರಾಹೀನತೆಯಿಂದ ಪೀಡಿತರಾಗಿದ್ದಾರೆ. ಮಕ್ಕಳು ಕಿವುಡರಾಗುತ್ತಿದ್ದಾರೆ ಎಂದು ಕೇಂದ್ರೀಯ ರಸ್ತೆ ಸಂಶೋಧನಾ ಸಂಸ್ಥೆ (CRRI) ತಿಳಿಸಿದೆ. ಇನ್ನೂ ಆಘಾತಕಾರಿ ಸಂಗತಿಯೆಂದರೆ ಈ ನಗರಗಳಲ್ಲಿ 2017 ರಿಂದ ರಾತ್ರಿ ಅವಧಿಯಲ್ಲಿ ಹೆಚ್ಚು ಶಬ್ದ ಮಾಲಿನ್ಯ ದಾಖಲಾಗುತ್ತಿದೆ.

ಧ್ವನಿವರ್ಧಕಗಳ ಸಮಸ್ಯೆ: ಕಳೆದ ಕೆಲವು ತಿಂಗಳುಗಳಿಂದ ರಾತ್ರಿ 10 ರಿಂದ ಬೆಳಗಿನ ಜಾವ 6 ಗಂಟೆವರೆಗೆ ಧ್ವನಿವರ್ಧಕಗಳ ಮೇಲಿನ ನಿರ್ಬಂಧಕ್ಕೆ ಸಂಬಂಧಿತ ವಿವಾದಗಳು ನಡೆಯುತ್ತಿವೆ. ಧ್ವನಿವರ್ಧಕಗಳ ಧ್ವನಿ ತೀವ್ರತೆ 90 ಡೆಸಿಬಲ್‌ಗಿಂತ ಅಧಿಕವಾಗಿದ್ದು, ನಿಯಮಿತವಾಗಿ ಕೇಳುತ್ತಿದ್ದರೆ ಜನರಿಗೆ ಕಿವುಡುತನ ಸಹಿತ ಅನೇಕ ರೀತಿಯ ಆರೋಗ್ಯ ಸಮಸ್ಯೆ ಎದುರಿಸಬೇಕಾಗಬಹುದು. ಆದ್ದರಿಂದ ಧ್ವನಿವರ್ಧಕಗಳ ಬಳಕೆ ವಿಷಯದಲ್ಲಿ ಆಸ್ತಿಕ–ನಾಸ್ತಿಕರು, ಧಾರ್ಮಿಕ ಗುರುಗಳು, ರಾಜಕಾರಣಿಗಳು, ರಾಜಕೀಯ ಪಕ್ಷಗಳು, ಧಾರ್ಮಿಕ ಹಾಗೂ ಇತರ ಸಂಘಟನೆಗಳು ಒಮ್ಮತದಿಂದ ಧ್ವನಿವರ್ಧಕಗಳ, ಡಿ.ಜೆ.ಗಳ ಬಳಕೆಯ ಮಿತಿಯನ್ನು ನಿರ್ಧರಿಸಬೇಕಾಗಿದೆ. ದೇಶದ ಸರ್ವೋಚ್ಚ ನ್ಯಾಯಾಲಯವು ಧ್ವನಿವರ್ಧಕಗಳ ಬಳಕೆಗೆ ಸಂಬಂಧಿಸಿದಂತೆ 2005, ಜುಲೈನಲ್ಲಿ ತುರ್ತು ಪರಿಸ್ಥಿತಿ ಹೊರತುಪಡಿಸಿ ರಾತ್ರಿ 10 ರಿಂದ ಬೆಳಗಿನ ಜಾವ 6 ಗಂಟೆವರೆಗೆ ಧ್ವನಿವರ್ಧಕಗಳ ಬಳಕೆ ಮೇಲೆ ನಿಷೇಧ ವಿಧಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರು ಇತ್ತೀಚೆಗೆ ಎಲ್ಲ ಮತ, ಧರ್ಮ, ಸಮುದಾಯಗಳ ಸ್ಥಾರ್ಥನಾ ಕೇಂದ್ರಗಳಿಗೆ ಉಚ್ಚಸ್ತರದಲ್ಲಿ ಧ್ವನಿವರ್ಧಕ ಬಳಸದಂತೆ ಆದೇಶ ಜಾರಿಗೊಳಿಸಿದ್ದಾರೆ. ಉತ್ತರ ಪ್ರದೇಶದ ಸರಕಾರದ ಈ ಕ್ರಮ ಎಲ್ಲ ರಾಜ್ಯ ಸರಕಾರಗಳಿಗೆ ಮಾದರಿಯಾಗಲಿ.

ಧ್ವನಿ ಪ್ರದೂಷಣೆ ತಡೆಯುವ ಕಾಯ್ದೆ: ಶಬ್ದ ಮಾಲಿನ್ಯ ನಿಯಂತ್ರಿಸಲು ಭಾರತ ಸರಕಾರವು ವಾಯು ಮಾಲಿನ್ಯ ಪ್ರದೂಷಣ ನಿಯಂತ್ರಣ ಮತ್ತು ನಿವಾರಣಾ ಕಾಯ್ದೆ 1981ಕ್ಕೆ 1987ರಲ್ಲಿ ತಿದ್ದುಪಡಿ ತಂದು ಶಬ್ದ ಮಾಲಿನ್ಯಕ್ಕೆ ವಾಯು ಮಾಲಿನ್ಯದ ದರ್ಜೆ ನೀಡಿ ಕಾನೂನು ರೂಪಿಸಿದೆ. ಧ್ವನಿ ಪ್ರದೂಷಣ ನಿಯಂತ್ರಿಸಲು ದೇಶದ ವಿಭಿನ್ನ ರಾಜ್ಯಗಳ ಸಹಿತ ಕೇಂದ್ರ ಸರಕಾರವು ಕಾನೂನು ರೂಪಿಸಿವೆ. ನ್ಯಾಯಾಲಯಗಳು ಕಾಲ ಕಾಲಕ್ಕೆ ಆದೇಶಗಳನ್ನು ನೀಡಿವೆ. ಜನಸಾಮಾನ್ಯರು, ಸಹಕರಿಸಬೇಕಾಗಿದೆ. 2019ರ ಅಧ್ಯಯನದಂತೆ ಆ ವರ್ಷ ದೇಶದಲ್ಲಿ ಪ್ರತಿ 6ರಲ್ಲಿ ಓರ್ವನ ಸಾವು ಶಬ್ದ ಮಾಲಿನ್ಯದಿಂದ ಸಂಭವಿಸಿದೆ. ಈ ಕಾರಣದಿಂದ ಶಬ್ದ ಮಾಲಿನ್ಯ ನಿಯಂತ್ರಿಸಲು ಜನಸಾಮಾನ್ಯರು ಎಚ್ಚೆತ್ತುಕೊಳ್ಳಬೇಕಾಗಿದೆ. ವಾಹನ ಚಾಲಕರು ವಿವೇಚನೆಯಿಂದ ಹಾರ್ನ್ ಹಾಕುವುದು, ಸಿಗ್ನಲ್ ಸ್ಥಾನಗಳಲ್ಲಿ ಕರ್ಕಶವಾಗಿ ಹಾರ್ನ್ ಬಳಸದೇ, ಎಕ್ಸಲೇಟರ್ ನೀಡುತ್ತಾ ಸದ್ದು ಮಾಡದೇ ಸಂಯಮ ವಹಿಸುವುದು, ಯುವಕರು ಹೆಚ್ಚು ಸದ್ದು ಮಾಡುವ ವಾಹನಗಳನ್ನು ಬಳಸದಿರುವುದು, ಸೈಲೆನ್ಸರ್ ರಹಿತ ದ್ವಿಚಕ್ರ ವಾಹನಗಳನ್ನು ಓಡಿಸದಿರುವುದು, ಈ ರೀತಿಯ ಕ್ರಮಗಳಿಂದ ನಮ್ಮ ಪರ್ಯಾವರಣವನ್ನು ನಾವೇ ರಕ್ಷಿಸಬಹುದು.

'ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ' ಗ್ರಂಥ ಜು.23ಕ್ಕೆ ಮೈಸೂರಲ್ಲಿ ಬಿಡುಗಡೆ



ಮೈಸೂರು, ಜು.8(ಎಸ್‌ಬಿಡಿ)– ರಾಜ್ಯದಲ್ಲಿ ಐದು ವರ್ಷ ಜನಪರ ಆಡಳಿತ ನಡೆಸಿದ ಸಿದ್ದರಾಮಯ್ಯನವರ ಧ್ವನಿಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ನಾವೆಲ್ಲಾ ಶ್ರಮಿಸಬೇಕು ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹೇಳಿದರು.

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಡಳಿತ ಹಾಗೂ ಅವರ ಅಧಿಕಾರಾವಧಿಯಲ್ಲಿ ತೆಗೆದುಕೊಂಡ ನಿರ್ಧಾರಗಳ ಕುರಿತ 'ಸಿದ್ದರಾಮಯ್ಯ ಆಡಳಿತ: ನೀತಿ ನಿರ್ಧಾರ' ಗ್ರಂಥ ಬಿಡುಗಡೆ ಸಮಾರಂಭ ಜು.23ರಂದು ಮೈಸೂರಿನಲ್ಲಿ ಆಯೋಜಿಸಿ ರುವ ಹಿನ್ನೆಲೆಯಲ್ಲಿ ಇಂದು ಜನದರ್ಶಿನಿ ಅತಿಥಿಗೃಹದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ದೇಶದ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಅಪಾಯದಲ್ಲಿದೆ. ಈ ಪರಿಸ್ಥಿತಿಯಲ್ಲಿ ಜಾತ್ಯಾತೀತ ನಾಯಕರಾದ ಸಿದ್ದರಾಮಯ್ಯನವರ ಧ್ವನಿಯನ್ನು ಗಟ್ಟಿಗೊಳಿಸಬೇಕಿದೆ ಎಂದು ಅಭಿಪ್ರಾಯಿಸಿದರು.

ಬೆಂಗಳೂರಿನ ಜನಮನ ಪ್ರತಿಷ್ಠಾನದ ವತಿಯಿಂದ ಜು.23ರಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ಗ್ರಂಥ ಬಿಡುಗಡೆ ಸಮಾರಂಭ ನಡೆಯಲಿದ್ದು, 3 ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುವ ನಿರೀಕ್ಷೆಯಿದೆ. 75 ವರ್ಷದ ಸಿದ್ದರಾಮಯ್ಯನವರು 45ವರ್ಷದಿಂದ ಸಾರ್ವಜನಿಕ ಜೀವನದಲ್ಲಿದ್ದಾರೆ. ಮೇರು ಪರ್ವತದಂತಿರುವ ಸಿದ್ದರಾಮಯ್ಯನವರನ್ನು ಕುರಿತ ಗ್ರಂಥ ಬಿಡುಗಡೆ ಸಮಾರಂಭವನ್ನು ಯಶಸ್ವಿಗೊಳಿಸಬೇಕೆಂದು ಕೋರಿದರು.

ಶಾಸಕರಾದ ಡಾ.ಯತೀಂದ್ರ ಸಿದ್ಧರಾಮಯ್ಯ, ಡಾ.ತಿಮ್ಮಯ್ಯ, ಹೆಚ್.ಪಿ.ಮಂಜುನಾಥ್, ಅನಿಲ್ ಚಿಕ್ಕಮಾದು, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಮಪ್ಪ, ಲೋಕಸಭಾ ಮಾಜಿ ಸದಸ್ಯ ಕಾಗಲವಾಡಿ ಶಿವಣ್ಣ, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಎಂ.ಕೆ.ಸೋಮಶೇಖರ್, ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಕೃಷ್ಣಪ್ಪ, ಮಟ್ಟಸಿದ್ದಶೆಟ್ಟಿ, ಪ್ರೊ.ನಂಜರಾಜ ಅರಸ್, ಪುಸ್ತಕದ ಸಂಪಾದಕ ಕಾ.ತ.ಚಿಕ್ಕಣ್ಣ, ಸಂಯೋಜಕ ಎಂ.ರಾಮಯ್ಯ, ಚಂದ್ರೇಗೌಡ, ಬಿ.ಎಂ.ರಾಮು, ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್, ಜಿಪಂ ಮಾಜಿ ಸದಸ್ಯರಾದ ಡಿ.ರವಿಶಂಕರ್, ಮಾರುತಿ ಮುಖಂಡರಾದ ಹರೀಶ್‌ಗೌಡ, ಗಣೇಶ್‌ಪ್ರಸಾದ್, ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ಹರೀಶ್ ಮೊಗಣ್ಣ, ಜಯರಾಮೇಗೌಡ, ಕಮಲ ಅನಂತರಾಮ್, ಸೋಮಶೇಖರ್, ದಕ್ಷಿಣಾಮೂರ್ತಿ, ಹುಣಸೂರು ಬಸವಣ್ಣ, ಅಭಿರುಚಿ ಗಣೇಶ್ ಮತ್ತಿತರರು ಸಭೆಯಲ್ಲಿದ್ದರು.

ಖರ್ಗೆ ಭಾಗಿ: ಸುತ್ತೂರು ಶ್ರೀ ಶಿವರಾತ್ರೀಶ್ವರ ದೇಶಿಕೇಂದ್ರ ಸ್ವಾಮೀಜಿ ಹಾಗೂ ಆದಿಚುಂಚನಗಿರಿ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಕಾಗಿನೆಲೆ ಗುರುಪೀಠ ಮೈಸೂರು ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಉದ್ಘಾಟಿಸಲಿದ್ದು, ಮಾಜಿ ಸಿಎಂ ಸಿದ್ದರಾಮಯ್ಯ, ಮಾಜಿ ಸಭಾಪತಿ ಡಾ.ಬಿ.ಎಲ್.ಶಂಕರ್, ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ, ವಿಶ್ರಾಂತ ಕುಲಪತಿ ಡಾ.ಸಬೀಹಾ ಭೂಮಿಗೌಡ, ಗ್ರಂಥ ಸಂಪಾದಕರಾದ ಕಾ.ತ.ಚಿಕ್ಕಣ್ಣ, ಲಕ್ಷ್ಮಣ ಕೊಡಸೆ ಮತ್ತಿರರು ಭಾಗವಹಿಸಲಿದ್ದಾರೆ. ನಂತರ ಸಮಾಕಾಲೀನ ಸಂವೇದನೆ ಕುರಿತ ಸಂವಾದ ನಡೆಯಲಿದ್ದು, ಅದರಲ್ಲಿ 25ಕ್ಕೂ ಹೆಚ್ಚು ಲೇಖಕರು ಸೇರಿದಂತೆ ನೂರಾರು ಮಂದಿ ಪಾಲ್ಗೊಳ್ಳಲಿದ್ದಾರೆ.

ಎನ್‌ಪಿಎಸ್ ಯೋಜನೆ ಕುರಿತು ತರಬೇತಿ ಕಾರ್ಯಾಗಾರ

ಮೈಸೂರು, ಜು.8– ಎನ್.ಪಿ.ಎಸ್ ಯೋಜನೆ ಕುರಿತು ತರಬೇತಿ ಕಾರ್ಯಗಾರವನ್ನು ಜುಲೈ 11 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಜಿಲ್ಲಾ ಪಂಚಾಯತ್ ಸಭಾಂಗಣ ಮೈಸೂರು ಇಲ್ಲಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಈ ತರಬೇತಿ ಕಾರ್ಯಾಗಾರಕ್ಕೆ ಮೈಸೂರು ಜಿಲ್ಲಾ ವ್ಯಾಪ್ತಿಯ ಖಜಾನಾಧಿಕಾರಿಗಳು, ಸಿಬ್ಬಂದಿ, ಡಿಡಿಓಗಳು ಹಾಗೂ ಪ್ರತಿ ಕಚೇರಿಯಿಂದ ಒಬ್ಬ ಸಿಬ್ಬಂದಿಯೊಂದಿಗೆ ತರಬೇತಿಗೆ ಹಾಜರಾಗಬೇಕೆಂದು ಜಿಲ್ಲಾ ಖಜಾನೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು, ಜು.8– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ (ಪಿ.ಯು.ಸಿ ಮತ್ತು ಪಿ.ಯು.ಸಿ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳು) ವಿದ್ಯಾರ್ಥಿನಿಯಗಳಿಗೆ ಪ್ರವೇಶಾತಿ ಕೋರಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಜುಲೈ 15ರವರೆಗೆ ವಿಸ್ತರಿಸಲಾಗಿದೆ. ಮಾಹಿತಿಗಾಗಿ www.bcwd.karnataka.gov.in ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಮಂಡ್ಯ ಪಿಇಎಸ್ ಕಾಲೇಜಲ್ಲಿ 4.46 ಕೋಟಿ ದುರುಪಯೋಗ: 11 ಮಂದಿ ವಿರುದ್ಧ ಪ್ರಕರಣ ದಾಖಲು, ಇಬ್ಬರ ಬಂಧನ

ಮಂಡ್ಯ, ಜು.8– ಮಂಡ್ಯದ ಪಿಇಎಸ್ ಕಾಲೇಜಿನಲ್ಲಿ 4.46 ಕೋಟಿ ರೂ. ದುರುಪಯೋಗವಾಗಿದ್ದು, ಈ ಸಂಬಂಧ 11 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ವಿವರ: 2013–14ರಿಂದ 2021–22ರವರೆಗಿನ ಆಡಿಟ್‌ನಲ್ಲಿ ಕಾಲೇಜಿನ ಯೂನಿವರ್ಸಿಟಿ ಖಾತೆಯಲ್ಲಿ 4,46,96,075 ರೂ. ದುರ್ಬಳಕೆಯಾಗಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ವಕೀಲರಾದ ಎಂ.ಸಿ. ರಾಜಗೋಪಾಲ್ ಮುಖಾಂತರ ಆಂತರಿಕ ತನಿಖೆ ನಡೆಸಿದಾಗ ಹಣ ದುರ್ಬಳಕೆ ಕೃತ್ಯದಲ್ಲಿ ಕಾಲೇಜಿನ ಎಸ್ಟೇಟ್ ಆಫೀಸರ್ ಎಂ.ಆರ್. ಶಿವರಾಮು, ಅವರ ಅಳಿಯ ಹೃತ್ವಿಕ್, ಷಡಕನ ಮಗ ಕೆ.ಸಿ. ನಿರಂಜನ್, ಸಹಾಯಕ ಆಡಳಿತಾಧಿಕಾರಿ ಜೆ. ಶೇಷಪ್ಪ, ನಗದು ವಿಭಾಗದ ದ್ವಿತೀಯ ದರ್ಜೆ ಸಹಾಯಕ ಎಂ.ಸಿ. ಸತೀಶ್, ಮೈಸೂರಿನ ನೇಮಿನಾಥ್ ಸ್ಟೀಲ್ಸ್ ಮಾಲೀಕ, ಬಾಲಾಜಿ ಆಟೋ ಎಂಟರ್‌ಪ್ರೈಸಸ್ ಮಾಲೀಕ, ಸೆಂಚುರಿ ಪೈಪ್ಸ್ ಮಾಲೀಕ, ಮಾಂಡವಿ ಮೋಟಾರ್ಸ್ ಮುಖ್ಯಸ್ಥ, ದಿನೇಶ್ ಎಂಟರ್‌ಪ್ರೈಸಸ್ ಮಾಲೀಕ ಮತ್ತು ಶ್ರೀನಿವಾಸ ಸ್ಟೀಲ್ಸ್ ಮಾಲೀಕ ನೇರವಾಗಿ ಭಾಗಿಯಾಗಿರುವುದು ಆಂತರಿಕ ವಿಚಾರಣೆ ವೇಳೆ ಕಂಡು ಬಂದಿದ್ದು, ಇವರೆಲ್ಲರೂ ಸೇರಿ ನಂಬಿಕೆ ದ್ರೋಹ, ಕರ್ತವ್ಯ ಲೋಪ, ಅನಧಿಕೃತ ಲಾಭ, ಸಾಕ್ಷ್ಯ ನಾಶ ಹಾಗೂ ನಕಲಿ ದಾಖಲೆ ಸೃಷ್ಟಿ ಕೃತ್ಯಗಳಲ್ಲಿ ಭಾಗಿಯಾಗಿರುವ ಇವರ ವಿರುದ್ಧ ಹಾಗೂ ಇತರ ತಪ್ಪಿತಸ್ಥರುಗಳು ತನಿಖಾ ವೇಳೆ ಕಂಡು ಬಂದಲ್ಲಿ ಎಲ್ಲರ ವಿರುದ್ಧವೂ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪಿಇಎಸ್ ಕಾಲೇಜಿನ ಕಾರ್ಯದರ್ಶಿ ಎಸ್.ಎಲ್. ಶಿವಪ್ರಸಾದ್ ನೀಡಿದ ದೂರನ್ನು ಮಂಡ್ಯ ಸೆನ್ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 408, 409, 417, 420, 465, 471, 201ರಡಿ ದಾಖಲಿಸಿಕೊಂಡು, ಸಹಾಯಕ ಆಡಳಿತಾಧಿಕಾರಿ ಜೆ. ಶೇಷಪ್ಪ ನಗದು ವಿಭಾಗದ ದ್ವಿತೀಯ ದರ್ಜೆ ಸಹಾಯಕ ಎಂ.ಸಿ. ಸತೀಶ್ ಅವರನ್ನು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ.

ಖದೀಮನ ಬಂಧನ: ಸುಜುಕಿ ಆಕ್ಸಿಸ್ ವಶಕ್ಕೆ

ಮೈಸೂರು, ಜು.8– ದ್ವಿಚಕ್ರ ವಾಹನ ಕಳ್ಳನೋರ್ವನನ್ನು ಬಂಧಿಸಿರುವ ಎನ್.ಆರ್.ಠಾಣೆ ಪೊಲೀಸರು ನಂಬರ್ ಪ್ಲೇಟ್ ಇಲ್ಲದ ಸುಜುಕಿ ಆಕ್ಸಿಸ್ 125 ಸ್ಕೂಟರ್ ವಶಪಡಿಸಿಕೊಂಡಿದ್ದಾರೆ. ಮೈಸೂರಿನ ಕುರಿಮಂಡಿ ನಿವಾಸಿ ಕಾರ್ತಿಕ್ (19) ಬಂಧಿತ ಖದೀಮನಾಗಿದ್ದು, ಈತ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ನಂಬರ್‌ಪ್ಲೇಟ್ ಇಲ್ಲದ ಈ ಸ್ಕೂಟರ್ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದಾಗ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಆತನನ್ನು ವಿಚಾರಣೆಗೊಳಪಡಿಸಿದ ವೇಳೆ ಅಶೋಕ ರಸ್ತೆಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ಈ ಸ್ಕೂಟರ್ ಅನ್ನು ಕಳವು ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ ಎಂದು ಪೊಲೀಸರು ದಾಖಲಿಸಿಕೊಂಡಿರುವ ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಅಗತ್ಯ ವಸ್ತುಗಳ ದರ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ಮೈಸೂರು, ಜು.8(ಎಂಟಿವೈ)– ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಮಳೆ ನಡುವೆಯೂ ತಲೆ ಮೇಲೆ ಖಾಲಿ ಸಿಲಿಂಡರ್ ಹೊತ್ತು ರಸ್ತೆ ತಡೆ ನಡೆಸಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಅಗತ್ಯ ವಸ್ತುಗಳ ವಸ್ತುಗಳ ಬೆಲೆ ಏರಿಕೆ ಮೂಲಕ ಜನಸಾಮಾನ್ಯರನ್ನು ಸಂಕಷ್ಟಕ್ಕೆ ದೂಡಿದೆ. ಜನರ ಜೀವನ ನಿರ್ವಹಣೆ ಮಾಡುವುದೇ ಕಷ್ಟಕರವಾಗಿದೆ. ಈ ನಡುವೆ, ಗ್ಯಾಸ್ ಸಿಲಿಂಡರ್ ದರವೂ ದುಬಾರಿಯಾಗಿದೆ. ಇದನ್ನು ಕೊಳ್ಳಲಾಗದಂತಹ ಪರಿಸ್ಥಿತಿಯಲ್ಲಿ ಜನರು ಸಿಲುಕಿದ್ದಾರೆ. ಅಚ್ಛೇ ದಿನ್ ಬರುತ್ತದೆ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದ ಪ್ರಧಾನಿ ಮೋದಿಯವರು ದೇಶವನ್ನು ದುಸ್ಥಿತಿಗೆ ತಂದು ನಿಲ್ಲಿಸಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯುಪಿಎ ಸರ್ಕಾರದಲ್ಲಿ ಪ್ರಧಾನಿಯಾಗಿದ್ದ ಡಾ.ಮನಮೋಹನ್ ಸಿಂಗ್ ಸರ್ಕಾರದ ಅವಧಿಯಲ್ಲಿ ಸಿಲಿಂಡರ್ ದರ ಕಡಿಮೆ ಇತ್ತು. ಜತೆಗೆ ಸಬ್ಸಿಡಿಯನ್ನೂ ನೀಡಲಾಗುತ್ತಿತ್ತು. ಇದರಿಂದ 425 ರೂ.ಗೆ ಸಿಲಿಂಡರ್ ದೊರೆಯುತ್ತಿತ್ತು. ಆದರೀಗ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಿಲಿಂಡರ್ ದರ 1050 ರೂ. ಆಗಿದೆ. ಸಬ್ಸಿಡಿಯನ್ನೂ ಸ್ಥಗಿತಗೊಳಿಸಲಾಗಿದೆ. ದುಬಾರಿ ಬೆಲೆ ನೀಡಿ ಸಿಲಿಂಡರ್ ಕೊಳ್ಳಲು ಆಗದೆ ಹೊಲೆಯಲ್ಲಿ ಅಡುಗೆ ಮಾಡುವ ಸ್ಥಿತಿ ಮರುಕಳಿಸುತ್ತಿದೆ ಎಂದು ಕಿಡಿಕಾರಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗುತ್ತಿರುವುದರಿಂದ ಜೀವನ ನಿರ್ವಹಣೆ ದುಸ್ತರವಾಗಿದೆ. ಹೀಗಾಗಿ ಕೇಂದ್ರ ಸರ್ಕಾರ ಕೂಡಲೇ ಅಗತ್ಯ ವಸ್ತುಗಳ ದರವನ್ನು ಕಡಿಮೆ ಮಾಡಬೇಕು. ಜತೆಗೆ ಸಿಲಿಂಡರ್ ಬೆಲೆ ಇಳಿಕೆ ಮಾಡಿ ಸಾರ್ವಜನಿಕರ ಆರ್ಥಿಕ ಹೊರೆ ಕಡಿಮೆ ಮಾಡಬೇಕು ಎಂದು ಆಗ್ರಹಿಸಿದರು

ಪ್ರತಿಭಟನೆಯಲ್ಲಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಕೆಪಿಸಿಸಿ ಸದಸ್ಯೆ ವೀಣಾ, ಪಾಲಿಕೆ ಸದಸ್ಯ ಜೆ.ಗೋಪಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಭವ್ಯ, ಮುಖಂಡರಾದ ಜೋಗಿ ಮಹೇಶ್, ಮಾಜಿ ಪಾಲಿಕೆ ಸದಸ್ಯರಾದ ಎಂ.ಸುನೀಲ್, ಪ್ರದೀಪ್ ಕುಮಾರ್, ವಿಜಯ್ ಕುಮಾರ್, ಆಲನಹಳ್ಳಿ ಪುಟ್ಟಸ್ವಾಮಿ, ಲೋಕೇಶ್ ಕುಮಾರ್ ಮಾದಾಪುರ, ಡೈರಿ ವೆಂಕಟೇಶ್, ಕನಕ ಪತ್ತಿನ ಸಹಕಾರ ಸಂಘದ ನಿರ್ದೇಶಕರಾದ ಧರ್ಮೇಂದ್ರ, ಗುಣಶೇಖರ್, ಕೃಷ್ಣ, ಎಸ್.ಟಿ.ಘಟಕದ ಅಧ್ಯಕ್ಷ ರೋಹಿತ್, ರಂಜನ್, ಇಂದಿರಾ, ನಾಗರತ್ನ ಮಂಜುನಾಥ್, ಜ್ಯೋತಿ, ಅಲ್ಪ ಸಂಖ್ಯಾತರ ವಿಭಾಗದ ಮುಖಂಡರಾದ ಫಾರುಖ್, ನಾಸೀರ್, ವಿಶ್ವನಾಥ್(ವಿಶ್ವ) ಪೈಲ್ವಾನ್ ರವಿ, ವಿದ್ಯಾರ್ಥಿ ಕಾಂಗ್ರೆಸ್ ರಜತ್, ಕುರುಬಾರಳ್ಳಿ ಪ್ರಕಾಶ್ ಇನ್ನಿತರರು ಪಾಲ್ಗೊಂಡಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಜಮೀನು ಮಾರಾಟಕ್ಕಿದೆ
ನಂಜನಗೂಡಿನ ಬಸ್ ಸ್ಟಾಂಡ್ ನಿಂದ 8 ಕಿ.ಮೀ. ದೂರದಲ್ಲಿರುವ ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಪಕ್ಕದಲ್ಲಿ, ತಗಡೂರು ಮೈನ್ ರೋಡ್‌ನಲ್ಲಿ 90 ತೆಂಗಿನ ಮರಗಳಿರುವ, 4 ಎಕರೆ 3 ಗುಂಟೆ ಜಮೀನು ಮಾರಾಟಕ್ಕಿದೆ.
ಒಟ್ಟು ಬೆಲೆ 1 ಕೋಟಿ 84 ಲಕ್ಷ ರೂಪಾಯಿಗಳು.
ಶಿವಕುಮಾರ್ 9845875555
ಮಂಜುನಾಥ್ 7259592104 9164374021

S.K.CONSTRUCTION
ನಿಮ್ಮ ಕನಸಿನ ಮನೆ 20x30, 30x40 ನಮ್ಮ ನಿವೇಶನದಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ 90% Loan ಮಾಡಿಸಿ ಮನೆ ಕಟ್ಟಿ ಕೊಡುತ್ತೇವೆ.
9620528490

30x40 ಸೈಟು–30 ಲಕ್ಷ
40x60 ಸೈಟು–60 ಲಕ್ಷ
20x30 ಮನೆ–40 ಲಕ್ಷ ದಟ್ಟಗಳ್ಳಿ
20x30 ಡುಪ್ಲೆಕ್ಸ್ ಹೊಸ ಮನೆ
ಹಳೆ ಮನೆ, ಹೊಸಮನೆ ಸೈಟು
8618495118

ಜಮೀನು ಮಾರಾಟಕ್ಕಿದೆ
ಗದ್ದಿಗೆ ಮುಖ್ಯ ರಸ್ತೆಯಲ್ಲಿ ಮುದ್ದಯನಹುಂಡಿ ಗ್ರಾಮದಲ್ಲಿ 3 ಎಕರೆ, 4 ಗುಂಟೆ ತೆಂಗಿನತೋಟ ಮಾವಿನ ತೋಟ ಮಾರಾಟಕ್ಕಿದೆ.
8618848886
9945661696

ಗಾಯನ ಸ್ಪರ್ಧೆ
ನವಗಾಯಕರಿಗಾಗಿ ವೇದಿಕೆ
ಶಿವರಾಜ್ ಕಪ್
ತಾ॥ 10–07–2022. ಬೆಳಗ್ಗೆ 10ಕ್ಕೆ ಟೌನ್‌ಹಾಲ್, ಮೈಸೂರು
ಸಂಪರ್ಕಿಸಿ:
9902639553

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ANM / GNM ಆದವರಿಗೆ ಕೆಲಸವಿದೆ.
ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಎನ್‌ಐಇ ಕಾಲೇಜ್ ಪಕ್ಕ, ಮೈಸೂರು
9916908454

ಜಮೀನು ಮಾರಾಟಕ್ಕಿದೆ
ಮೈಸೂರು ಹೆಚ್.ಡಿ.ಕೋಟೆ, ಮುಖ್ಯ ರಸ್ತೆಯಲ್ಲಿ 1 ಎಕರೆ 18 ಗುಂಟೆ ಹಾಗೂ ಅದೇ ಗ್ರಾಮದಲ್ಲಿ 19 ಗುಂಟೆ ಸುತ್ತಲು ಕಾಂಪೌಂಡ್ ಗೇಟ್ ತಂತಿ ಬೇಲಿ ಅಳವಡಿಸಲಾಗಿದೆ. ಪೂರ್ಣ ಅಭಿವೃದ್ಧಿ ಪಡಿಸಲಾಗಿದೆ.
9945661696
8618848886

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000
9740733021 / 9535028750

ಶ್ರೀ ರಾಮ್ ಟೂರ್
ಅದೃಷ್ಟಶಾಲಿ ಆದರೆ ಉಚಿತ ಪ್ರವಾಸ ವಿಮಾನದಲ್ಲಿ ಪಿತೃ ಪಕ್ಷ ಪ್ರಯುಕ್ತ ಗಯಾ, ಕಾಶಿ, ಪುರಿ 9/9/22 ರಿಂದ ಮತ್ತು ದಸರಾ ಪ್ರಯುಕ್ತ 29/9/22 ರಿಂದ ನೇಪಾಳ, ಮುಕ್ತಿನಾಥ್, ಕಾಶಿ.
9108933383

SITES FOR SALE
FULLY DEVELOPED LAYOUT
30X40
30X50
MUDA APPROVED
15 mins / 6 Km from Railway Station
Near J.K Tyre Factory
K.R.S Road, Mysore
MOB : 9743532664

ಲೀಲಾ ಕನ್ವೆನ್ಷನ್ ಸೆಂಟರ್
ಮದುವೆ, ನಿಶ್ಚಿತಾರ್ಥ, ಜನ್ಮದಿನ ನಾಮಕರಣ ಹಾಗೂ ಇನ್ನಿತರ ಶುಭಸಮಾರಂಭಗಳಿಗೆ ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್‌ಗೆ ಸಂಪರ್ಕಿಸಿ:
9448572056
9886551940

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ. (T & C)
8050518881

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

ಬೈಕ್ ರೈಡರ್ ಬೇಕಾಗಿದ್ದಾರೆ
ರಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/- ವರೆಗೂ ಸಂಪಾದಿಸಿ. ಅಗತ್ಯ ದಾಖಲೆಗಳು DL, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
04045209698

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

Gem Selections
(A Part of Khanna Gems Group)
100% Natural Govt. Lab Certified Gemstones
ಶೇಕಡಾ 100 ರಷ್ಟು ನೈಸರ್ಗಿಕ ಸರ್ಕಾರಿ ಪ್ರಯೋಗಾಲಯದಿಂದ ಪ್ರಮಾಣಿಕೃತ ರತ್ನದ ಹರಳುಗಳು ದೊರೆಯುತ್ತವೆ.
HIG-3, Near Akshaya Bhandar, New Kantharaju Urs Rd. Kuvempu Nagar, Mysuru, Karnataka-570023
8152066999

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಜಮೀನು, ಮನೆ ಮತ್ತು ಸೈಟು ಮಾರಾಟಕ್ಕಿದೆ
1) 1 ಎಕರೆ 4 ಗುಂಟೆ ಟಾರ್ ರಸ್ತೆಗೆ ಸೇರಿದಂತೆ 1.75 ಲಕ್ಷ ಒಂದು ಗುಂಟೆಗೆ, ಜಯಪುರ ಹೋಬಳಿ, ಮಾರಡಗಳ್ಳಿ ಗ್ರಾಮದ ಹತ್ತಿರ 12 km. 2) 15 ಗುಂಟೆ ವಸತಿ ಬಡಾವಣೆಗಳ ಮಧ್ಯ ಭಾಗದಲ್ಲಿ 4.50 ಲಕ್ಷ ಒಂದು ಗುಂಟೆಗೆ, ಜಯಪುರ ಹೋಬಳಿ, ಮಾರಡಗಳ್ಳಿ ಗ್ರಾಮದ ಹತ್ತಿರ 11 km. 3) 2 ಹಂತಸ್ತಿನ, 4 Rooms (Attached Bath-room), 2 Dinning Hall, Kitchen, Pooja Room ಉಳ್ಳ 20x30, ಮನೆ ಮಾರಾಟಕ್ಕಿದೆ. ಸ್ಥಳ: ಜೆ.ಪಿ.ನಗರ JSS Central School ಪಕ್ಕದಲ್ಲಿ 56 ಲಕ್ಷ. 4) ಹುಣಸೂರು ರಸ್ತೆ ಇಲವಾಲಗೆ ಹೊಂದಿಕೊಂಡಂತೆ ನಿತ್ಯಾನಂದ ಬಡಾವಣೆಯಲ್ಲಿ ಮೈಸೂರಿನಿಂದ ಕೇವಲ 14 km ನಲ್ಲಿ 30x40 ಈಶಾನ್ಯ ಮುಖದ ಮೂಲೆ ನಿವೇಶನ ಮಾರಾಟಕ್ಕಿದೆ 28 ಲಕ್ಷ. ಈ ಕೂಡಲೇ ಕೊಳ್ಳಲು ಬಯಸುವವರು ಸಂಪರ್ಕಿಸಿ.
7996504996 / 9731673778

ಸೋಲಾರ್ ವಾಟರ್ ಹೀಟರ್
Solar Water Heater

ಸೇಲ್ಸ್, ಸರ್ವೀಸ್ ರಿಪೇರಿ, ಎಕ್ಸ್‌ಚೇಂಜ್ ಹಾಗೂ ಬಿಡಿ ಭಾಗಗಳಿಗಾಗಿ ಸಂಪರ್ಕಿಸಿ
Vinaykrishna
9611648636

SITES FOR SALE
FULLY DEVELOPED LAYOUT
35x40 MUDA APPROVED
CNM LAYOUT
North/ East corner,
Near St Joseph's school ,
Opp. Telecom Layout
Hunsur Road, Belavadi
MOB : 9743532664

ಅಡುಗೆ ಕೆಲಸ & ಮನೆ ಕೆಲಸ ಮಾಡುವ ಇಬ್ಬರು ಹೆಂಗಸರು ಬೇಕಾಗಿದ್ದಾರೆ
ವಯಸ್ಸು: 45 ವರ್ಷ ಒಳಗೆ ಇರುವವರಿಗೆ ಮಾತ್ರ, ಉಚಿತವಾಗಿ ವಸತಿ ನೀಡಲಾಗುವುದು. ಆಕರ್ಷಕ ವೇತನ, ಗಣೇಶ್ ರೆಸಿಡೆನ್ಸಿ ಅಪಾರ್ಟ್‌ಮೆಂಟ್, ಬಾಲಕೃಷ್ಣರಾವ್ ರಸ್ತೆ, ಚಾಮರಾಜಪುರಂ. ಸಂಪರ್ಕಿಸಿ:
9008355847

ಶೀಘ್ರ ಖರೀದಿ
ಸೈಟು / ಮನೆ / ಜಮೀನು / ವಾಣಿಜ್ಯ ಮಳಿಗೆ / ಫ್ಯಾಕ್ಟರಿಗಳನ್ನು ಮೈಸೂರು / ವಿವಿಧ ಜಾಗಗಳಲ್ಲಿ ಮಾರಾಟ ಮಾಡಲಿಚ್ಛಿಸುವವರು ಸಂಪರ್ಕಿಸಿ.
SRA:
9035005046

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970


V-GUARD
V-GUARD GEYSER
BEST OFFER PRIZE
Solar Water Heater SALES & SERVICE
SUNZONE SOLAR SYSTEM
VM Double Road, Kuvempunagar, Mysuru
9845175443

FOR SALE
MUDA APPROVED
40X60
East Facing @ 28 Lakhs
in Telecom Layout.
IMMEDIATE REGISTRATION
Off Hunsur Bypass Road
Contact
98800 65122 / 77956 09173

WANTED
1) Office Assistant with Computer Knowledge in Excel Experience
2) CNC & VMC Trained Operators (Experienced)
9880104160
9880050459

FOR SALE
A) 30x40 HD Kote Road
B) 30x50 Saptamantruke Layout attch
C) 40x60 Bannur Road KBL Layout
D) 0.28 land Narasipura Road
E) 30x40 site and House JP Nagar
PRAKRUTHI PROPERTIES
9035990359
9538690359

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು
ಕೊರಿಯರ್ ಸೌಲಭ್ಯವಿದೆ.
9743217566
9108418233

Godown for Rent
In Yadavagiri Industrial Area, Mysore, 4200 sq.ft. godown for rent.
Mob: 9886081652
(Brokers Excuse)

House for Rent / Lease
* 3 BHK Duplex independent house Vijayanagar 3rd Stage.
* 40x60, 3 BHK independent house Vijayanagar 2nd Stage.
* 2 BHK independent house for rent / lease Vijayanagar 2nd Stage.
* 3 BHK house for lease J.P. Nagar.
Mob: 9743532664

ಪ್ರಮಾಣ ಪತ್ರ
ಕೆ.ಆರ್. ಮಂಜುನಾಥ ಆದ ನಾನು ನಂ. 4303, ಕೆಡಿ. ಸರ್ಕಲ್, 6ನೇ ಕ್ರಾಸ್, 19ನೇ ಮೇನ್, ವಿಜಯನಗರ 2ನೇ ಹಂತ, ಮೈಸೂರು ಸಿಟಿ, ಇಲ್ಲಿ ವಾಸವಿದ್ದು, ನನ್ನ ತಂದೆಯ ಹೆಸರು ಕೆ.ಎನ್. ರಾಮಸ್ವಾಮಿ ಆಗಿದ್ದು, ನಾನು ಕಾರ್ಯನಿರ್ವಹಿಸಿದ್ದ ಮೆ. ಶಾಹಿ ಎಕ್ಸ್‌ಪೋರ್ಟ್ ಪ್ರೈ.ಲಿ. ನ ದಾಖಲಾತಿಗಳಲ್ಲಿ ಅವರ ಹೆಸರು ರಾಮಸ್ವಾಮಿಗೌಡ ಎಂದು ತಪ್ಪಾಗಿ ನಮೂದಾಗಿರುತ್ತದೆ. ನನ್ನ ತಂದೆಯ ಸರಿಯಾದ ಹೆಸರು ಕೆ.ಎನ್. ರಾಮಸ್ವಾಮಿ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
ಸಹಿ/– ಕೆ.ಆರ್. ಮಂಜುನಾಥ

Wanted Telecallers
Interview 10.30 to 4 pm, 9.7.2022 & 11.7.2022
ADMIRE SERVICE'S
41/6, 3rd Floor, Sri Krishna Nagar, Yaraganahalli, Mysore-570 011.
Contact:
9945549605 / 6363647202

WANTED
Required Office Accountant
Education: Degree with (Tally ERP-9 & GST return). Experience should be 3-4 years. Interested candidates send your CV to
admin@nimishsecurity.in
Nimish security Services Pvt. Ltd.
Contact with bio-data: #14/A, 2nd Floor, Krishna Vilas Road, Mysore-570 001.
Mob: 9513999755

ಕೆಲಸಕ್ಕೆ ಬೇಕಾಗಿದ್ದಾರೆ
ಯುವತಿಯರು (20 – 30 ವರ್ಷ)
ವಿದ್ಯಾರ್ಹತೆ– 2nd PUC & ಯಾವುದೇ ಪದವಿ.
ಸೆರಾಕೇರ್ ಹೆಲ್ತ್ ಸೆಂಟರ್
ನ್ಯೂ ಕಾಂತರಾಜು ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
8296366894
7996011692

ಶ್ರೀ ಮಾರುತಿ ರಿಯಲ್ ಎಸ್ಟೇಟ್
ಸೈಟುಗಳು ಬೇಕಾಗಿದೆ.
MUDA & MUDA Approved
9741966101

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಅನಿಮಲ್ ಫೀಡ್ ಕಂಪನಿಗೆ ಪ್ಯಾಕಿಂಗ್, ಲೋಡಿಂಗ್ ಕೆಲಸಕ್ಕೆ 18 ರಿಂದ 50 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 12382/–, ಇಎಸ್‌ಐ+ಪಿಎಫ್+ಬೋನಸ್ ಇರುತ್ತದೆ.
ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್‌ಪ್ರೈಸಸ್
ಲೋಕೇಶ್: 8722844236
ಸಂದರ್ಶನ – CIPET ಕಾಲೇಜು ಹತ್ತಿರ
ಬೆಳಿಗ್ಗೆ – 10 ಗಂಟೆಯಿಂದ – 11.30 ರವರೆಗೆ

ಮನೆ ಬಾಡಿಗೆಗೆ /ಭೋಗ್ಯಕ್ಕೆ ಇದೆ
1st Floor, 2BHK
ಕರ್ನಾಟಕ ಬ್ಯಾಂಕ್ ಎದುರು, ಚಂದನ ಬಡಾವಣೆ, ಬೋಗಾದಿ, ಮೈಸೂರು.
9342188460

LAPTOP AND CCTV
All Type Services
* Laptop Ram and Hard Disk
* Software upgradation
* Screen replacement
* Not getting on issues
* Mother Board Service.
* CCTV Installation
* CCTV Repair and Service
* Hikvision C P Plus, Dhaua
Door step service available
8867342697

ಜಮೀನು ಮಾರಾಟಕ್ಕಿದೆ
ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ, ಕೋಮ್ಮೇರಹಳ್ಳಿ ಗ್ರಾಮದಲ್ಲಿ 1 ಎಕರೆ– 7 ಗುಂಟೆ ಜಮೀನು ಮಾರಾಟಕ್ಕಿದೆ.
9483084345
6362703932

ಬೇಕಾಗಿದ್ದಾರೆ
ಮೈಸೂರಿನಲ್ಲಿ ಕಾರ್ಯನಿರ್ವಹಿಸಲು ವಿಡಿಯೋ ಎಡಿಟರ್, ಮೈಸೂರು ವರದಿಗಾರರು, ನಿರೂಪಕ/ನಿರೂಪಕಿಯರು ತಕ್ಷಣವೇ ಬೇಕಾಗಿದ್ದಾರೆ. ಆಕರ್ಷಕ ವೇತನ ಲಭ್ಯವಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
6366313175

SITES FOR SALE
20x30 - 12.60 Lakhs
30x40 - 25.20 Lakhs
Bank Loan upto 75%, Ready for Registration, Near Gurur Bus Stop, Ramabainagar, Mysore, DTCP approved, (Corporation Limits) 1.5 kms from J P Nagar Ring Road.
8660105902

ಮುಡಾ ಸೈಟು ಮಾರಾಟಕ್ಕಿದೆ
30x40 E/F ಜೆ.ಪಿ.ನಗರ ರಿಂಗ್ ರೋಡ್ ಹತ್ತಿರ, ತಕ್ಷಣ ರಿಜಿಸ್ಟ್ರೇಷನ್ ಮಾಡಿಕೊಳ್ಳುವವರು ಸಂಪರ್ಕಿಸಿ.
ಬ್ರೋಕರ್ಸ್ ಕ್ಷಮಿಸಿ
8546828933

ಬೇಕಾಗಿದ್ದಾರೆ
ಟಾಟಾ ಏಸ್ ಗೂಡ್ಸ್ ಗಾಡಿ ಓಡಿಸಲು ನುರಿತ, ಲೈಸೆನ್ಸ್ ಉಳ್ಳ ಡ್ರೈವರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ.
ಬಾಲಕೃಷ್ಣ ಪ್ರಾವಿಜನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್

ನೋವು ನಿವಾರಣೆ
ಮಂಡಿ ನೋವು, ಸೊಂಟ ನೋವು, ಬೆನ್ನು ನೋವು, ಕೈಕಾಲು ನೋವು ಇವುಗಳಿಗೆಲ್ಲಾ ನಾವು ನಿಮ್ಮ ಮನೆಗೆ ಬಂದು ಆಯುರ್ವೇದಿಕ್ ಎಣ್ಣೆ ಹಚ್ಚಿ ಮಸಾಜ್ ಮಾಡುತ್ತೇವೆ. ಸಂಪರ್ಕಿಸಿ
9448434190

ಕೆಲಸಕ್ಕೆ ಬೇಕಾಗಿದ್ದಾರೆ
ಪ್ರತಿಷ್ಠಿತ ಬೇಕರಿಯಲ್ಲಿ ಕಾರ್ಯ ನಿರ್ವಹಿಸಲು ಸೇಲ್ಸ್ ಮೆನ್ ಹಾಗೂ ಸೂಪರ್‌ವೈಸರ್‌ಗಳು ಬೇಕಾಗಿದ್ದಾರೆ. ಉಚಿತ ಊಟ, ವಸತಿಯೊಂದಿಗೆ ಉತ್ತಮ ಸಂಬಳ ನೀಡಲಾಗುತ್ತದೆ.
ವಿದ್ಯಾರ್ಹತೆ: SSLC / PUC
9611479167 / 9019876412

SITE FOR SALE
ನಿವೇಶನ ಮಾರಾಟಕ್ಕಿದೆ
ಸಾತಗಳ್ಳಿ DTS ರಾವ್‌ನಗರದಲ್ಲಿ 30x40 ಅಳತೆಯ ನಿವೇಶನ ರಿಂಗ್ ರೋಡ್‌ನಿಂದ 200mts ಸಮೀಪವಿದ್ದು, ಮಾರಾಟಕ್ಕಿದೆ ಎಲ್ಲಾ ಮೂಲ ದಾಖಲಾತಿ ಇರುತ್ತದೆ. ಸಂಪರ್ಕಿಸಿ
9845199932 / 9482746287

ಉಚಿತ ಉಚಿತ ಉಚಿತ
JESWA ಸಂಸ್ಥೆಯಿಂದ ಮೈಸೂರಿನಲ್ಲಿ OBC, Minarity ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿ (SC, ST) 35 ವರ್ಷ ಒಳಗೆ ಇರುವ ನಿರುದ್ಯೋಗ ಯುವತಿಯರು ಮತ್ತು ಮಹಿಳೆಯರಿಗೆ ಉಚಿತ ಬ್ಯೂಟಿ ಪಾರ್ಲರ್ ಮತ್ತು ಟೈಲರಿಂಗ್ ತರಬೇತಿ ನೀಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9844264134 / 9844736136

HOUSE FOR SALE
30x40 MUDA NEW 4 BHK Duplex, East Facing Site, at Ramkrishnagar, Near Andolana Circle - 1.55 Cr.
30x40 NEW 3 BHK Duplex with Borewell, N/F Site & E/F Door, Vijayanagar 4th Stage - 1.58 Cr.
(Brokers Excuse)
8660105902

FOR HOME INTERIORS & KITCHENS
100% NEEM PLYWOOD & DOORS
@ DIRECT FACTORY RATES
SS BUILD MART®
#1261, K.M. PURAM, BALLAL CIRCLE, MYSORE
Call: 9901291267 | 9845426862

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC/PUC Pass or Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ.
Benaka ITI
(NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ)
Near Cauvery Circle, Dr|| Rajkumar Road, Raghavendra Nagar, Mysore.
9342123467 / 9141756695

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು, ಹುಡುಗಿಯರು ಬೇಕಾಗಿದ್ದಾರೆ.
ವಯಸ್ಸು 20 ರಿಂದ 25
8123532073

ತಕ್ಷಣ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ರೋಟಿ ಮತ್ತು ನಾರ್ತ್ ಇಂಡಿಯನ್ ಭಟ್ಟರು, ಕಾಫಿ ಟೀ ಮಾಡುವವರು, ಚೈನೀಸ್ ಮತ್ತು ಚಾಟ್ಸ್ ಮಾಡುವವರು, ಕೌಂಟರ್‌ಗಳು ದೋಸೆಭಟ್ಟರು ಬೇಕಾಗಿದ್ದಾರೆ. ಕ್ಲೀನರ್‌ಗಳು ಬೇಕಾಗಿದ್ದಾರೆ.
8088337564

ಜಮೀನು ಮಾರಾಟಕ್ಕಿದೆ
ಹೆಚ್.ಡಿ.ಕೋಟೆ, ಹುಲ್ಲಹಳ್ಳಿ ಮುಖ್ಯರಸ್ತೆಯಲ್ಲಿ ತಳೂರು ಸರ್ಕಲ್, ಮಾರಡಗಳ್ಳಿ ಗ್ರಾಮದಲ್ಲಿ 1 ಎಕರೆ 4 ಗುಂಟೆ ಮಾವಿನ ತೋಟ ಮಾರಾಟಕ್ಕಿದೆ. ಅಕ್ಕಪಕ್ಕದಲ್ಲಿ ವಸತಿ ಬಡಾವಣೆಯಾಗಿದ್ದು ಪೂರ್ಣ ಅಭಿವೃದ್ಧಿ ಮಾಡಲಾಗಿದೆ.
7483381701

HOUSE FOR SALE
20x30 Duplex House, 3 Bedroom, 3 Bath-room, Vijayanagar 4th Stage, Mysore.
Price: 78 Lakhs
9036153565

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ South Indian ಅಡುಗೆಯವರು ಬೇಕಾಗಿದ್ದಾರೆ. ಸ್ಥಳ: Sullia
9902176566

ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್, ಕನ್ನಡ ಅನುಭವವುಳ್ಳವರು, ವಯಸ್ಸು 35 ವರ್ಷ ಮೇಲ್ಪಟ್ಟವರು, ಗಂಡಸರಿಗೆ ಮಾತ್ರ. ಸಂಪರ್ಕಿಸುವ ಸಮಯ ಬೆಳಿಗ್ಗೆ 11 ರಿಂದ 3, ಮೈಸೂರು ಡಿಸ್ಟ್ರಿಕ್ಟ್ ಲೋಡರ್ಸ್ ಟ್ರಾನ್ಸ್ ಪೋರ್ಟ್ & ಜನರಲ್ ವರ್ಕರ್ ಅಸೋಸಿಯೇಷನ್, ನಂ.84/ಎ, 2ನೇ ತಿರುವು ಕಾವೇರಿ ಮಾರ್ಗ, "ಎ' ಬ್ಲಾಕ್, ಬಂಡಿಪಾಳ್ಯ, ಮೈಸೂರು – 570025
9900371970 / 9986866076

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಸೋಲಾರ್ ಕಂಪನಿಯಲ್ಲಿ ವಿವಿಧ ಹುದ್ದೆಗಳಿಗಾಗಿ ARC Welder, C02 Welder, Tig Welder, Electrician, Marketing Executive, Marketing Manager, Driver ಗಳು ಬೇಕಾಗಿದ್ದಾರೆ. ಊಟ ವಸತಿಯೊಂದಿಗೆ ಆಕರ್ಷಕ ವೇತನ ದೊರೆಯುತ್ತದೆ. ಸಂಪರ್ಕಿಸಿ.
9964832118 / 9980917976
ಸ್ಥಳ: ESSAR Products Pvt. Ltd., #19/A, Kadakola Industrial Area, Mysore-571311

WANTED BRIDE
Age 26 to 35 year, For Kerala (Thrissur), Christian (R.C) Boy, Graduated Age-39, Hight-5.5, Working @ Leading Jewellery Store as a General Manager, Bangalore.
9986894434 / 9482269283

RS CONSTRUCTIONS
Engineers & Contractors
ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ.
ದರ 1,70,000 ಪ್ರತಿ ಚದರ
ಹಳೆಯ & ಹೊಸ ಮನೆಗಳಿಗೆ Water Proofing ಮಾಡಿಕೊಡಲಾಗುತ್ತದೆ.
9538575009 / 8660384527

ಉಚಿತ ಉಚಿತ ಉಚಿತ
25Kg ಹಳೆಯ BT ರೈಸನ್ನು ಖರೀದಿಸಿದರೆ 5Kg ಬ್ರಾಂಡೆಡ್ ಗೋದಿಹಿಟ್ಟು, 2Kg ಸಕ್ಕರೆ, 1Kg ಫೈನ್ ತೊಗರಿಬೇಳೆ, ಉಚಿತ
ಬೆಲೆ ರೂ 1350/- ಮಾತ್ರ (ಷರತ್ತು ಅನ್ವಯ)
ಸನ್‌ಶೈನ್ ಟ್ರೇಡರ್ಸ್, ಶಿವರಾಂಪೇಟೆಯ ಮೋರ್ ಹತ್ತಿರ ಮೈಸೂರು
9206470833

ತಕ್ಷಣ ಬೇಕಾಗಿದ್ದಾರೆ
ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಅನುಭವವಿರುವ / ಇಲ್ಲದಿರುವ ಯುವಕ, ಯುವತಿಯರು, ಮಹಿಳೆಯರು, ವಿಧವೆಯರು, ವಿಚ್ಛೇದಿತೆಯರು ತಕ್ಷಣ ಸಂಪರ್ಕಿಸಿ. ಮೊದಲು ಬಂದವರಿಗೆ ಆದ್ಯತೆ.
(ಸರ್ಕಾರಿ ನೊಂದಾಯಿತ ಸಂಸ್ಥೆ)
9035113222 / 9513203333

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮೈಸೂರು ಭಾಗದ ಜನತೆಗೆ ಸುವರ್ಣಾವಕಾಶ
ನಿಮ್ಮ ಎಲ್ಲಾ ಘನಘೋರ ಸಮಸ್ಯೆಗಳಿಗೂ ನೇರ ನಿಖರ ಖಚಿತ ಭವಿಷ್ಯ ಮತ್ತು ಪರಿಹಾರ ಮಂಗಳೂರು ಮೂಲದ ಬೆಂಗಳೂರಿನ ಪ್ರಖ್ಯಾತ ಜ್ಯೋತಿರ್ವಿಜ್ಞಾನಿ ಶ್ರೀವಿಜಯ ಶ್ರೀನಿವಾಸ್ ಗುರೂಜಿ ದಿನಾಂಕ 26 ಜುಲೈ 2022 ರಂದು ಮೈಸೂರಿನ ಪ್ರತಿಷ್ಠಿತ ಸುಹಾಸಿನಿ ಪ್ಯಾಲೇಸ್ ಹೋಟೆಲ್ ನಲ್ಲಿ ಮೊದಲೇ ಅಪಾಯಿಂಟ್ಮೆಂಟ್ ತೆಗೆದುಕೊಂಡು ಭೇಟಿಮಾಡುವ ಎಲ್ಲರಿಗೂ ಖಚಿತ ಭವಿಷ್ಯ ಮತ್ತು ಪರಿಹಾರಗಳನ್ನು ತಿಳಿಸಿಕೊಡಲಿದ್ದಾರೆ
ಅಪಾಯಿಂಟ್ಮೆಂಟ್‌ಗಾಗಿ ಸಂಪರ್ಕಿಸಿ ಸೀಮಿತ ಜನರಿಗೆ ಮಾತ್ರ ಅವಕಾಶ
ಮೊ: 9663463029

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಃಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೊಳ್ಳೇಗಾಲ ಜ್ಯೋತಿಷ್ಯರು ನಂ. 01 ಮೋಡಿ ಮಾಂತ್ರಿಕರು
ಪಂ. ಎಸ್. ಕುಮಾರಸ್ವಾಮಿ
Mob: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಃಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ: ಎ.ಟಿ.ಎಂ. ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್), ಬಿ.ಎನ್. ರೋಡ್, ಕೆ.ಎಸ್.ಆರ್.ಟಿ.ಸಿ. ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ
ರೂ. 630 ಮಾತ್ರ

ಕೊಡಗಲ್ಲಿ ಮಳೆ ಅಬ್ಬರದಿಂದ 9 ಮನೆಗಳಿಗೆ ಹಾನಿ

● ಎರಡು ಕಡೆ ಭೂ ಕುಸಿತ, 31 ವಿದ್ಯುತ್ ಕಂಬಗಳು ಧರೆಗೆ ● ಪ್ರವಾಹದ ಭೀತಿ ● ಮಳೆ ಕಡಿಮೆಯಾದರೂ ಕೊರೆಯುವ ಚಳಿ ● ಭಾಗಮಂಡಲದ ಸುತ್ತ-ಮುತ್ತ ರಸ್ತೆ ಸಂಚಾರ ಬಂದ್ ● ಇಂದು ಸಹ ಶಾಲಾ-ಕಾಲೇಜುಗಳಿಗೆ ರಜೆ







ಮಡಿಕೇರಿ,ಜು.8– ಕೊಡಗು ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, 9 ಮಳೆಗಳು ಹಾನಿಯಾಗಿದ್ದು, ಎರಡು ಕಡೆ ಭೂ ಕುಸಿತವಾಗಿದೆ 31 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ.

ಇದರೊಂದಿಗೆ ಪ್ರವಾಹ ಭೀತಿ ಎದುರಾಗಿದೆ. ಭಾರೀ ಮಳೆ ಹಿನ್ನೆಲೆಯಲ್ಲಿ ಶನಿವಾರ ಬೆಳಗ್ಗೆ 8.30ರವರೆಗೆ ಜಿಲ್ಲೆಯಾದ್ಯಂತ ಮತ್ತೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಮಳೆ ಮುಂದುವರೆದಿರುವ ಹಿನ್ನೆಲೆ ಶನಿವಾರವೂ ಶಾಲಾ ಕಾಲೇಜುಗಳಿಗೆ ಜಿಲ್ಲಾಡಳಿತ ರಜೆ ಘೋಷಿಸಿದೆ.

ಕಳೆದ 24 ಗಂಟೆ ಅವಧಿಯಲ್ಲಿ ಮಡಿಕೇರಿ ತಾಲೂಕಿನ ಗಾಳಿಬೀಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 146.5 ಮಿ.ಮೀ ಹಾಗೂ ಮದೆನಾಡು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 125 ಮಿ.ಮೀ ದಾಖಲೆಯ ಮಳೆ ಸುರಿದಿರುವುದಾಗಿ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ. ಭಾರೀ ಗಾಳಿಗೆ ಮರಗಳು ಮುರಿದು ಬಿದ್ದು, ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ದುರಸ್ಥಿ ಕಾರ್ಯ ನಡೆಸಲಾಗುತ್ತಿದೆ. ಕೆಲವು ಕಾಫಿ ತೋಟಗಳ ಒಳಗೆ ಹಾದು ಹೋಗಿರುವ ವಿದ್ಯುತ್ ಲೈನ್‌ಗಳಿಗೆ ಹಾನಿಯಾಗಿದ್ದು, ಗ್ರಾಮೀಣ ಭಾಗಗಳಲ್ಲಿ ವಿದ್ಯುತ್ ಪೂರೈಕೆ ಸ್ಥಗಿತವಾಗಿರುವ ಬಗ್ಗೆ ವರದಿಯಾಗಿದೆ. ಜಿಲ್ಲಾದ್ಯಂತ ಶುಕ್ರವಾರ ಮಳೆಯ ತೀವ್ರತೆ ಕಡಿಮೆ ಇತ್ತಾದರೂ ದಟ್ಟ ಮಂಜು ಸಹಿತ ಮೈ ಕೊರೆಯುವ ಚಳಿಯ ವಾತಾವರಣ ಕಂಡು ಬಂದಿದೆ.

ಭಾಗಮಂಡಲ, ತಲಕಾವೇರಿ ವ್ಯಾಪ್ತಿಯಲ್ಲಿ ಮಳೆ ಬಿರುಸು ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಭಾಗಮಂಡಲ–ಅಯ್ಯಂಗೇರಿ ರಸ್ತೆಯಲ್ಲಿ ಪ್ರವಾಹ ನೀರಿನ ಪ್ರಮಾಣ ಇಳಿಕೆಯಾಗಿದ್ದರೂ ರಸ್ತೆ ಸಂಪರ್ಕ ಬಂದ್ ಆಗಿದೆ. ನೆಲ್ಯಹುದಿಕೇರಿ, ಕರಡಿಗೋಡು ಸೇರಿದಂತೆ ಕಾವೇರಿ ನದಿ ಪಾತ್ರದಲ್ಲಿ ಪ್ರವಾಹದ ಆತಂಕ ಮುಂದುವರೆದಿದೆ.

ಮಡಿಕೇರಿಯ ಟರ್ಫ್ ಹಾಕಿ ಮೈದಾನದ ಬಳಿ ಭೂ ಕುಸಿದು ಬಿದ್ದು, ರಸ್ತೆಗೆ ಹಾನಿಯಾಗಿದೆ. ಸ್ಥಳದಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ ವಾಹನ ಸವಾರರಿಗೆ ಸುರಕ್ಷಿತವಾಗಿ ಚಲಿಸುವಂತೆ ಸೂಚಿಸಲಾಗಿದೆ.

ಭಾರೀ ಮಳೆಗೆ ಗಾಳಿಬೀಡು ವ್ಯಾಪ್ತಿಯ ಒಂದನೇ ಮೊಣ್ಣಂಗೇರಿಯಲ್ಲಿ ಬೆಟ್ಟ ಕುಸಿದು ಅಪಾರ ಪ್ರಮಾಣ ನಷ್ಟ ಸಂಭವಿಸಿದೆ. ಗ್ರಾಮದ ಐರೀರ ವೆಂಕಪ್ಪ ಅವರ ಮನೆಯ ಮುಂದಿನ ತೋಟದ ಅರ್ಧ ಭಾಗ ಕುಸಿತಗೊಂಡಿದೆ. ಪರಿಣಾಮ ಸುಮಾರು 35 ಫಸಲು ಭರಿತ ಕಾಫಿ ಗಿಡಗಳು ನಾಶವಾಗಿದ್ದು, ಅಲ್ಲದೆ ವೆಂಕಪ್ಪ ಅವರ ಮನೆ ಅಪಾಯದ ಸ್ಥಿತಿಯಲ್ಲಿದೆ.

ಬೆಟ್ಟ ಕುಸಿದ ಸ್ಥಳದಲ್ಲಿ ಅಂತರ್ ಜಲ ಉಕ್ಕಿ ಹರಿಯುತ್ತಿದ್ದು, ಮತ್ತಷ್ಟು ಕುಸಿಯುವ ಸಾಧ್ಯತೆಗಳಿವೆ. ಮಡಿಕೇರಿ ತಾಲೂಕಿನ ಹೆರವನಾಡು ಗ್ರಾಮ ನಿವಾಸಿ ಶಕೇಶ್ ಎಂಬುವರ ಮನೆ ಗೋಡೆ ಕುಸಿದು ಬಿದ್ದು, ಶೇ.30ರಷ್ಟು ಹಾನಿಯಾಗಿದೆ. ಬಿಳಿಗೇರಿ ಗ್ರಾಮ ನಿವಾಸಿ ಚಿನ್ನಮ್ಮ ಎಂಬುವರ ಮನೆ ಬಹುತೇಕ ಕುಸಿದು ಬಿದ್ದಿದ್ದು, ಶೇ.60ರಷ್ಟು ನಷ್ಟ ಉಂಟಾಗಿದೆ. ಈ ಮನೆ ಪ್ರಸ್ತುತ ವಾಸಕ್ಕೆ ಸೂಕ್ತವಾಗಿರದ ಕಾರಣ ಮನೆ ಮಂದಿ ಸಂಬಂಧಿಕರ ಮನೆಯಲ್ಲಿ ಆಶ್ರಯ ಪಡೆದಿದ್ದಾರೆ. ಸೋಮವಾರಪೇಟೆ ತಾಲೂಕಿನ ಶಿರಂಗಾಲ ಸಮೀಪದ ಸಾಲುಕೊಪ್ಪಲು ಗ್ರಾಮದ ವಯೋವೃದ್ಧೆ ಸುಮಿತ್ರಮ್ಮ ಎಂಬವರ ಮನೆಯ 2 ಗೋಡೆಗಳು ಗುರುವಾರ ರಾತ್ರಿ ಸುರಿದ ಮಳೆಗೆ ಕುಸಿದು ಬಿದ್ದಿವೆ. ಮನೆಯಲ್ಲಿದ್ದ ದಿನ ಬಳಕೆ ವಸ್ತುಗಳಿಗೆ ಹಾನಿಯಾಗಿದ್ದು, ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದಾರೆ

ಸೋಮವಾರಪೇಟೆ ತಾಲೂಕಿನ ಶನಿವಾರಸಂತೆ ಹೋಬಳಿಗೆ ಸೇರಿದ ರಾಮನಹಳ್ಳಿ ಗ್ರಾಮದ ವಿನತ್ ಕುಮಾರ್ ಎಂಬವರ ಮನೆಯ ಮೇಲೆ ಶುಕ್ರವಾರ ಬೆಳಗಿನ 11.30ರ ಸಮಯದಲ್ಲಿ ಮರ ಮುರಿದು ಬಿದ್ದು, ಮನೆಗೆ ಹಾನಿ ಸಂಭವಿಸಿದೆ ಮನೆಯಲ್ಲಿ ವೃದ್ಧೆಯೊಬ್ಬರು ಅಡುಗೆ ಮಾಡುತ್ತಿದ್ದ ಸಂದರ್ಭ ಮರ ಬಿದ್ದಿದ್ದು, ಮನೆ ಮಂದಿ ಅಪಾಯದಿಂದ ಪಾರಾಗಿದ್ದಾರೆ. ಮನೆಯ ಮೇಲ್ಚಾವಣಿಯ ಹೆಂಚುಗಳು ಪುಡಿಯಾಗಿದ್ದು, ಗೋಡೆಗಳು ಬಿರುಕು ಬಿಟ್ಟಿವೆ. ಸ್ಥಳಕ್ಕೆ ಕಂದಾಯ ಇಲಾಖೆ ಅಧಿಕಾರಿ ಭೇಟಿ ನೀಡಿದ್ದರು.

ಕಾವೇರಿ ಮಾತೆ, ಕೊಡವರ ಬಗ್ಗೆ ಅವಹೇಳನ
ಡಿವೈಎಸ್ಪಿ, ಮಡಿಕೇರಿ ಕ್ರೈಂ ಬ್ರಾಂಚ್‌ಗೆ ದೂರು

ವಿರಾಜಪೇಟೆ,ಜು.8– ಸಾಮಾಜಿಕ ಜಾಲತಾಣಗಳಲ್ಲಿ ಕೊಡವರು ಹಾಗೂ ಕಾವೇರಿ ಮಾತೆಯ ವಿರುದ್ಧ ಅವಹೇಳನಕಾರಿ ನಿಂದನೆ ಮಾಡಿರುವ ವ್ಯಕ್ತಿಯ ವಿರುದ್ಧ ಸೂಕ್ತ ಕ್ರಮಕ್ಕೆ ಒತ್ತಾಯಿಸಿ ಅಖಿಲ ಕೊಡವ ಸಮಾಜ ಹಾಗೂ ಅಖಿಲ ಕೊಡವ ಸಮಾಜ ಯೂತ್ ವಿಂಗ್ ವಿರಾಜಪೇಟೆಯ ಡಿವೈಎಸ್ಪಿ ಹಾಗೂ ಮಡಿಕೇರಿ ಕ್ರೈಂ ಬ್ರಾಂಚ್ ವಿಭಾಗಕ್ಕೆ ದೂರು ನೀಡಿದೆ.



ಅಖಿಲ ಕೊಡವ ಸಮಾಜ ಅಧ್ಯಕ್ಷ ಮಾತಂಡ ಮೊಣ್ಣಪ್ಪ ಮಾರ್ಗದರ್ಶನದಲ್ಲಿ ಪ್ರಧಾನ ಕಾರ್ಯದರ್ಶಿ ಅಮ್ಮಣಿಚಂಡ ರಾಜ ನಂಜಪ್ಪ ಹಾಗೂ ಅಖಿಲ ಕೊಡವ ಸಮಾಜ ಯೂತ್ ವಿಂಗ್ ಅಧ್ಯಕ್ಷ ಚಮ್ಮಟೀರ ಪ್ರವೀಣ್ ಉತ್ತಪ್ಪ ನೇತೃತ್ವದಲ್ಲಿ ಡಿವೈಎಸ್ಪಿ ನಿರಂಜನ್ ರಾಜೇ ಅರಸ್ ಅವರಿಗೆ ದೂರು ನೀಡಿದರು.

ಈ ಸಂದರ್ಭ ಚಮ್ಮಟೀರ ಪ್ರವೀಣ್ ಉತ್ತಪ್ಪ ಮಾತನಾಡಿ, ಅನಾಮಧೇಯ ವ್ಯಕ್ತಿಯೊಬ್ಬರು ಕೊಡವರು, ಕೊಡವ ಮಹಿಳೆಯರು ಹಾಗೂ ಕೊಡವರ ಕುಲದೇವಿ ಕಾವೇರಿ ಮಾತೆಯನ್ನು ನಿಂದಿಸಿದ್ದಾರೆ. ಮಾತ್ರವಲ್ಲದೇ, ಅವಹೇಳನಕಾರಿ ಸಂದೇಶಗಳನ್ನು ವಾಟ್ಸಾಪ್, ಫೇಸ್ಬುಕ್, ಇನ್ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಕೂಡಲೆ ತನಿಖೆ ನಡೆಸಿ ಆರೋಪಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಎರಡು ಸಂಸ್ಥೆಗಳ ಪರವಾಗಿ ಮನವಿ ಮಾಡಿದರು. ಈಗಾಗಲೇ ಆರೋಪಿಯ ಬಗ್ಗೆ ಒಂದಿಷ್ಟು ಸುಳಿವು ದೊರೆತಿದ್ದು, ತನಿಖೆ ಪ್ರಾಥಿಯ ಹಂತದಲ್ಲಿದೆ. ಮಡಿಕೇರಿ ಠಾಣೆಯಲ್ಲಿ ಆರೋಪಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಸದ್ಯದಲ್ಲಿಯೇ ಆರೋಪಿ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಡಿವೈಎಸ್ಪಿ ನಿರಂಜನ್ ರಾಜೇ ಅರಸ್ ಹೇಳಿದರು. ಈ ಸಂದರ್ಭ ಯೂತ್ ವಿಂಗ್ ಸದಸ್ಯರಾದ ಮಲ್ಲಮಾಡ ಶಾಮಲ ಸುನಿಲ್, ಪೆಮ್ಮಂಡ ರೋಶನ್ ಪೆಮ್ಮಯ್ಯ ಇತರರು ಹಾಜರಿದ್ದರು.

ವಿರಾಜಪೇಟೆಯಲ್ಲಿ ಭಾರೀ ಮಳೆ: ಮನೆ, ವಿದ್ಯುತ್ ಕಂಬ ಜಖಂ

ವಿರಾಜಪೇಟೆ, ಜು.8– ವಿರಾಜಪೇಟೆ ತಾಲೂಕು ವ್ಯಾಪ್ತಿಯಲ್ಲಿ ಕಳೆದ ಒಂದು ವಾರದಿಂದ ಎಡಬಿಡದೆ ಸುರಿಯುತ್ತಿರುವ ಭಾರೀ ಮಳೆಯಿಂದಾಗಿ ಮರಗಳು ಮುರಿದು ಬಿದ್ದ ಪರಿಣಾಮ ತಾಲೂಕಿನ ಮಲ್ದಾರೆ ಗ್ರಾಮ ಹಾಗೂ ಇತರೆಡೆಗಳಲ್ಲಿ ಅನೇಕ ವಿದ್ಯುತ್ ಕಂಬಗಳು ನೆಲಕಚ್ಚಿ ಕೆಲವಡೆ ಮನೆಗಳಿಗೂ ಹಾನಿ ಉಂಟಾಗಿದೆ.

ವಿರಾಜಪೇಟೆ ಬಳಿಯ ಬೇಟೋಳಿ ಗ್ರಾಮದ ಗುಂಡಿಗೆರೆಯ ಎ.ಕೆ.ರಜಿಯ ಎಂಬುವರ ವಾಸದ ಮನೆಯು ಭಾಗಶಃ ಕುಸಿದು ಬಿದ್ದಿದೆ ಹಾಗೂ ಕೆದಮುಳ್ಳೂರು ತೋರ ಗ್ರಾಮದ ಭಾರತಿ ಎಂಬುವರ ವಾಸದ ಮನೆಯ ಮೇಲೆ ಮರ ಬಿದ್ದು ಹಾನಿಯಾಗಿದೆ. ಸ್ಥಳಕ್ಕೆ ಕಂದಾಯ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿ ಮಾಹಿತಿ ಸಂಗ್ರಹಿಸಿದ್ದಾರೆ. ಸಿದ್ದಾಪುರ ಮಲ್ದಾರೆ ಗ್ರಾಮದಲ್ಲಿ ಕಳೆದ ಒಂದು ವಾರದಲ್ಲಿ 18 ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು ಒಂದು ಟ್ರಾನ್ಸ್‌ಫಾರ್ಮರ್ ನೆಲಕ್ಕುರುಳಿದೆ, ಮಾಕುಟ್ಟ ಹಾಗೂ ವಿರಾಜಪೇಟೆ ವ್ಯಾಪ್ತಿ ಸೇರಿ ಒಟ್ಟು 50ಕ್ಕೂ ಹೆಚ್ಚು ವಿದ್ಯುತ್ ಕಂಬಗಳು



ಮುರಿದು ಬಿದ್ದಿರುವುದಾಗಿ ಸೆಸ್ಕಾಂ ಇಲಾಖೆ ಮೂಲಗಳು ತಿಳಿಸಿವೆ.

ದೌರ್ಜನ್ಯ ಪ್ರಕರಣಗಳಿಗೆ ಶೀಘ್ರ ಪರಿಹಾರ ವಿತರಿಸಿ

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚನೆ

ಚಾಮರಾಜನಗರ, ಜು.8–ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೀಘ್ರವಾಗಿ ಪರಿಹಾರ ವಿತರಿಸಲು ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯ 2ನೇ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ನಡೆಯುವ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರ ವಿತರಣೆಯಲ್ಲಿ ಯಾವುದೇ ವಿಳಂಬವಾಗಬಾರದು. ಗುಂಡ್ಲುಪೇಟೆ ಹಾಗೂ ಹನೂರು ಭಾಗದಲ್ಲಿ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿರುವುದು ಕಂಡು ಬಂದಿದೆ. ದೌರ್ಜನ್ಯ ಪ್ರಕರಣಗಳು ಜರುಗದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರ ಜೊತೆಗೆ ಇತರೆ ಸಮುದಾಯಗಳಿಗೂ



ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ನಿರ್ದೇಶನ ನೀಡಿದರು.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯಕ್ಕೆ ಕೆಲವು ಗ್ರಾಮಗಳಲ್ಲಿ ಸ್ಮಶಾನದ ಕೊರತೆಯಿದೆ ಈ ಹಿಂದೆ ಕಂದಾಯ ಇಲಾಖೆಯಿಂದ ನೀಡಿರುವ ಜಮೀನುಗಳು ಸಾಗುವಳಿಯಾಗಿದ್ದರೂ(1–5) ದುರಸ್ತಿಯಾಗಿಲ್ಲ. ಇದರಿಂದ ಸಮುದಾಯದ ರೈತರು ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಇದನ್ನು ಗಂಭೀರವಾಗಿ ಪರಿಗಣಿಸಿ. ಮುಂದಿನ ದಿನಗಳಲ್ಲಿ ಆಯಾಯ ತಹಸೀಲ್ದಾರ್ ನೇತೃತ್ವದಲ್ಲಿ ಜಿಲ್ಲೆಯ ಸಣ್ಣ ಗ್ರಾಮಗಳಲ್ಲಿ ಕಡಿಮೆ ಪ್ರಮಾಣದ ಸರ್ಕಾರಿ ಭೂಮಿ ಇದೆ ಎಂಬುದನ್ನು ಗುರುತಿಸಿ. ಸ್ಮಶಾನಕ್ಕೆ ಅಗತ್ಯವಿರುವ ಜಾಗ ನೀಡುವ ಬಗ್ಗೆ ಚಿಂತಿಸಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಕೊಳ್ಳೇಗಾಲದಲ್ಲಿ ನಿರ್ಮಾಣವಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದ ಕಾಮಗಾರಿ ಪೂರ್ಣಗೊಂಡಿದ್ದರೂ ಬಳಕೆಗೆ ಮುಕ್ತವಾಗಿಲ್ಲ. 15 ದಿನದೊಳಗೆ ಅಂಬೇಡ್ಕರ್ ಭವನ ಹಸ್ತಾಂತರಿಸುವಂತೆ ಜಿಲ್ಲಾಧಿಕಾರಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಮಲ್ಲಿಕಾರ್ಜುನ ಸಭೆಗೆ ಇಲಾಖೆ ಪ್ರಗತಿಯ ಮಾಹಿತಿ ನೀಡಿದರು. ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿ ದೇವಿ, ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾದ ಸಿದ್ದರಾಜು, ಅರುಣ್‌ಕುಮಾರ್, ಸೋಮೇಶ್ವರ್, ಆಸಿಫ್ ವುಲ್ಲಾ, ಪಶುಪಾಲನಾ ಇಲಾಖೆ ಉಪನಿರ್ದೇಶಕ ಡಾ.ಸುರೇಶ್, ತೋಟಗಾರಿಕೆ ಉಪನಿರ್ದೇಶಕ ಶಿವಪ್ರಸಾದ್, ಎಲ್ಲಾ ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಸಭೆಯಲ್ಲಿದ್ದರು.

ಜ್ಯೋತಿಗೌಡನಪುರ ಗ್ರಾಪಂನಲ್ಲಿ ಅಧ್ಯಕ್ಷೆ, ಪಿಡಿಓರಿಂದ ಅಕ್ರಮ ಕಾಮಗಾರಿ
ಸದಸ್ಯರಿಂದ ಸಾಮಾನ್ಯ ಸಭೆ ಬಹಿಷ್ಕರಿಸಿ ಪ್ರತಿಭಟನೆ

ಚಾಮರಾಜನಗರ, ಜು.8(ಎಸ್‌ಎಸ್)– ತಾಲೂಕಿನ ಜ್ಯೋತಿಗೌಡನಪುರ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷೆ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ 9 ಲಕ್ಷಕ್ಕೂ ಹೆಚ್ಚು ಅಕ್ರಮ ಕಾಮಗಾರಿ ನಡೆಸಿ, ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿ ಸದಸ್ಯರು ಪಂಚಾಯಿತಿಯಲ್ಲಿ ಶುಕ್ರವಾರ ಕರೆದಿದ್ದ ಸಾಮಾನ್ಯ ಸಭೆ ಬಹಿಷ್ಕರಿಸಿ, ಪ್ರತಿಭಟಿಸಿದರು.

ಸದಸ್ಯರಾದ ನಲ್ಲೂರು ಶ್ರೀನಾಥ್, ಭೂಮಿಕಾ ಮಂಜು ನೇತೃತ್ವದಲ್ಲಿ ಹೆಚ್.ಬಿ.ಲೋಕೇಶ್, ನಿಂಗನಾಯಕ, ನಿತ್ಯಾಶ್ರೀ, ಮೀನಾ, ಚಿಕ್ಕತಾಯಮ್ಮ, ಯಶೋಧ, ಭಾಗ್ಯಮ್ಮ, ಸವಿತಾ ಅವರು ಸಾಮಾನ್ಯ ಸಭೆ ಬಹಿಷ್ಕರಿಸಿ, ಸಭಾಂಗಣದದಿಂದ ಹೊರಬಂದು ಪ್ರತಿಭಟಿಸಿ ಅಧ್ಯಕ್ಷರು, ಪಿಡಿಓ, ಸಿಇಓ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ನಲ್ಲೂರು ಶ್ರೀನಾಥ್ ಮಾತನಾಡಿ, ಪಂಚಾಯಿತಿ ಸದಸ್ಯರ ಗಮನಕ್ಕೆ ತರದೆ, ಟೆಂಡರ್ ಸಹ ಕರೆಯದೆ ಏಕಪಕ್ಷೀಯವಾಗಿ ಅಧ್ಯಕ್ಷೆ ರಾಜಮ್ಮ, ಪಿಡಿಓ ನವೀನ್, ಅಧ್ಯಕ್ಷರ ಪುತ್ರ ಮಹದೇವಸ್ವಾಮಿ ಸೇರಿ



ಕೊಂಡು ಅನೇಕ ಅಕ್ರಮ ಕಾಮಗಾರಿ ನಡೆಸಿದ್ದಲ್ಲದೆ, ಕೆಲವು ಕಾಮಗಾರಿ ನಡೆಸದೇ ಬಿಲ್ ಮಾಡಿಕೊಂಡು ಹಣ ದುರ್ಬಳಕೆ ಮಾಡಿದ್ದಾರೆ. ಈ ಅಕ್ರಮದಲ್ಲಿ ತಾಪಂ ಸಿಇಓ ಪ್ರೇಮ್‌ಕುಮಾರ್ ಕೂಡ ಶಾಮೀಲಾಗಿದ್ದಾರೆ ಎಂದು ಆರೋಪಿಸಿದರು.

ಪಂಚಾಯಿತಿಯಲ್ಲಿ ಅಧ್ಯಕ್ಷೆ ಪಿಡಿಓ ಫೆಬ್ರವರಿ ತಿಂಗಳಿನಿಂದ ಯಾವುದೇ ಸಭೆ ಕರೆದಿಲ್ಲ. ಆದರೆ ಬಿಲ್‌ಗಳ ಮಾತ್ರ ಆಗಿದೆ. ಜೆಸಿಬಿ ಯಂತ್ರದಿಂದ ಕೆಲಸ ಮಾಡಿಸಿಲ್ಲ. ಆದರೆ ಬಿಲ್ ಮಾಡಿದ್ದಾರೆ. ಅಲ್ಲಿ ಯಾವುದೇ ಕಾಮಗಾರಿ ನಡೆದಿಲ್ಲ ಇದನ್ನು ಕೇಳಿದರೆ ದಾಖಲಾತಿ ಅವಶ್ಯಕತೆ ಇಲ್ಲ. ಅನುಮೋದನೆಯಾದ ತಕ್ಷಣವೇ ಕಾಮಗಾರಿ ಬಿಲ್ ಮಾಡಬಹುದು ಎಂದು ಪಿಡಿಓ, ಅಧ್ಯಕ್ಷರು ಸಮಜಾಯಿಸಿ ನೀಡುತ್ತಾರೆ. ದೂರು ಕೊಟ್ಟಿರುವ ಸಂದರ್ಭದಲ್ಲಿ ಫೈಲ್‌ಗಳು ಅಧ್ಯಕ್ಷರ ಮನೆಗೆ ಏಕೇ ಹೋಗಬೇಕು? ಇದು ಅಕ್ರಮ, ತಿದ್ದುಪಡಿ ತ್ತಾನೆ? ಇದನ್ನು ಜಿಲ್ಲಾ ಉಸ್ತುವರಿ ಸಚಿವ ಗಮನಕ್ಕೆ ತರಲಾಗುವುದು ಎಂದು ಎಚ್ಚರಿಸಿದರು.

ಸಭೆಯಲ್ಲಿ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳಲ್ಲಿನ ಸಮಸ್ಯೆಗಳ ಬಗ್ಗೆ ಚರ್ಚಿಸಿ ಅನುಮೋದಿಸಬೇಕು. ಅನಂತರ ಕಾಮಗಾರಿಗೆ ಕ್ರಿಯಾಯೋಜನೆ ರೂಪಿಸಿ, ಕಾಮಗಾರಿ ನಡೆಯುವಾಗ ಹಂತಹಂತವಾಗಿ ಫೋಟೋ ತೆಗೆಸಿ ಬಿಲ್‌ಗಳನ್ನು ಮಾಡಿಸಿ ಹಣ ಡ್ರಾ ಮಾಡುವ ನಿಯಮವಿದೆ. ಕಾಮಗಾರಿ ವೆಚ್ಚ 1 ಲಕ್ಷಕ್ಕಿಂತ ಮೇಲ್ಪಟ್ಟರೆ ಟೆಂಡರ್ ಕರೆದು ಕಡ್ಡಾಯ. ಆದರೆ ಅಧ್ಯಕ್ಷರು, ಪಿಡಿಓ ಪಂಚಾಯಿತಿ ನೀತಿ, ನಿಮಯಗಳನ್ನು ತೂರಿದ್ದಾರೆ ಎಂದು ದೂರಿದರು.

ನಲ್ಲೂರಿನಲ್ಲಿ ಸರ್ಕಾರಿ ಕಟ್ಟಡವೊಂದನ್ನು ಕೆಡವಿ ಕಾಮಗಾರಿ ಮಾಡಲಾಗಿತ್ತು. ಅದನ್ನು ತಾಪಂ ಸಿಇಓ ಪ್ರೇಮ್‌ಕುಮಾರ್ ಸಂಪೂರ್ಣ ಮಾಹಿತಿ ಇಲ್ಲವೆಂದು ಪ್ರಕರಣ ಮುಚ್ಚಿ ಹಾಕಿದರು. ಅದೇ ರೀತಿ ಅಧ್ಯಕ್ಷು, ಪಿಡಿಓ ಮಾಡಿರುವ ಅಕ್ರಮ ಕಾಮಗಾರಿಯನ್ನು ಮುಚ್ಚಿ ಹಾಕಲು ಮುಂದಾಗಿದ್ದಾರೆ ಆರೋಪಿಸಿದ್ದಲ್ಲದೆ, ನ್ಯಾಯ ಸಿಗುವ ತನಕ ಹೋರಾಡುವುದಾಗಿ ಶ್ರೀನಾಥ್ ಎಂದು ಹೇಳಿದರು.

ನಗರಸಭಾಧ್ಯಕ್ಷೆ ಪತಿ ವಿರುದ್ಧ ಎಫ್‌ಐಆರ್

ಚಾಮರಾಜನಗರ, ಜು.8–ಚಾ.ನಗರ ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ ಅವರ ಪತಿ ನಟರಾಜು ವಿರುದ್ಧ ಗುತ್ತಿಗೆದಾರನಿಗೆ ಪ್ರಾಣ ಬೆದರಿಕೆ ಒಡ್ಡಿದ ಆರೋಪದಡಿ ನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಗರಸಭೆ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ಕಾಮಗಾರಿಯ ಬಿಲ್ಲನ್ನು ಕೇಳುವುದಕ್ಕೆ ಹೋಗಿದ್ದಾಗ ನಗರಸಭೆ ಅಧ್ಯಕ್ಷೆ ಆಶಾ ಪತಿ ನಟರಾಜು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದು ಗುತ್ತಿಗೆದಾರ ಅಭಿಷೇಕ್ ಪೊಲೀಸರಿಗೆ ದೂರು ನೀಡಿದ್ದಾರೆ. ಅಭಿಷೇಕ್ ಜು.6 ರಂದೇ ದೂರು ನೀಡಿದ್ದು, ಪೊಲೀಸರು ಶುಕ್ರವಾರ ಎಫ್‌ಐಆರ್ ದಾಖಲಿಸಿದ್ದಾರೆ.

ಉತ್ತಮ ಪರಿಸರಕ್ಕಾಗಿ ಪ್ರತಿಯೊಬ್ಬರೂ ಸಸಿ ನೆಡಬೇಕು

ಗುಂಡ್ಲುಪೇಟೆ, ಜು.8(ಸೋಮ್.ಜಿ)–ಉತ್ತಮ ಪರಿಸರಕ್ಕಾಗಿ ಪ್ರತಿಯೊಬ್ಬರೂ ತಮ್ಮ ಮನೆಗಳ ಬಳಿ ಸಸಿ ನೆಟ್ಟು, ಬೆಳೆಸಬೇಕು ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಸಲಹೆ ನೀಡಿದರು.

ವನಮಹೋತ್ಸವದ ಅಂಗವಾಗಿ ಅರಣ್ಯ ಇಲಾಖೆಯು ಪಟ್ಟಣದ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ಏರ್ಪಡಿಸಿದ್ದ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಅರಣ್ಯ ನಾಶ ಹಾಗೂ ಮರಗಳನ್ನು ಕಡಿದು ಹಾಕಿದ ಪರಿಣಾಮ ಭೂಮಿಯ ತಾಪಮಾನ ಹೆಚ್ಚಾಗುತ್ತಿದ್ದು, ಅನೇಕ ಸಮಸ್ಯೆಗಳು ಎದುರಾಗುತ್ತಿವೆ. ಈಗಾಗಲೇ ಮಳೆಯ ವೈಪರೀತ್ಯದಿಂದ ಕುಡಿಯುವ ನೀರಿಗೂ ತತ್ವಾರ ಉಂಟಾಗಿದೆ. ಇತ್ತೀಚಿನ ದಿನಗಳಲ್ಲಿ ಉಸಿರಾಡುವ ಗಾಳಿಗೂ ಕೊರತೆಯಾಗುತ್ತಿದೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಜೊತೆಗೆ ರೈತರು ಜಮೀನು ಹಾಗೂ ಮನೆಗಳ ಬಳಿಯೂ ಸಸಿಗಳನ್ನು ಬೆಳೆಸಬೇಕಾಗಿದೆ. ಕಲಿಕೆಯ ಹಂತದಲ್ಲಿರುವಾಗಲೇ ಪ್ರತಿ ವಿದ್ಯಾರ್ಥಿಯೂ ಒಂದೊಂದು ಗಿಡ ನೆಟ್ಟು ಪೋಷಿಸಬೇಕು ಎಂದು ಕಿವಿಮಾತು ಹೇಳಿದರು.



ಈ ಸಂದರ್ಭದಲ್ಲಿ ಬಂಡೀಪುರ ಹುಲಿಯೋಜನೆಯ ನಿರ್ದೇಶಕ ಡಾ.ರಮೇಶ್‌ಕುಮಾರ್, ಗುಂಡ್ಲುಪೇಟೆ ಉಪವಿಭಾಗದ ಎಸಿಎಫ್ ರವೀಂದ್ರ, ಆರ್‌ಎಫ್‌ಓಗಳಾದ ಡಾ.ಲೋಕೇಶ್, ಶ್ರೀನಿವಾಸ ನಾಯ್ಕ, ಬಿಇಓ ಎಸ್.ಸಿ.ಶಿವಮೂರ್ತಿ, ಎಪಿಎಂಸಿ ಮಾಜಿ ನಿರ್ದೇಶಕ ಎಂ.ಸುಜೇಂದ್ರ, ಶಾಲೆಯ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿದ್ದರು.

ಕೆಆರ್‌ಎಸ್‌ನಿಂದ ನೀರು: ನದಿ ಪಾತ್ರದ ಜನರಿಗೆ ಮುನ್ನೆಚ್ಚರಿಕೆ

ಚಾಮರಾಜನಗರ, ಜು.8– ಕೃಷ್ಣರಾಜಸಾಗರ ಜಲಾನಯನ ಪ್ರದೇಶದಲ್ಲಿ ಭಾರೀ ಮಳೆಯಾಗುತ್ತಿರುವುದರಿಂದ ಜಲಾಶಯದಿಂದ ಹೆಚ್ಚುವರಿ ನೀರನ್ನು ಯಾವುದೇ ಸಂದರ್ಭದಲ್ಲಾದರೂ ಕಾವೇರಿ ನದಿಗೆ ಬಿಡುವ ಸಾಧ್ಯತೆ ಇರುವುದರಿಂದ, ಕೊಳ್ಳೇಗಾಲ ತಾಲೂಕು ವ್ಯಾಪ್ತಿಯ ಕಾವೇರಿ ನದಿ ಪಾತ್ರದಲ್ಲಿ ಬರುವ ಮುಳ್ಳೂರು, ಹಳೆ ಹಂಪಾಪುರ, ದಾಸನಪುರ, ಹಳೆ ಅಣಗಳ್ಳಿ, ಹರಳೆ, ಸರಗೂರು, ಧನಗೆರೆ, ಎಡಕುರಿಯ, ಸತ್ತೇಗಾಲ ಮುಂತಾದ ನದಿಯ ಎರಡೂ ದಂಡೆಗಳಲ್ಲಿರುವ ಗ್ರಾಮಗಳಲ್ಲಿ ಹಾಗೂ ನದಿಯ ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರು ತಮ್ಮ ಆಸ್ತಿ ಪಾಸ್ತಿ ಹಾಗೂ ಜಾನುವಾರು ರಕ್ಷಣೆಗಾಗಿ ಸುರಕ್ಷಿತ ಮುನ್ನೆಚ್ಚರಿಕೆ ವಹಿಸುವಂತೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮನವಿ ಮಾಡಿದ್ದಾರೆ.

ಅಲ್ಲದೆ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಕೇಂದ್ರ ಸ್ಥಾನದಲ್ಲಿದ್ದು, ವಿಪತ್ತನ್ನು ನಿಭಾಯಿಸಲು ತಯಾರಿ ಮಾಡಿಕೊಳ್ಳಬೇಕು. ಸಾರ್ವಜನಿಕರು ತುರ್ತು ಸೇವೆಗೆ ಶುಲ್ಕ ರಹಿತ ಸಂಖ್ಯೆ 1077, ದೂ.08226–223160 ಮೊ.9740942901 ಸಂಪರ್ಕಿಸಿ.


ತೋಟಗಾರಿಕೆ ಜಾಗ ಯಥಾಸ್ಥಿತಿ ಕಾಯ್ದುಕೊಳ್ಳಲು ನಗರಸಭೆ ನಿರ್ಣಯ

ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ನಿರ್ಧಾರ

ಮಂಡ್ಯ,ಜು.8(ಮೋಹನ್‌ರಾಜ್)– ನಗರದ ಹೃದಯ ಭಾಗದಲ್ಲಿರುವ ತೋಟಗಾರಿಕೆ ಜಾಗವನ್ನು ಯಥಾಸ್ಥಿತಿ ಉಳಿಸಿಕೊಳ್ಳಲು ನಗರಸಭೆಯ ಸಾಮಾನ್ಯ ಸಭೆಯಲ್ಲಿ ಸರ್ವ ಸದಸ್ಯರು ನಿರ್ಣಯ ಕೈಗೊಂಡು ಸರ್ಕಾರಕ್ಕೆ ಕಳುಹಿಸಿಕೊಟ್ಟರು.

ಶುಕ್ರವಾರ ನಗರಸಭೆಯ ಧರಣಪ್ಪ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಮಾಡಿರುವ ಮನವಿಯನ್ನು ಚರ್ಚೆಗೆ ಕೈಗೆತ್ತಿಕೊಂಡ ಅಧ್ಯಕ್ಷಎಚ್.ಎಸ್. ಮಂಜು ಚರ್ಚೆಗೆ ಅವಕಾಶ ಕಲ್ಪಿಸಿದರು. ತೋಟಗಾರಿಕೆ ಇಲಾಖೆ ಜಾಗದಲ್ಲಿ ನ್ಯಾಯಾಲಯದ ಸಂಕೀರ್ಣವನ್ನು ನಿರ್ಮಿಸಬೇಕೆಂಬ ಬಗ್ಗೆ ಚರ್ಚೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಸದಸ್ಯರಾದ ಶ್ರೀಧರ್, ಎಂ.ಪಿ.ಅರುಣ್‌ಕುಮಾರ್, ಟಿ.ಕೆರಾಮಲಿಂಗು ಇತರರು ಮಾತನಾಡಿ, ಈಗಾಗಲೇ ನ್ಯಾಯಾಂಗ ಇಲಾಖೆಗೆ ಸೇರಿದ ಸ್ಥಳ ಸಾಕಷ್ಟಿದೆ. ಇನ್ನೂ ಹೆಚ್ಚಿನ ಸ್ಥಳಾವಕಾಶ ಅಗತ್ಯವಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿ ಹಿಂಭಾಗದಲ್ಲೂ ಸ್ಥಳವಿದೆ. ಹಳೇ ತಾಲೂಕು ಕಚೇರಿಯ ಜಾಗವೂ ಇದೆ. ಇದಕ್ಕಿಂತಲೂ ಹೆಚ್ಚಿನ ಸ್ಥಳಾವಕಾಶ ಬೇಕೆಂದಾದಲ್ಲಿ ನಗರದ ಹೊರ ವಲಯದಲ್ಲೂ ಅವಕಾಶ ಕಲ್ಪಿಸಬಹುದು. ಮಾತ್ರವಲ್ಲ, ಜಿ ಪ್ಲೆಸ್ ಫೈವ್ ಮಾದರಿಯಲ್ಲಿ ಕಟ್ಟಡ ನಿರ್ಮಾಣ ಮಾಡಿಕೊಳ್ಳಲು ಸಾಧ್ಯವಿದೆ. ಆದರೆ, ನಗರಕ್ಕೆ ಆಮ್ಲಜನಕ ಒದಗಿಸುವ ಪ್ರಮುಖ ಸ್ಥಾನದಲ್ಲಿರುವ ತೋಟಗಾರಿಕೆ ಜಾಗದಲ್ಲಿ ವೈವಿಧ್ಯಮಯವಾದ ಗಿಡ–ಮರಗಳಿದ್ದು, ಅವುಗಳು ನೀಡುವ ಆಮ್ಲಜನಕಕ್ಕೆ ಬೆಲೆ ಕಟ್ಟಲಾಗದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಅಧ್ಯಕ್ಷರು ಹಾಗೂ ಆಯುಕ್ತರು ಈ ಅಭಿಪ್ರಾಯಗಳನ್ನು ನಿರ್ಣ



ಯಕ್ಕಿಟ್ಟಾಗ ಎಲ್ಲ ಸದಸ್ಯರೂ ಮೇಜುಕುಟ್ಟಿ ತಮ್ಮ ಅನುಮೋದನೆ ನೀಡಿದರು.

ನಗರದಲ್ಲಿ ಕುಡಿಯುವ ನೀರು ಸರಬರಾಜು ವಿಚಾರಕ್ಕೆ ಸಂಬಂಧಿಸಿದಂತೆ ಸದಸ್ಯರು ಹಾಗೂ ಜಲಮಂಡಳಿ ಅಧಿಕಾರಿಯ ನಡುವೆ ಸಾಕಷ್ಟು ವಾದ–ವಿವಾದ ನಡೆದು ಕೊನೆಗೆ ಅಧ್ಯಕ್ಷರು ಮಧ್ಯ ಪ್ರವೇಶಿಸಿ, ಈ ವಿಚಾರವನ್ನು ವಿಶೇಷ ಸಭೆ ಕರೆದು ಅಂತಿಮಗೊಳಿಸೋಣ. ಈಗ ನಡಾವಳಿಯಂತೆ ಸಭೆ ನಡೆಸಲು ಅವಕಾಶ ನೀಡಿ ಎಂದು ಸದಸ್ಯರಲ್ಲಿ ಮನವಿ ಮಾಡಿದರು.

ಆದಾಗ್ಯೂ ಸದಸ್ಯ ಶ್ರೀಧರ್ ಕುಡಿಯುವ ನೀರು ಸರಬರಾಜು ವಿಚಾರದಲ್ಲಿ ನಗರದ ನಾಗರಿಕರಲ್ಲಿ ಸಾಕಷ್ಟು ಗೊಂದಲ ಏರ್ಪಟ್ಟಿದೆ. ನಗರಸಭೆ ಆಡಳಿತದ ಕೆಳಗೆ ಜಲಮಂಡಳಿ ಕಾರ್ಯ ನಿರ್ವಹಿಸುತ್ತಿದೆ ಎಂಬುದನ್ನು ಮರೆ ತಂತೆ ಜಲಮಂಡಳಿ ಅಧಿಕಾರಿಗಳು ವರ್ತಿಸು ತ್ತಿದ್ದಾರೆ. ನಗರಸಭೆಗೆ ಖರ್ಚು ವೆಚ್ಚದ ವಿವರ ಗಳನ್ನೇ ನೀಡದೆ ತಾವೇ ತೀರ್ಮಾನ ತೆಗೆದು ಕೊಂಡು ನಗರಸಭೆಯನ್ನು ತಮ್ಮ ಕೈ ಕೆಳಗಿನ ಸಂಸ್ಥೆಯಂತೆ ಕಡೆಗಣಿಸುತ್ತಿದ್ದಾರೆ ಎಂದು ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಲ ಮಂಡಳಿ ಅಧಿಕಾರಿ, ನಗರದಲ್ಲಿ 20,900 ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ ಈಗಾಗಲೇ ಅಮೃತ್ ಯೋಜನೆಯಡಿ ಶೇ.90ರಷ್ಟು ಸಂಪರ್ಕಗಳಿಗೆ ಮೀಟರ್ ಅಳವಡಿಸಲಾಗಿದ್ದು, ನಿವಾಸಿಗಳ ಅಧಿಕೃತ ಆಸ್ತಿಯ ದಾಖಲಾತಿಗಳ ಪರಿಶೀಲನೆ ನಡೆಸಿ ಹೊಸ ಸಂಪರ್ಕಗಳನ್ನು ನೀಡಲಾಗುತ್ತಿದೆ. ಇದರಲ್ಲಿ ಕೆಲವು ಸಂಪರ್ಕಗಳಲ್ಲಿ ಏರುಪೇರಾಗಿರಬಹುದು. ಅದನ್ನು ಸದ್ಯದಲ್ಲೇ ಸರಿಪಡಿಸಲಾಗುವುದು. ಸದ್ಯ ನೀಡುತ್ತಿರುವ ಬಿಲ್ ತಾತ್ಕಾಲಿಕವಾಗಿದ್ದು, ನೀರಿನ ಬಳಕೆಯ ಪ್ರಮಾಣದ ಮೇಲೆ ಬಿಲ್ ನೀಡಲಾಗುತ್ತಿಲ್ಲ. ಸರ್ಕಾರದ ಹೊಸ ಆದೇಶ ಬಂದ ನಂತರ ಅಧಿಕೃತವಾಗಿ ಮೀಟರನ್ನು ಕಡ್ಡಾಯಗೊಳಿಸಲಾಗುವುದು ಎಂದು ಸಮಜಾಯಿಷಿ ನೀಡಲು ಮುಂದಾದರು.

ಇದರಿಂದ ಅಸಮಾಧಾನಗೊಂಡ ಸದಸ್ಯರು, ಜಲಮಂಡಳಿ ನಗರಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ನೀರು ಸರಬರಾಜು ಮಾಡುತ್ತಿಲ್ಲ ಅಲ್ಲದೆ, 2006ರಿಂದ ಅಮೃತ್ ಯೋಜನೆಗೊಳಪಟ್ಟ ಬಳಿಕವೂ ದರ ಪರಿಷ್ಕರಣೆ ವಿಚಾರದಲ್ಲಿ ನಗರಸಭೆ ಆಡಳಿತವನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ. ನಗರಸಭೆಯಿಂದ ಖರ್ಚು ವೆಚ್ಚದ ಪಟ್ಟಿಯನ್ನು ಇಲಾಖೆಗೆ ಸಲ್ಲಿಸಲಾಗುತ್ತದೆ. ಆದರೆ, ಜಲಮಂಡಳಿ ಪ್ರತಿ ತಿಂಗಳು ಖರ್ಚು ವೆಚ್ಚದ ಪಟ್ಟಿಯನ್ನು ಸಲ್ಲಿಸುತ್ತಿಲ್ಲವೇಕೆ ಎಂದು ತರಾಟೆಗೆ ತೆಗೆದುಕೊಂಡರು. ಸಭೆಯಲ್ಲಿ ಶಾಸಕ ಎಂ.ಶ್ರೀನಿವಾಸ್, ಉಪಾಧ್ಯಕ್ಷೆ ಇಶ್ರತ್‌ಫಾತಿಮಾ, ಸ್ಥಾಯಿ ಸಮಿತಿ ಅಧ್ಯಕ್ಷೆ ಮೀನಾಕ್ಷಿ ಇತರರು ಉಪಸ್ಥಿತರಿದ್ದರು.

ಮೋದಿ ಪ್ರಧಾನಿಯಾದ ನಂತರ ದೇಶದ ಹಿರಿಮೆ ಹೆಚ್ಚಿದೆ

ಫಲಾನುಭವಿಗಳ ಸಂವಾದದಲ್ಲಿ ಕೇಂದ್ರ ಸಚಿವ ಕ್ರಿಶನ್ ಪಾಲ್

ಮಂಡ್ಯ,ಜು.8(ಮೋಹನ್‌ರಾಜ್)– ನರೇಂದ್ರಮೋದಿ ಅವರು ಭಾರತದ ಪ್ರಧಾನಿಯಾದ ನಂತರ ದೇಶದ ಹಿರಿಮೆ ವಿಶ್ವಾದ್ಯಂತ ಹೆಚ್ಚಿದೆ. ಇದು ಈ ದೇಶದ 130 ಕೋಟಿ ಜನರ ಶಕ್ತಿಯಾಗಿದೆ ಎಂದು ಬೃಹತ್ ಕೈಗಾರಿಕೆ ಹಾಗೂ ಇಂಧನ ರಾಜ್ಯ ಸಚಿವ ಕ್ರಿಶನ್ ಪಾಲ್ ಗುರ್ಜರ್ ತಿಳಿಸಿದ್ದಾರೆ.

ಶುಕ್ರವಾರ ನಗರದ ಅಂಬೇಡ್ಕರ್ ಭವನದಲ್ಲಿ ಕೇಂದ್ರದ ವಿವಿಧ ಯೋಜನೆಗಳ ಫಲಾನುಭವಿಗಳು ಹಾಗೂ ವಿದ್ಯಾರ್ಥಿಗಳೊಂದಿಗೆ ನಡೆದ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಪ್ರಧಾನಿ ಮೋದಿ ವಿದೇಶ ಪ್ರವಾಸಕ್ಕೆ ಹೋದಾಗ ಅಲ್ಲಿನ ಪ್ರಧಾನಿಗಳು ಹುಡುಕಿಕೊಂಡು ಬಂದು ಮೋದಿ ಅವರನ್ನು ಮಾತನಾಡಿಸುತ್ತಾರೆ. ಗೌರವ ಕೊಡುತ್ತಾರೆ. ಇದನ್ನು ಮೋದಿ ಅವರು ಇದು ನನ್ನ ಶಕ್ತಿ ಅಲ್ಲ. ದೇಶದ 130 ಕೋಟಿ ಜನರ ಶಕ್ತಿಯಾಗಿದೆ ಎಂದು ಹೇಳುತ್ತಾರೆ ಎಂದರು. ಹಿಂದಿನ ಸರ್ಕಾರದಲ್ಲಿ ಸಚಿವರು ಭ್ರಷ್ಟಾಚಾರ ಮಾಡಿ ಜೈಲಿಗೆ ಹೋಗುತ್ತಿದ್ದರು. ಆದರೆ ಇಂದು ಭ್ರಷ್ಟಾಚಾರ ರಹಿತ ಆಡಳಿತ ನೀಡುವಲ್ಲಿ ಮೋದಿ ಅವರು ಯಶಸ್ವಿಯಾಗಿದ್ದಾರೆ. ಇದೊಂದು ಸಾಮರ್ಥ್ಯ ಇರುವ ಸರ್ಕಾರವಾಗಿದೆ. ನಮ್ಮ ದೇಶದ ನೆರೆಹೊರೆ ದೇಶಗಳು ನಮ್ಮ ಜತೆ ಕೈಜೋಡಿಸಿ ಸ್ನೇಹ ಬಯಸುತ್ತಿದ್ದಾರೆ. ಇದೊಂದು ಶಕ್ತಿಯುತ ಸರ್ಕಾರವಾಗಿದೆ. ಚೀನಾ ಬೆದರಿಕೆ ಹಾಕುತ್ತಿತ್ತು. ಆಗ ಮೋದಿ ಅವರು ಇದು 1962ರ ಭಾರತವಲ್ಲ. ಇದು ಈಗಿನ ಶಕ್ತಿಯುತ ಭಾರತ ಎಂದು ತಿರುಗೇಟು ನೀಡಿದ್ದಾರೆ ಎಂದರು.

ಯಥಾ ರಾಜ ತಥಾ ಪ್ರಜಾ ಎಂಬ ಗಾದೆಯನ್ನು ಪ್ರಧಾನಿ ಮೋದಿ ಬದಲಿಸಿದ್ದಾರೆ. ಈಗ ಯಥಾ ಪ್ರಜಾ ತಥಾ ರಾಜ ಎಂಬಂತಾಗಿದೆ. ಪಕ್ಷಕ್ಕೆ ನೀವು ಕೊಟ್ಟ ಶಕ್ತಿಯಿಂದ ದೇಶ ಇಂದು ವಿಜೃಂಭಿಸುತ್ತಿದೆ. ರಕ್ಷಣಾ ವ್ಯವಸ್ಥೆ ಸೇರಿದಂತೆ ದೇಶದ ರಸ್ತೆಗಳು ಸುಸಜ್ಜಿತವಾಗಿ ನಿರ್ಮಾಣವಾಗುತ್ತಿವೆ ಇದನ್ನು ಅರಿತು ದೇಶದ ಜನತೆ ಮತ್ತೊಮ್ಮೆ ಬಿಜೆಪಿ ಸರ್ಕಾರಕ್ಕೆ ಬೆಂಬಲ ನೀಡಬೇಕು. ಮತ್ತೆ ಭ್ರಷ್ಟಾಚಾರಕ್ಕೆ ಅವಕಾಶ ನೀಡದಂತೆ ಉತ್ತಮ ವ್ಯಕ್ತಿಗಳನ್ನು ಆಯ್ಕೆ ಮಾಡಲು ಮುಂದಾಗಬೇಕು ಎಂದು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರಿಗಾಗಿ ಅನೇಕ ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಇದೊಂದು ಬಡವರ ಸರ್ಕಾರವಾಗಿದೆ 16 ಕೋಟಿ ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆ ಅನುಕೂಲ ಸಿಗುತ್ತಿದೆ. ದೂರದೃಷ್ಟಿಯ 75 ಕೋಟಿ ಜನರ ಜನ್‌ಧನ್ ಖಾತೆ ತೆರೆಯಲಾಗಿದೆ. ಇದು ಸರ್ಕಾರ ಜಾರಿಗೊಳಿಸುವ ಯೋಜನೆಯು ಯಾವುದೇ ಮಧ್ಯವರ್ತಿ, ದಲ್ಲಾಳಿ ಇಲ್ಲದೆ, ಭ್ರಷ್ಟಾಚಾರ ರಹಿತವಾಗಿ, ಫಲಾನುಭವಿಗಳು ತೊಂದರೆ ಅನುಭವಿಸಬಾರದು ನೇರವಾಗಿ ರೈತರ ಹಾಗೂ ಫಲಾನುಭವಿಗಳ ಖಾತೆಗೆ ಹೋಗುವಂತೆ ಮಾಡುವ ಉದ್ದೇಶ ಇದಾಗಿತ್ತು. ಅದು ಇಂದು ಈಡೇರಿದೆ ಎಂದರು.


ಕಾರ್ಯಕ್ರಮದಲ್ಲಿ ಯೋಜನೆಗಳ ಫಲಾನುಭವಿಗಳೊಂದಿಗೆ ಸಂವಾದ ನಡೆಸಿದರು. ಸಚಿವರಾದ ಕೆ.ಸಿ.ನಾರಾಯಣಗೌಡ, ಕೆ.ಗೋಪಾಲಯ್ಯ, ಮಾಜಿ ಸಚಿವ ಬಿ.ಸೋಮಶೇಖರ್, ಜಿಲ್ಲಾಧಿಕಾರಿ ಎಸ್.ಅಶ್ವತಿ, ಜಿಪಂ ಸಿಇಓ ದಿವ್ಯಾಪ್ರಭು ಸೇರಿದಂತೆ ಮತ್ತಿತರರಿದ್ದರು.

ಮಂಡ್ಯ ಜೈಲಲ್ಲಿ ಖೈದಿಗಳಿಂದ ಮೊಬೈಲ್,ಸಿಮ್ ಕಾರ್ಡ್ ವಶಕ್ಕೆ

ಮಂಡ್ಯ, ಜು.8– ಮಂಡ್ಯ ಜಿಲ್ಲಾ ಕಾರಾಗೃಹದ ಬ್ಯಾರಕ್‌ಗಳಲ್ಲಿ 3 ಮೊಬೈಲ್ ಹಾಗೂ 2 ಸಿಮ್ ಕಾರ್ಡ್‌ಗಳು ದೊರೆತಿದ್ದು, 11 ಮಂದಿ ವಿಚಾರಣಾಧೀನ ಖೈದಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಕಾರಾಗೃಹದ ಜೈಲರ್ ರವಿಕುಮಾರ ಭಜಂತ್ರಿ ಅವರು ಜೂ.30ರಂದು ರಾತ್ರಿ ಬ್ಯಾರಕ್‌ಗಳಲ್ಲಿ ತಪಾಸಣೆ ನಡೆಸಿದಾಗ ಸಾಯಿಕುಮಾರ್ ಅಲಿಯಾಸ್ ಸುರೇಶ್ ಅಲಿಯಾಸ್ ಕಲ್ಲಹಳ್ಳಿ ಸುರೇಶ್ ಅಲಿಯಾಸ್ ಸೂರಿ ಮತ್ತು ಕೆ.ಪಿ. ಕಾರ್ತಿಕ್ ಎಂಬ ಖೈದಿಗಳ ಹಾಸಿಗೆಯಲ್ಲಿ ಮೊಬೈಲ್‌ಗಳು ಮತ್ತು ಸಿಮ್ ಕಾರ್ಡ್ ದೊರೆತಿದೆ. ಬಿ 6ನೇ ಸಂಖ್ಯೆಯ ಕೊಠಡಿಯಲ್ಲಿದ್ದ ಖೈದಿಗಳಾದ ಇಂದುಕುಮಾರ್, ಮಧು, ಮಂಜು ಅಲಿಯಾಸ್ ಮಂಜುನಾಥ ಅಲಿಯಾಸ್ ಎಂಎಂಟಿ, ಚಂದ್ರು ಹೆಚ್.ಎಸ್ ಅಲಿಯಾಸ್ ಭೀಮಾ, ಶ್ರೀಧರ್, ಶಿವು, ರಘು, ಕೃಷ್ಣ, ಎನ್.ಮಂಜ ಅಲಿಯಾಸ್ ಮಂಜುನಾಥ, 7ನೇ ಸಂಖ್ಯೆ ಕೊಠಡಿಯಲ್ಲಿದ್ದ ಟಿ.ಎಸ್. ಪ್ರಸನ್ನ, ಟಿ.ಎನ್. ಹೇಮಂತಕುಮಾರ್ ವಿರುದ್ಧ ನ್ಯಾಯಾಲಯದ ಅನುಮತಿ ಪಡೆದು ಜು.5ರಂದು ಜೈಲರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮಂಡ್ಯ ಪಶ್ಚಿಮ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಎ.ಕೆ.ಸೋಮಶೇಖರ್ ನಿಧನ



ಕೆಆರ್.ಪೇಟೆ, ಜು.8(ಶ್ರೀನಿವಾಸ್)– ತಾಲೂಕಿನ ಅಗ್ರಹಾರ ಬಾಚಹಳ್ಳಿ ಗ್ರಾಮದ ದಿ.ಸುಬ್ಬಮ್ಮ– ದಿ.ಕೃಷ್ಣೇಗೌಡರ ಸುಪುತ್ರ ಎ.ಕೆ.ಸೋಮಶೇಖರ್ (42) ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದಾರೆ.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು– ಬಳಗವನ್ನು ಅಗಲಿದ್ದಾರೆ. ಮೃತರು ಎ.ವಿ.ಮಾಸ್ಕ್ ಆಡಿಯೋಟಚ್ ಸಂಸ್ಥೆಯ ಮಾಲೀಕರಾಗಿ ನೂರಾರು ಯುವಕರಿಗೆ ಉದ್ಯೋಗ ನೀಡುವ ಮೂಲಕ ಉದ್ಯಮಿಯಾಗಿ ಗುರುತಿಸಿಕೊಂಡಿದ್ದರು. ಕಳೆದ ಮೂರ್‍ನಾಲ್ಕು ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಸೋಮಶೇಖರ್ ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಆದರೆ ಚಿಕಿತ್ಸೆ ಫಲಕಾರಿಯಾಗದೇ ಶುಕ್ರವಾರ ಬೆಳಿಗ್ಗೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.

ಸೋಮಶೇಖರ್ ಅವರ ಅಂತ್ಯಕ್ರಿಯೆಯು ಅವರ ಹುಟ್ಟೂರು ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿ ನಡೆಯಿತು. ಅವರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸಾಲುಮರದ ತಿಮ್ಮಕ್ಕ 'ಪರಿಸರ ರಾಯಭಾರಿ' ಸಂಪುಟ ದರ್ಜೆ ಸ್ಥಾನಮಾನ ನೀಡಿ ರಾಜ್ಯ ಸರ್ಕಾರದ ಆದೇಶ




ಬೆಂಗಳೂರು, ಜು.8– ಖ್ಯಾತ ಪರಿಸರವಾದಿ ಸಾಲುಮರದ ತಿಮ್ಮಕ್ಕ ಅವರನ್ನು ಪರಿಸರ ರಾಯಭಾರಿಯಾಗಿ ಮಾಡಿ ಅವರಿಗೆ ರಾಜ್ಯ ಸಂಪುಟ ದರ್ಜೆ ಸ್ಥಾನಮಾನ ನೀಡಿ ಸರ್ಕಾರ ಆದೇಶ ಹೊರಡಿಸಿದೆ. 111 ವರ್ಷದ ಜನ್ಮದಿನ ಆಚರಿಸಿಕೊಂಡಿದ್ದ ಸಾಲುಮರದ ತಿಮ್ಮಕ್ಕ ಅವರನ್ನು ಇತ್ತೀಚೆಗೆ ರಾಜ್ಯ ಸರ್ಕಾರ ವತಿಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗೌರವಿಸಿದ್ದರು. ಅವರನ್ನು ಸರ್ಕಾರದ ಪರಿಸರ ರಾಯಭಾರಿಯಾಗಿ ಮಾಡಿ ಸಂಪುಟ ದರ್ಜೆ ಸ್ಥಾನಮಾನ ನೀಡಿ ರಾಜ್ಯ ಸರ್ಕಾರ ಇಂದು ಅಧಿಸೂಚನೆ ಹೊರಡಿಸಿದೆ.

ರಾಜ್ಯಸಭೆ ಸದಸ್ಯರಾಗಿ ಜಗ್ಗೇಶ್ ಕನ್ನಡದಲ್ಲಿ ಪ್ರಮಾಣವಚನ ಸ್ವೀಕಾರ

ನಿರ್ಮಲಾ ಸೀತಾರಾಮನ್, ಲೆಹರ್ ಸಿಂಗ್, ಜೈರಾಮ್ ರಮೇಶ್ ಪ್ರಮಾಣ ವಚನ


ಜಗ್ಗೇಶ್


ನಿರ್ಮಲಾ ಸೀತರಾಮನ್


ಲೆಹರ್ ಸಿಂಗ್


ಜೈರಾಮ್ ರಮೇಶ್

ನವದೆಹಲಿ, ಜು.8– ವಿವಿಧ ರಾಜ್ಯಗಳಿಂದ ರಾಜ್ಯಸಭೆಗೆ ಚುನಾಯಿತರಾದ 24 ಮಂದಿ ಸದಸ್ಯರು ಇಂದು ಪ್ರಮಾಣ ವಚನ ಸ್ವೀಕರಿಸಿದರು. ಕರ್ನಾಟಕದಿಂದ ಆಯ್ಕೆಯಾದ ಜಗ್ಗೇಶ್, ಲೆಹರ್ ಸಿಂಗ್, ಜೈರಾಮ್ ರಮೇಶ್, ನಿರ್ಮಲಾ ಸೀತರಾಮನ್ ಇದೇ ವೇಳೆ ಪ್ರಮಾಣ ವಚನ ಸ್ವೀಕರಿಸಿದರು.

ನಟ ಜಗ್ಗೇಶ್ ಕನ್ನಡದಲ್ಲಿ ಹಾಗೂ ರಾಘವೇಂದ್ರ ಸ್ವಾಮಿಗಳ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಬಳಿಕ ಬಿಜೆಪಿ ಹಿರಿಯ ನಾಯಕ ಲೆಹರ್ ಸಿಂಗ್ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಪಿಯೂಷ್ ಗೋಯೆಲ್, ಮುಕುಲ್ ವಾಸ್ನಿಕ್, ಸುರೇಂದ್ರ ಕುಮಾರ್, ಲಕ್ಷ್ಮಿಕಾಂತ್ ಬಾಜಪೇಯ್, ನಾಬುರಾವ್ ನಿಶಾದ್, ಧನಜಯ್ ಮಧು, ಘನಶಾಮ್ ತಿವಾರಿ ಸೇರಿ 24 ಮಂದಿ ಇಂದು ಪ್ರಮಾಣ ವಚನ ಸ್ವೀಕರಿಸಿದರು. ಸಭಾಧ್ಯಕ್ಷ ವೆಂಕಯ್ಯನಾಯ್ಡು ಉಪಸ್ಥಿತರಿದ್ದರು.

ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ: ಇಬ್ಬರು ಜೆಡಿಎಸ್ ಶಾಸಕರ ಅನರ್ಹಗೊಳಿಸುವಂತೆ ಸ್ಪೀಕರ್‌ಗೆ ದೂರು

ಬೆಂಗಳೂರು, ಜು.8– ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಇಬ್ಬರು ಜೆಡಿಎಸ್ ಶಾಸಕರನ್ನು ಅನರ್ಹಗೊಳಿಸುವಂತೆ ಸ್ಪೀಕರ್‌ಗೆ ದೂರು ನೀಡಲಾಗಿದೆ.

ರಾಜ್ಯಸಭೆ ಚುನಾವಣೆಯಲ್ಲಿ ಕೋಲಾರ ಜೆಡಿಎಸ್ ಶಾಸಕ ಶ್ರೀನಿವಾಸ್ ಗೌಡ ಮತ್ತು ಗುಬ್ಬಿ ಶಾಸಕ ಶ್ರೀನಿವಾಸ್ ಅಡ್ಡ ಮತದಾನ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಈ ಇಬ್ಬರ ಸದಸ್ಯತ್ವ ರದ್ದು ಮಾಡುವಂತೆ ಸ್ಪೀಕರ್‌ಗೆ ಜೆಡಿಎಸ್ ದೂರು ನೀಡಿದೆ.

ಈ ಕುರಿತು ಮಾಹಿತಿ ನೀಡಿರುವ ಜೆಡಿಎಸ್ ಮುಖ್ಯ ಸಚೇತಕ ವೆಂಕಟರಾವ್ ನಾಡಗೌಡ, ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಶ್ರೀನಿವಾಸ್ ಗೌಡ ಹಾಗೂ ಎಸ್.ಆರ್ ಶ್ರೀನಿವಾಸ್ ವಿರುದ್ಧ ದೂರು ನೀಡಿದ್ದೇವೆ. ಕಾಂಗ್ರೆಸ್ ನಾಯಕರ ಜತೆ ಗುರುತಿಸಿಕೊಂಡಿದ್ದಾರೆ. ಪಕ್ಷದ ಸಭೆಗೂ ಹಾಜರಾಗಿಲ್ಲ. ಇದರಿಂದ 10ನೇ ಶೆಡ್ಯೂಲ್ ಉಲ್ಲಂಘನೆಯಾಗುತ್ತೆ. ಹೀಗಾಗಿ ಎಲ್ಲಾ ದಾಖಲೆ ಸಮೇತ ಸ್ಪೀಕರ್‌ಗೆ ದೂರು ಕೊಟ್ಟಿದ್ದೇವೆ. ಕಾನೂನು ಪ್ರಕಾರ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ಸ್ಪೀಕರ್ ತಿಳಿಸಿದ್ದಾರೆ ಎಂದು ಹೇಳಿದರು.

ನಾಳೆ ಬ್ರಾಹ್ಮಣ ಅರ್ಚಕರ ಸಭೆ

ಮೈಸೂರು, ಜು.8 –ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಜು. 10 ರಂದು ಸಂಜೆ 4.30ಕ್ಕೆ ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಷತ್ ಸಭೆ ಕರೆಯಲಾಗಿದೆ ಎಂದು ಪರಿಷತ್ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ತಿಳಿಸಿದ್ದಾರೆ.

ನಕಲಿ ಕೀ ಬಳಸಿ ಮನೆ ಕಳವು: ಮಹಿಳೆ ಬಂಧನ

11.94 ಲಕ್ಷ ರೂ. ಮೌಲ್ಯದ ಆಭರಣ, ನಗದು ವಶ

ಮೈಸೂರು, ಜು.8(ಆರ್‌ಕೆ)–ನಕಲಿ ಕೀ ಬಳಸಿ ಮನೆಯಲ್ಲಿ ಚಿನ್ನ, ಬೆಳ್ಳಿ ಆಭರಣ ಹಾಗೂ ನಗದು ಕಳವು ಮಾಡಿದ್ದ ಮಹಿಳೆಯನ್ನು ಮೈಸೂರಿನ ಆಲನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ನಂದಿನಿ ಬಡಾವಣೆ ನಿವಾಸಿ ಮಹದೇವಸ್ವಾಮಿ ಎಂಬುವರ ಪತ್ನಿ ಪ್ರಭಾಮಣಿ ಅಲಿಯಾಸ್ ಮಣಿ(42) ಬಂಧಿತ ಆರೋಪಿಯಾಗಿದ್ದು, ಆಕೆಯಿಂದ 9,75,000 ರೂ. ಮೌಲ್ಯದ ಚಿನ್ನಾಭರಣ, 2,10,000 ರೂ. ಬೆಲೆ ಬಾಳುವ 3 ಕೆ.ಜಿ ಬೆಳ್ಳಿ ಪದಾರ್ಥ ಹಾಗೂ 9,000 ರೂ. ನಗದನ್ನು ವಶಪಡಿಸಿಕೊಳ್ಳಲಾಗಿದೆ.

ಜೂನ್ 30 ರಂದು ಸಂಜೆ ಆಲನಹಳ್ಳಿ ನಂದಿನಿ ಬಡಾವಣೆ 2ನೇ ಕ್ರಾಸ್ ನಿವಾಸಿ ಡಾ. ಎನ್.ಕುಮಾರ್ ಎಂಬುವರು ತಮ್ಮ ಪತ್ನಿಯನ್ನು ಆಸ್ಪತ್ರೆಗೆ ಕರೆದೊಯ್ದು ಹಿಂದಿರುಗುವಷ್ಟರಲ್ಲಿ ನಕಲಿ ಕೀ ಬಳಸಿ ಮನೆಗೆ ನುಗ್ಗಿ ಅಲ್ಮೇರಾದಲ್ಲಿದ್ದ 160 ಗ್ರಾಂ ಚಿನ್ನದ ಒಡವೆಗಳು, 2 ಕೆ.ಜಿ. ಬೆಳ್ಳಿ ಪದಾರ್ಥ ಹಾಗೂ 70,000 ರೂ.ನಗದು ಕಳವಾಗಿತ್ತು. ಪ್ರಕರಣ ದಾಖಲಿಸಿಕೊಂಡಿದ್ದ ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್ ಅವರು ತನಿಖೆ ಕೈಗೊಂಡಾಗ ಜುಲೈ 6 ರಂದು ಪ್ರಭಾಮಣಿ ಪತ್ತೆಯಾದಳು. ಠಾಣೆಗೆ ಕರೆತಂದು ಆಕೆಯನ್ನು ವಿಚಾರಣೆ ಮಾಡಿದಾಗ ನಕಲಿ ಕೀ ಬಳಸಿ ಠಾಣಾ ವ್ಯಾಪ್ತಿಯ ಮೂರು ಮನೆಗಳಲ್ಲಿ ಕಳವು ಮಾಡಿದ್ದಾಳೆಂಬುದು ತಿಳಿಯಿತು. ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಅವರ ಆದೇಶದಂತೆ ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ ಅವರ ಮಾರ್ಗದರ್ಶನ ಹಾಗೂ ದೇವರಾಜ ಉಪ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಟಿ.ಎಸ್.ಮಹೇಂದ್ರ, ಪ್ರವೀಣ್ ಕುಮಾರ್, ಎಎಸ್‌ಐ ಎಂ.ಎಸ್.ಲಕ್ಷ್ಮೀನಾರಾಣ, ಸಿಬ್ಬಂದಿಗಳಾದ ಶಿವಪ್ರಸಾದ್, ಬಿ.ಕೆ.ಚೌಡಪ್ಪ, ಸುಂದರಿ, ಪಿ.ಎನ್.ಸುಹೀಲ್, ಬಿ.ಹೆಚ್.ರಂಗನಾಥ್, ಕೆ.ಎಂ.ರುಕ್ಮಿಣಿ, ಯಂಕಟ್ಟಿ ಜಗದಾಳೆ, ಶೋಭಾ, ಎಂ.ಅನಿತಾ ಹಾಗೂ ರಂಜಿತಾ ಅವರು ಪಾಲ್ಗೊಂಡಿದ್ದರು.

ಚಾಲಕನಿಗೆ ಇರಿದು ಕಳವು ಮಾಡಿದ್ದ ಕಾರು ಬೆಳ್ತಂಗಡಿಯಲ್ಲಿ ಪತ್ತೆ



ಮೈಸೂರು, ಜು.8(ಜಿಎ)– ಮೈಸೂರಿನ ಕಾರು ಚಾಲಕನಿಗೆ ಮಂಡ್ಯದ ಕೆಸ್ತೂರು ಬಳಿ ಚಾಕುವಿನಿಂದ ಇರಿದು ಕಾರಿನೊಂದಿಗೆ ಪರಾರಿಯಾಗಿದ್ದ ದುಷ್ಕರ್ಮಿಗಳು ಕಾರನ್ನು ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯಲ್ಲಿ ಬಿಟ್ಟು ಪರಾರಿಯಾಗಿದ್ದು, ಸದ್ಯ ಕಾರು ಬೆಳ್ತಂಗಡಿ ಪೊಲೀಸರ ವಶದಲ್ಲಿದೆ.

ತುರ್ತು ಕಾರಣ ಹೇಳಿ ಇತ್ತೀಚೆಗೆ (ಜು.4) ಮೈಸೂರಿನಿಂದ ತುಮಕೂರಿಗೆ ಕಾರು ಬಾಡಿಗೆಗೆ ಪಡೆದು ತೆರಳುತ್ತಿದ್ದ ಇಬ್ಬರು ದುಷ್ಕರ್ಮಿಗಳು, ಮಾರ್ಗಮಧ್ಯೆ ಮೈಸೂರಿನ ಚಾಲಕ ರುದ್ರಸ್ವಾಮಿ(46)ಗೆ ಚಾಕುವಿನಿಂದ ಇರಿದು ಗಾಯಗೊಳಿಸಿ, ಟೊಯೊಟಾ ಇಟಿಯಾಸ್ (ಕೆಎ–09, ಸಿ–2358) ಕಾರಿನೊಂದಿಗೆ ಪರಾರಿಯಾಗಿದ್ದರು. ಕಾರಿನೊಂದಿಗೆ ಪರಾರಿಯಾಗಿದ್ದ ವಿಷಯವನ್ನು ಕಾರು ಚಾಲಕನ ಸ್ನೇಹಿತರು ಮತ್ತು ಮಾಲೀಕರ ವಾಟ್ಸ್ ಅಪ್ ಗ್ರೂಪ್ ಹಾಗೂ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಈ ಸಂದೇಶವು ರಾಜ್ಯದ ಎಲ್ಲಾ ಚಾಲಕರ ಸಂಘಗಳಿಗೂ ತಲುಪಿತ್ತು. ಜು.6 ರಂದು ಟೊಯೊಟಾ ಇಟಿಯಾಸ್ ಕಾರು ಬೆಳ್ತಂಗಡಿ ಬಳಿ ಅಲ್ಲಿನ ಚಾಲಕರೊಬ್ಬರಿಗೆ ಕಂಡು ಬಂದಿದ್ದು, ತಕ್ಷಣ ಅವರು ಆ ಕಾರನ್ನು ಹಿಂಬಾಲಿಸಿದ್ದಾರೆ. ಕೆಲ ಸಮಯದ ನಂತರ ಕಾರು ಕಾಣಲಿಲ್ಲ. ಈ ವಿಚಾರವನ್ನು ಅಲ್ಲಿನ ಪೊಲೀಸರಿಗೆ ತಿಳಿಸಿದ್ದಾರೆ. ನಂತರ ಪೊಲೀಸರು ನಾಕಾಬಂದಿ ಹಾಕಿ ಕಳ್ಳರು ತಪ್ಪಿಸಿಕೊಳ್ಳದಂತೆ ತಡೆದಿದ್ದಾರೆ. ಈ ವಿಚಾರಗಳನ್ನು ಹೇಗೋ ತಿಳಿದುಕೊಂಡ ಖದೀಮರು, ಕಾರನ್ನು ರಸ್ತೆ ಮಧ್ಯದಲ್ಲಿಯೇ ಬಿಟ್ಟು ಪರಾರಿಯಾಗಿದ್ದಾರೆ. ಸದ್ಯ ಕಾರು ಬೆಳ್ತಂಗಡಿಯ ಪೊಲೀಸರ ವಶದಲ್ಲಿದೆ. ಇತ್ತ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಾಲಕ ರುದ್ರಸ್ವಾಮಿಗೆ ಶಸ್ತ್ರ ಚಿಕಿತ್ಸೆ ನಡೆದಿದ್ದು, ಅವರು ಚೇತರಿಸಿಕೊಳ್ಳುತ್ತಿದ್ದಾರೆ.

2ನೇ ಆಷಾಢ ಶುಕ್ರವಾರ: ಚಾಮುಂಡೇಶ್ವರಿ ದರ್ಶನಕ್ಕೆ ಹರಿದು ಬಂದ ಭಕ್ತ ಸಾಗರ

- ಸಾಂಗವಾಗಿ ನೆರವೇರಿದ ಪೂಜಾ ಕೈಂಕರ್ಯ
- ದೇವಿ ದರ್ಶನ ಪಡೆದು ಪುನೀತರಾದ ಭಕ್ತರು


ಎರಡನೇ ಶುಕ್ರವಾರದ ಹಿನ್ನೆಲೆಯಲ್ಲಿ ದೇವಿಯ ದರ್ಶನ ಪಡೆಯಲು ಸಾಲುಗಟ್ಟಿ ನಿಂತಿರುವ ಭಕ್ತರು.

ಮೈಸೂರು, ಜು.8(ಎಂಟಿವೈ)– ಆಷಾಢ ಎರಡನೇ ಶುಕ್ರವಾರವಾದ ಇಂದು ಚಾಮುಂಡಿಬೆಟ್ಟದಲ್ಲಿ ಜರುಗಿದ ವಿಶೇಷ ಪೂಜಾ ಮಹೋತ್ಸವದಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು, ನಾಡದೇವಿಯ ದರ್ಶನ ಪಡೆದರು.

ಆಷಾಢ ಮಾಸದ ವಿಶೇಷ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಳ್ಳಲು ಗುರುವಾರ ಮಧ್ಯರಾತ್ರಿಯಿಂದಲೇ ರಾಜ್ಯದ ವಿವಿಧೆಡೆಯಿಂದ ಭಕ್ತರು ಆಗಮಿಸಿ, ದೇವಿಯ ದರ್ಶನ ಪಡೆಯುವ ಮೂಲಕ ಪುನೀತರಾದರು. ಈ ಬಾರಿಯೂ ಬೆಟ್ಟದಲ್ಲಿ ಬಿಗಿ ಪೊಲೀಸ್ ಭದ್ರತೆಯಲ್ಲಿ ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ಭಕ್ತರ ದಂಡೇ ಪಾಲ್ಗೊಂಡು ತಾಯಿ ಚಾಮುಂಡೇಶ್ವರಿಗೆ ಜೈಕಾರದ ಘೋಷಣೆ ಕೂಗಿ, ಭಕ್ತಿ ಮೆರೆದರು.

ಮುಂಜಾನೆಯಿಂದಲೇ ಪೂಜೆ: ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ದೇವಿಗೆ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ನೇತೃತ್ವದಲ್ಲಿ ವಿವಿಧ ಅಭಿಷೇಕ ಮಾಡಿ ಪೂಜೆ ನೆರವೇರಿಸಿದರು. ಮುಂಜಾನೆ 3.30ರಿಂದಲೇ ದೇವಿಗೆ ಮಹಾನ್ಯಾಸಕ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಅಭಿಷೇಕ ನೆರವೇರಿಸಲಾಯಿತು. ಮಹಾಲಕ್ಷ್ಮೀ ಅಲಂಕಾರ ಮಾಡಿ ವಿವಿಧ ಹೂವುಗಳಿಂದ ಅಲಂಕರಿಸಲಾಯಿತು

ಮುಂಜಾನೆ 5.30ರಿಂದ ರಾತ್ರಿ 9.30ರವರೆಗೂ ದರ್ಶನ: ಧಾರ್ಮಿಕ ಕಾರ್ಯ ಮುಗಿದ ನಂತರ ಮುಂಜಾನೆ 5.30ರಿಂದ ಭಕ್ತರಿಗೆ ದರ್ಶನಕ್ಕೆ ಅವಕಾಶ ನೀಡಲಾಯಿತು. ಬೆಳಗ್ಗೆ 9.30ಕ್ಕೆ ದೇವಾಲಯದ ಪ್ರಾಂಗಣದಲ್ಲೇ ಉತ್ಸವ ಮೂರ್ತಿ ಮೆರವಣಿಗೆ ಮಾಡಿ ಸಂಪ್ರದಾಯದಂತೆ ಪೊಲೀಸ್ ಪೇದೆಯಿಂದ ಗನ್ ಸೆಲ್ಯೂಟ್ ಗೌರವ ಸಮರ್ಪಿಸಲಾಯಿತು. ನಂತರ ರಾತ್ರಿ 9.30 ರವರೆಗೂ ಭಕ್ತರಿಗೆ ದೇವಿ ದರ್ಶನಕ್ಕೆ ಅವಕಾಶ ನೀಡಲಾಯಿತು. ಮುಂಜಾನೆಯಿಂದ ರಾತ್ರಿವರೆಗೆ ಸಾವಿರಾರು ಭಕ್ತರು ಬೆಟ್ಟಕ್ಕೆ ಬಂದು ದೇವಿಯ ದರ್ಶನ ಪಡೆದರು.

ಉತ್ಸವ ಮೂರ್ತಿಗೆ ನಾಗಲಕ್ಷ್ಮಿ ವಿಶೇಷ ಅಲಂಕಾರ: ಆಷಾಢ ಮಾಸದ ಪ್ರತಿ ಶುಕ್ರವಾರ ಚಾಮುಂಡೇಶ್ವರಿಗೆ ವಿವಿಧ ರೀತಿಯ ಅಲಂಕಾರಗಳನ್ನು ಮಾಡಲಿದ್ದು, ಈ ವಾರ ದೇವಿಗೆ ನಾಗಲಕ್ಷ್ಮಿ ಅಲಂಕಾರ ಮಾಡಲಾಗಿತ್ತು. ನೀಲಿಯ ಸೀರೆಯೊಂದಿಗೆ ವಿವಿಧ ಹೂವುಗಳಿಂದ ಸಿಂಗಾರಗೊಂಡು ಕಂಗೊಳಿಸುತ್ತಿದ್ದ ಚಾಮುಂಡೇಶ್ವರಿ ಕಂಡು ಭಕ್ತರು ಪುನೀತರಾದರು.

ರಾತ್ರಿಯಿಡೀ ಜಾಗರಣೆ: ಆಷಾಢ ಶುಕ್ರವಾರ ದೇವಿಯ ದರ್ಶನಕ್ಕೆ ವಿವಿಧೆಡೆಯಿಂದ ಮೈಸೂರಿಗೆ ಬಂದಿದ್ದ ಭಕ್ತರು ಮೆಟ್ಟಿಲುಗಳ ಮೂಲಕ ಬೆಟ್ಟಕ್ಕೆ ಬಂದು ಗುರುವಾರ ರಾತ್ರಿ 10 ಗಂಟೆಯಿಂದಲೇ ದೇವಾಲಯದ ಮುಂಭಾಗ ಸರದಿ ಸಾಲಿನಲ್ಲಿ ನಿಂತಿದ್ದರು. ಮುಂಜಾನೆ 5.30ಕ್ಕೆ ದೇವಾಲಯದ ಬಾಗಿಲು ತೆರೆಯುತ್ತಿದ್ದಂತೆಯೇ ದೇವಾಲಯ ಪ್ರವೇಶಿಸಿ, ದರ್ಶನ ಪಡೆಯುವ ಮೂಲಕ ಭಕ್ತಿ ಮೆರೆದರು.

ಗಣ್ಯರಿಂದ ದರ್ಶನ: ಆಷಾಢ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವದಲ್ಲಿ ಇಂದು ಸಚಿವ ಭೈರತಿ ಬಸವರಾಜು ದೇವಿಯ ದರ್ಶನ ಪಡೆದರು. ಸಚಿವರಿಗೆ ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಸಾಥ್ ನೀಡಿದರು. ಇದರೊಂದಿಗೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಸೇರಿದಂತೆ ಇನ್ನಿತರರು ದೇವಿಯ ದರ್ಶನ ಪಡೆದರು.

ಭಕ್ತರಿಗೆ ಪ್ರಸಾದದ ವ್ಯವಸ್ಥೆ: ಆಷಾಢ ಶುಕ್ರವಾರದ ಅಂಗವಾಗಿ ಬೆಟ್ಟಕ್ಕೆ ಭೇಟಿ ನೀಡಿದ ಭಕ್ತರಿಗೆ ಕಳೆದ ವಾರದಂತೆ ಅಚ್ಚುಕಟ್ಟಾಗಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಕಳೆದ 11 ವರ್ಷದಿಂದ ಪ್ರತಿ ವರ್ಷದಂದು 2ನೇ ಆಷಾಢ ಶುಕ್ರವಾರದಲ್ಲಿ ಭಕ್ತರಿಗೆ ಅನ್ನ ಸಂತರ್ಪಣೆ ಮಾಡಿಸುವ ನಂಜನಗೂಡಿನ ಚಾಮುಂಡಿ ಟೌನ್‌ಷಿಪ್ ಹಾಗೂ ಕೊಯಮತ್ತೂರಿನ ದುರ್ಗಾ ಏಜೆನ್ಸಿಯ ಶಾಂತಿ ಮತ್ತು ತಂಬು ದಂಪತಿಯಿಂದ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಬೆಳಗ್ಗೆ 6.30ರಿಂದ ಆರಂಭವಾದ ಪ್ರಸಾದ ವಿತರಣೆ ರಾತ್ರಿ 7.30ರವರೆಗೂ ನಡೆಯಿತು. ಭಕ್ತರಿಗಾಗಿ ಬೆಳಗ್ಗೆ ಪೊಂಗಲ್, ವೆಜಿಟೇಬಲ್ ಬಾತ್, ಕೇಸರಿಬಾತ್, ಉಪ್ಪಿಟ್ಟು, ಬೋಂಡಾ, ಮಧ್ಯಾಹ್ನ ಅನ್ನ, ಸಾಂಬಾರ್, ಪಲ್ಯ, ಸಿಹಿ ಬೂಂದಿ ನೀಡಲಾಯಿತು.

ವಿಐಪಿ ಪಾಸ್: ನಾಳೆ ಎರಡನೇ ಶನಿವಾರ ಹಾಗೂ ಭಾನುವಾರ ರಜೆ ಇರುವ ಹಿನ್ನೆಲೆಯಲ್ಲಿ ಬೆಂಗಳೂರಿನ ಹಲವು ಮಂದಿ ಇಂದು ವಿಐಪಿ ಪಾಸ್ ಪಡೆದು ಚಾಮುಂಡಿಬೆಟ್ಟಕ್ಕೆ ಬಂದಿದ್ದು ಕಂಡು ಬಂದಿತು. ಪಾಸ್ ಪಡೆದು ಖಾಸಗಿ ವಾಹನದಲ್ಲಿ ಬಂದಿದ್ದ ಹಲವರಲ್ಲಿ ಬಹುತೇಕ ಮಂದಿ ಬೆಂಗಳೂರಿಗರೇ ಆಗಿದ್ದು ವಿಶೇಷ. ಇದನ್ನು ಗಮನಿಸಿದ ಸ್ಥಳೀಯರು ನಾಡದೇವಿ ನೋಡಲು ಸ್ಥಳೀಯರಿಗೆ ಹಲವು ಕಟ್ಟುಪಾಡು ವಿಧಿಸಿ, ಬೆಂಗಳೂರಿನವರಿಗೆ ವಿಐಪಿ ಪಾಸ್ ಹಂಚಿಕೆ ಮಾಡಲಾಗಿದೆ ಎಂದು ಅಸಮಧಾನ ವ್ಯಕ್ತಪಡಿಸಿದರು. ಸಚಿವರ ಸಂಬಂಧಿ, ಹಿರಿಯ ಅಧಿಕಾರಿಗಳ ಸಂಬಂಧಿ ಎಂದು ಪೊಲೀಸರಿಗೆ ವಿವರಿಸುತ್ತಿದ್ದ ದೃಶ್ಯ ಕಂಡು ಬಂದಿತು.

ಚಾಮುಂಡಿಬೆಟ್ಟ ಪ್ರವಾಸಿ ತಾಣವಲ್ಲ: ರೋಪ್ ವೇ ಕೈಬಿಟ್ಟಿದ್ದು ಸರಿಯಾದ ಕ್ರಮ



ಆಷಾಢ ಎರಡನೇ ಶುಕ್ರವಾರದ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದೇವಿಯ ದರ್ಶನ ಪಡೆದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿ, ಚಾಮುಂಡಿಬೆಟ್ಟಕ್ಕೆ ನಿರ್ಮಿಸಲು ಉದ್ದೇಶಿಸಿದ್ದ ರೋಪ್ ವೇ ಯೋಜನೆ ಕೈಬಿಟ್ಟಿರುವ ನಿರ್ಧಾರ ಸಮಂಜಸವಾಗಿದೆ. ಸರ್ಕಾರ ಸರಿಯಾದ ನಿರ್ಧಾರವನ್ನೇ ಪ್ರಕಟಿಸಿದೆ. ಚಾಮುಂಡಿ ಬೆಟ್ಟ ಕೇವಲ ಪ್ರವಾಸಿ ತಾಣವಲ್ಲ ರಾಜ್ಯದ ಪ್ರಮುಖ ಧಾರ್ಮಿಕ ಕೇಂದ್ರಗಳಲ್ಲಿ ಒಂದಾಗಿದೆ. ಈ ಹಿನ್ನೆಲೆಯಲ್ಲಿ ಬೆಟ್ಟಕ್ಕಿರುವ ಧಾರ್ಮಿಕ ಪಾವಿತ್ರ್ಯತೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕಾಗಿದೆ. ಬೆಟ್ಟದ ಪರಿಸರವನ್ನು ಕಾಪಾಡಿಕೊಳ್ಳಲೇಬೇಕಾಗಿದೆ. ಬೆಟ್ಟಕ್ಕೆ ರೋಪ್ ವೇ ಅಗತ್ಯವಿಲ್ಲ ಎಂದರು.


ಚಾಮುಂಡಿಬೆಟ್ಟಕ್ಕೆ ಸಚಿವ ಭೈರತಿ ಬಸವರಾಜ್ ಭೇಟಿ ನೀಡಿ ದೇವಿಯ ದರ್ಶನ ಪಡೆದರು.


ಮೆಟ್ಟಿಲುಗಳ ಮೂಲಕ ಬೆಟ್ಟ ಹತ್ತುತ್ತಿರುವ ಭಕ್ತರ ದಂಡು

ಉದ್ಯೋಗದ ಆಸೆ ತೋರಿಸಿ ನಿರುದ್ಯೋಗಿಗೆ 48.80 ಲಕ್ಷ 'ಆನ್‌ಲೈನ್' ವಂಚನೆ: ಮೂವರ ಬಂಧನ

ಮೈಸೂರು, ಜು.8(ಎಂಟಿವೈ)–ಕೆಲಸ ಕೊಡಿಸುವುದಾಗಿ ನಂಬಿಸಿ ಮೈಸೂರಿನ ಸಾತಗಳ್ಳಿಯ ವ್ಯಕ್ತಿಯೊಬ್ಬನಿಂದ 48.80 ಲಕ್ಷ ರೂ. ಪಡೆದು ವಂಚಿಸಿದ್ದ ಬೆಂಗಳೂರು ಮೂಲದ ಮೂವರನ್ನು ಸೆನ್ ಪೊಲೀಸರು ಬಂಧಿಸಿ, 24 ಲಕ್ಷ ರೂ. ನಗದು ಹಾಗೂ ಲ್ಯಾಪ್‌ಟಾಪ್ ಸೇರಿದಂತೆ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಕೊರೊನಾ ಸಮಸ್ಯೆಯಿಂದ ಕೆಲಸ ಕಳೆದುಕೊಂಡಿದ್ದ ಸಾತಗಳ್ಳಿಯ 40 ವರ್ಷದ ಡಿಪ್ಲೊಮಾ ಇನ್ ಮೆಕ್ಯಾನಿಕಲ್ ಇಂಜಿನಿಯರ್, ಸಾಮಾಜಿಕ ಜಾಲತಾಣಗಳಲ್ಲಿ ಕೆಲಸ ಹುಡುಕುತ್ತಿದ್ದ ವೇಳೆ, 'ಎಮಿನೆಂಟ್ ಮೈಂಡ್' ಕಂಪನಿಯ ವೆಬ್‌ಸೈಟ್ ಕಣ್ಣಿಗೆ ಬಿದ್ದಿದೆ. ಈ ವೇಳೆ ಕೆಲಸ ಖಾಲಿಯಿರುವ ಬಗ್ಗೆ ಮಾಹಿತಿ ಕೇಳಿದ್ದಾರೆ. ಇದನ್ನೇ ಬಂಡವಾಳವಾಗಿಸಿಕೊಂಡ ಮೂವರು ಮೈಸೂರಿನ ಈ ವ್ಯಕ್ತಿಯನ್ನು ಸಂಪರ್ಕಿಸಿ, ಸಂದರ್ಶನಕ್ಕೆಂದು ಬೆಂಗಳೂರಿಗೆ ಕರೆದಿದ್ದಾರೆ. ಅನುಮಾನ ಬಾರದಂತೆ ಮಲ್ಟಿನ್ಯಾಷನಲ್ ಕಂಪನಿಯಲ್ಲಿ ಸಂದರ್ಶನ ಮಾಡುವಂತೆ ಸಂದರ್ಶನ ಮಾಡಿದ್ದಾರೆ. ಬಳಿಕ 2020ರ ನ.5 ರಿಂದ 2022ರ ಏ.4ರವರೆಗೆ ಹಂತ ಹಂತವಾಗಿ ನೋಂದಣಿ ಶುಲ್ಕ, ಠೇವಣಿ, ವಿವಿಧ ಶುಲ್ಕದ ನೆಪದಲ್ಲಿ ಬರೋಬ್ಬರಿ 48,80,300 ಪಡೆದು ವಂಚಿಸಿದ್ದು, ಇದೀಗ ಸೆನ್ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನ ಎಸ್ಪಿ ಕಚೇರಿಯಲ್ಲಿ ಶುಕ್ರವಾರ ಮಧ್ಯಾಹ್ನ ಸುದ್ದಿಗೋಷ್ಠಿ ನಡೆಸಿದ ಎಸ್ಪಿ ಆರ್.ಚೇತನ್, ಮೈಸೂರಿನ ಸೆನ್ ಪೊಲೀಸರು ಪ್ರಕರಣದ ಮಾಹಿತಿ ನೀಡಿ, ಆನ್‌ಲೈನ್ ವಂಚನೆ ಬಗ್ಗೆ ಎಚ್ಚರದಿಂದ ಇರಬೇಕು. ಅನಗತ್ಯವಾಗಿ ಆನ್‌ಲೈನ್ ಮೂಲಕ ಹಣ ನೀಡದಂತೆ ಎಚ್ಚರಿಕೆ ನೀಡಿದರು.

ಕೊರೊನಾ ಸಂದರ್ಭದಲ್ಲಿ ಮೈಸೂರಿನ ವ್ಯಕ್ತಿಯೊಬ್ಬರು ಕೆಲಸ ಕಳೆದುಕೊಂಡಿದ್ದರು. ಕೆಲಸಕ್ಕಾಗಿ ಗೂಗಲ್‌ನಲ್ಲಿ ಹುಡುಕಾಟ ನಡೆಸುವಾಗ ಅವರಿಗೆ ಎಮಿನೆಂಟ್ ಮೈಂಡ್ ಎಂಬ ಕಂಪನಿಯ ಮಾಹಿತಿ ತಿಳಿದು, ಅರ್ಜಿ ಸಲ್ಲಿಸಿದ್ದಾರೆ. ಕಂಪನಿಯವರು ಕೆಲಸಕ್ಕೆ ನೀವು ಆಯ್ಕೆಯಾಗಿದ್ದು, ವಾರ್ಷಿಕ 8 ಲಕ್ಷ ರೂ. ಪ್ಯಾಕೇಜ್ ನೀಡುವುದಾಗಿ ನಂಬಿಸಿ, ಹಣ ನೀಡಿದರೆ ನಿಮ್ಮ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ ಎಂದು 2020ರ ನ.5 ರಿಂದ 2022ರ ಏ.4ರವರೆಗೆ 48,80,300 ರೂ. ಹಣವನ್ನು ಹಲವು ಕಂತುಗಳಲ್ಲಿ ಪಡೆದುಕೊಂಡಿದ್ದರು. ಕೆಲಸ ಸಿಗುವ ಆಸೆಯಿಂದ ಆ ವ್ಯಕ್ತಿ, ತನ್ನ ತಾಯಿಯ ಹಣ, ಡೆಬಿಟ್ ಕಾರ್ಡ್ ಸೇರಿದಂತೆ ವಿವಿಧ ಮೂಲದಿಂದ ಭಾರೀ ಮೊತ್ತದ ಹಣ ನೀಡಿ ವಂಚನೆಗೀಡಾಗಿದ್ದರು.

ಕೊನೆಗೆ ಆ ವ್ಯಕ್ತಿ ಮೈಸೂರು ಸಿಇಎನ್ ಕ್ರೈಂ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ನಾಲ್ವರು ಆರೋಪಿಗಳಲ್ಲಿ ಮೂವರನ್ನು ಬಂಧಿಸಿ, ವಿಚಾರಣೆ ನಡೆಸಿ, 7 ಮೊಬೈಲ್, 4 ಸ್ಮಾರ್ಟ್‌ಫೋನ್, 11 ಸಿಮ್ ಕಾರ್ಡ್, 2 ಲ್ಯಾಪ್ ಟಾಪ್, 3 ಕಚೇರಿ ಸೀಲುಗಳು, 24 ಲಕ್ಷ ರೂ ನಗದನ್ನು ವಶಪಡಿಸಿಕೊಂಡು, ಮೂವರು ಆರೋಪಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದಾಗ ಕೋರ್ಟ್ ಪೊಲೀಸರ ವಶಕ್ಕೆ ಒಪ್ಪಿಸಿದೆ ಎಂದು ಮಾಹಿತಿ ನೀಡಿದರು.

ಈ ಜಾಲದಲ್ಲಿ ಇನ್ನೂ ಹಲವರಿದ್ದು, ಶೀಘ್ರವೇ ಅವರನ್ನೂ ಬಂಧಿಸಲಾಗುವುದು. ಬಂಧಿತ ಆರೋಪಿಗಳೆಲ್ಲಾ ಬೆಂಗಳೂರಿನವರಾಗಿದ್ದು, ಒಬ್ಬ ಎಸ್ಸೆಸ್ಸೆಲ್ಸಿ, ಮತ್ತಿಬ್ಬರು ಡಿಪ್ಲೊಮಾ ಶಿಕ್ಷಣ ಪಡೆದವರಾಗಿದ್ದಾರೆ. ಇವರೆಲ್ಲ ಸೇರಿ ನಕಲಿ ಕಂಪನಿಗಳ ಹೆಸರಿನಲ್ಲಿ ಹಲವರಿಗೆ ಕೆಲಸ ಕೊಡಿಸುವುದಾಗಿ ನಂಬಿಸಿ ಹಣ ಪಡೆದು ವಂಚಿಸಿದ್ದಾರೆ. ಶೀಘ್ರವೇ ವಂಚನೆಗೆ ಒಳಗಾದ ವ್ಯಕ್ತಿಗಳನ್ನು ಪತ್ತೆ ಹಚ್ಚಲಾಗುವುದು ಎಂದು ತಿಳಿಸಿದರು.

ಪತ್ತೆ ಕಾರ್ಯದಲ್ಲಿ ಸೆನ್ ಪೊಲೀಸ್ ಠಾಣೆ (ಸೈಬರ್ ಎಕಾನಮಿಕ್ ಮತ್ತು ನಾರ್ಕೋಟಿಕ್ಸ್ ಅಪರಾಧ ಪೊಲೀಸ್ ಠಾಣೆ) ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಿಬ್ಬಂದಿ ಎಸ್.ಮಂಜುನಾಥ್, ರಂಗಸ್ವಾಮಿ, ಬಿ.ವಿ.ಮಂಜುನಾಥ್, ಮಹೇಶ್ ಭಾಗಿಯಾಗಿದ್ದಾರೆ ಎಂದು ಪ್ರಶಂಸೆ ವ್ಯಕ್ತ ಪಡಿಸಿದರು.

ಮದುವೆಯಾಗುವುದಾಗಿ ಅತ್ಯಾಚಾರ: ಮಹಿಳಾ ಆಯೋಗಕ್ಕೆ ದೂರು

ಮೈಸೂರು, ಜು. 8– ವ್ಯಕ್ತಿಯೋರ್ವ ಅತ್ಯಾಚಾರವೆಸಗಿದ ನಂತರ ಮದುವೆಯಾಗುವುದಾಗಿ ನಂಬಿಸಿ 5 ವರ್ಷ ನಿರಂತರವಾಗಿ ತನ್ನನ್ನು ದೈಹಿಕವಾಗಿ ಬಳಸಿಕೊಂಡು ಈಗ ಮದುವೆಯಾಗಲು ನಿರಾಕರಿಸುತ್ತಿದ್ದಾನೆ ಎಂದು ಮಹಿಳೆಯೋರ್ವರು ಜಿಲ್ಲಾಧಿಕಾರಿಗಳ ಮೂಲಕ ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದಾರೆ.

ತಿ.ನರಸೀಪುರ ತಾಲೂಕು ತೊಟ್ಟವಾಡಿ ಗ್ರಾಮದ ಶಿವನಾಗು ಎಂಬಾತ ಆರೋಪ ಎದುರಿಸುತ್ತಿರುವವನಾಗಿದ್ದು, ಈತನ ವಿರುದ್ಧ ತಲಕಾಡು ಪೊಲೀಸರಿಗೆ ದೂರು ಸಲ್ಲಿಸಲಾಗಿದೆ. ಆದರೆ, ಪೊಲೀಸರು ಆತನಿಗೆ ಸಹಾಯವಾಗುವಂತೆ ತನ್ನಿಂದ ದೂರನ್ನು ಬರೆಸಿಕೊಂಡಿದ್ದು, ತನಗೆ ಪೊಲೀಸರ ಮೇಲೆ ಅನುಮಾನ ಉಂಟಾಗಿದೆ. ಹೀಗಾಗಿ ಮಹಿಳಾ ಆಯೋಗವು ರಕ್ಷಣೆ ನೀಡಿ, ಶಿವನಾಗು ತನಗೆ ಬಾಳು ಕೊಡುವಂತೆ ಮಾಡಬೇಕೆಂದು ಮಹಿಳೆ ತನ್ನ ದೂರಿನಲ್ಲಿ ಕೋರಿದ್ದಾಳೆ. ಅಲ್ಲದೆ, ಶಿವನಾಗು ಕುಟುಂಬದವರಾದ ಬಸವಣ್ಣ, ರಾಜೇಂದ್ರ ಪ್ರಸಾದ್, ಮಧು ಪ್ರಸಾದ್, ಪುಟ್ಟರಾಜು ಮತ್ತು ವಕೀಲ ಮಹದೇವುಮೂರ್ತಿ ಅವರಿಂದ ಪ್ರಾಣ ಬೆದರಿಕೆ ಇದ್ದು, ರಕ್ಷಣೆ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ತಮಿಳುನಾಡಿನಲ್ಲಿ ಲಾರಿಗೆ ಬಸ್ಸು ಡಿಕ್ಕಿ: 6 ಮಂದಿ ಸಾವು

ಚೆಂಗಲ್ಪಟ್ಟು(ತಮಿಳುನಾಡು), ಜು.8– ಬಸ್ಸು ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ 6 ಮಂದಿ ಪ್ರಯಾಣಿಕರು ಸ್ಥಳದಲ್ಲಿಯೇ ಮೃತಪಟ್ಟು 10 ಮಂದಿಗೂ ಅಧಿಕ ಪ್ರಯಾಣಿಕರು ಗಾಯಗೊಂಡಿರುವ ಘಟನೆ ತಮಿಳು ನಾಡಿನ ಚೆಂಗಲ್ಪಟ್ಟುವಿನಲ್ಲಿ ಇಂದು ಶುಕ್ರವಾರ ಬೆಳಗ್ಗೆ ಸಂಭವಿಸಿದೆ.

ಕೆಆರ್‌ಎಸ್ ಬೃಂದಾವನ, ನೃತ್ಯ ಕಾರಂಜಿ ಸುಧಾರಣೆಗೆ ಅನುದಾನ

ಜಲಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ ಭರವಸೆ



ಮೈಸೂರು, ಜು.8(ಆರ್‌ಕೆ)– ಕೆಆರ್‌ಎಸ್‌ನ ಬೃಂದಾವನ ಉದ್ಯಾನ ಹಾಗೂ ನೃತ್ಯ ಕಾರಂಜಿ ಅಭಿವೃದ್ಧಿಗೆ ಈ ವರ್ಷವೇ ಅಗತ್ಯ ಅನುದಾನ ನೀಡುವುದಾಗಿ ಜಲಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ ಇಂದಿಲ್ಲಿ ಭರವಸೆ ನೀಡಿದ್ದಾರೆ.

ಕೆಆರ್‌ಎಸ್‌ಗೆ ಭೇಟಿ ನೀಡಿ ಅಣೆಕಟ್ಟೆ, ಜಲಾಶಯದ ನೀರಿನ ಪ್ರಮಾಣ, ಬೃಂದಾವನ ಮತ್ತು ನೃತ್ಯ ಕಾರಂಜಿ ಪರಿವೀಕ್ಷಣೆ ನಡೆಸಿದ ನಂತರ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಕುಸುಮಾ ಚಂದ್ರಶೇಖರ್ ಕಲ್ಯಾಣ ಮಂಟಪದಲ್ಲಿ ಕಾವೇರಿ ನೀರಾವರಿ ನಿಗಮವು ಆಯೋಜಿಸಿದ್ದ ಕೆಆರ್‌ಎಸ್, ಹಾರಂಗಿ, ಕಬಿನಿ ಮತ್ತು ಚಿಕ್ಕಹೊಳೆ ಅಣೆಕಟ್ಟೆಗಳ ನದಿಪಾತ್ರದಲ್ಲಿ ಪ್ರವಾಹ ಸಂದರ್ಭ ಉಂಟಾಗಬಹುದಾದ ಪ್ರತಿಕೂಲ ಪರಿಣಾಮಗಳ ನಿರ್ವಹಣೆಯಲ್ಲಿ ಪಾಲುದಾರರ ಪಾತ್ರದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಬೃಂದಾವನ ಮತ್ತು ನೃತ್ಯ ಕಾರಂಜಿಯನ್ನು ಅಭಿವೃದ್ಧಿಪಡಿಸಿ ಮತ್ತಷ್ಟು ಆಕರ್ಷಣೀಯವಾಗಿಸಲು ಕಾವೇರಿ ನೀರಾವರಿ ನಿಗಮವು ಸಿದ್ಧಪಡಿಸಿರುವ ಯೋಜನೆಯಲ್ಲಿ ಪ್ರಸ್ತಾಪಿಸಿರುವ ಅನುದಾನವನ್ನು ತಾವು ಮಂಜೂರು ಮಾಡಿ ಈ ವರ್ಷವೇ ಕಾಮಗಾರಿಗೆ ಚಾಲನೆ ನೀಡುವುದಾಗಿ ಸಚಿವರು ತಿಳಿಸಿದರು.

ಹೊಸ ಕ್ರೆಸ್ಟ್ ಗೇಟ್ ಅಳವಡಿಕೆ: ಹಳೆಯದಾಗಿರುವ ಕೃಷ್ಣರಾಜ ಸಾಗರ ಅಣೆಕಟ್ಟೆಯ 69 ಕ್ರೆಸ್ಟ್ ಗೇಟ್‌ಗಳನ್ನು ತೆಗೆದು ಹೊಸ ಗೇಟ್‌ಗಳನ್ನು 58 ಕೋಟಿ ರೂ. ವೆಚ್ಚದಲ್ಲಿ ಅಳವಡಿಸಲಾಗಿದೆ. ಉಳಿದ ಎಲ್ಲಾ ಗೇಟ್‌ಗಳನ್ನೂ ಹಂತ ಹಂತವಾಗಿ ಬದಲಿಸಿ ಜಲಾಶಯದಿಂದ ಒಂದೇ ಒಂದು ಹನಿ ನೀರು ಸೋರದಂತೆ ಕ್ರಮ ವಹಿಸಲಾಗುವುದು ಎಂದ ಅವರು, ಈ ಹಿಂದೆ ನೀರಿಗಾಗಿ ಹೋರಾಟಗಳೇ ನಡೆದಿವೆ. ನೀರು ಪೋಲಾಗದಂತೆ ತಡೆಗಟ್ಟುವುದು ಸರ್ಕಾರದ ಕೆಲಸ ಮಾತ್ರವಲ್ಲ, ರೈತರು, ಸಾರ್ವಜನಿಕರ ಜವಾಬ್ದಾರಿಯೂ ಹೌದು ಎಂದರು.

ಅಣೆಕಟ್ಟೆ ಸಂರಕ್ಷಣೆ: ಮೈಸೂರು ಅರಸರು ಕೆಆರ್‌ಎಸ್ ಅಣೆಕಟ್ಟೆ ಕಟ್ಟಿ ಈ ಭಾಗವನ್ನು ಸಂಪತ್ಭರಿತವಾಗಿಸಿದ್ದಾರೆ. ಕೃಷಿ, ಕುಡಿಯುವ ನೀರು, ಶಿಕ್ಷಣ, ಕೈಗಾರಿಕೆ ಸೇರಿ ಹಲವು ಕ್ಷೇತ್ರದಲ್ಲಿ ರಾಜರು ಮಾಡಿರುವ ಸಾಧನೆಯನ್ನು ಮುಂದಿನ ಪೀಳಿಗೆಗೂ ಉಳಿಸಿ ಸಂರಕ್ಷಿಸಬೇಕಾದ ಹೊಣೆ ಎಲ್ಲರದ್ದಾಗಿದೆ ಎಂದು ಸಚಿವರು ನುಡಿದರು.

30.16 ಲಕ್ಷ ಹೆಕ್ಟೇರ್ ಭೂಮಿ: ಕರ್ನಾಟಕ ರಾಜ್ಯದಲ್ಲಿ 231 ಜಲಾಶಯಗಳಿದ್ದು, ಒಟ್ಟು 30,16,000 ಹೆಕ್ಟೇರ್ ಭೂಮಿಯಲ್ಲಿ ಬೇಸಾಯ ನೀರಾವರಿಯಿಂದ ನಡೆಯುತ್ತಿದ್ದು, 16 ಲಕ್ಷ ಹೆಕ್ಟೇರ್ ಭೂಮಿ ಸಣ್ಣ ನೀರಾವರಿಯನ್ನು ಅವಲಂಬಿಸಿದೆ. ಇನ್ನೂ 10 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ನೀರಾವರಿ ಕೃಷಿ ಮಾಡಲು ಅವಕಾಶವಿದೆ ಎಂದ ಗೋವಿಂದ ಕಾರಜೋಳ, ಬೇಸಾಯದ ಪ್ರಮಾಣ ಹೆಚ್ಚಾದಲ್ಲಿ ಆಹಾರ ಧಾನ್ಯ ಕೊರತೆ ನೀಗುತ್ತದೆಯಲ್ಲದೆ, ಬಡತನ ನಿರ್ಮೂಲನೆಯಾಗಿ ರೈತರ ವರಮಾನ ಹೆಚ್ಚಾಗಲಿದೆ ಎಂದರು.

ಮೇಕೆದಾಟು ಯೋಜನೆ: ತಮಿಳುನಾಡು ರಾಜ್ಯ ಎಷ್ಟೇ ತೊಂದರೆ ಕೊಟ್ಟು ಅಡ್ಡಿಯುಂಟು ಮಾಡಿದರೂ ಮೇಕೆದಾಟು ಯೋಜನೆಯನ್ನು ಅನುಷ್ಠಾನ ಮಾಡಲು ಸರ್ಕಾರ ಬದ್ಧವಾಗಿದ್ದು, ಅದಕ್ಕಾಗಿ 1,000 ಕೋಟಿ ರೂ. ಅನುದಾನ ಮೀಸಲಿರಿಸಲಾಗಿದೆ. ಆ ಮೂಲಕ ಕೃಷಿ, ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುವುದು ಎಂದ ಅವರು, ಎತ್ತಿನ ಹೊಳೆ, ತುಂಗಾಭದ್ರದಂತಹ ನೀರಾವರಿ ಯೋಜನೆಗೆ ಸರ್ಕಾರ ಕ್ರಮ ವಹಿಸಿದೆ ಎಂದು ನುಡಿದರು.

ಒತ್ತುವರಿ ಮಾಡಬೇಡಿ: ಕೆರೆ, ನಾಲೆ, ಅಣೆಕಟ್ಟೆ, ಜಲಾಶಯಗಳನ್ನೇ ಒತ್ತುವರಿ ಮಾಡುವುದು, ನದಿಗಳಿಗೆ ಕೈಗಾರಿಕಾ ತ್ಯಾಜ್ಯ ಹಾಗೂ ರಸಾಯನಿಕ ಅನಿಲ ಬಿಡುವುದರಿಂದ ನೀರಿನ ಮೂಲ ನಾಶವಾಗುತ್ತದಲ್ಲದೆ, ನಿಸರ್ಗ ಮಲೀನವಾಗುತ್ತದೆ. ಅದನ್ನು ತಡೆಗಟ್ಟುವುದು ಅಥವಾ ಕಾನೂನಾತ್ಮಕ ಕ್ರಮ ಜರುಗಿಸುವುದು ಸರ್ಕಾರದ ಕೆಲಸವಾದರೂ, ಸಾರ್ವಜನಿಕರೂ ಜವಾಬ್ದಾರಿ ಮೆರೆಯಬೇಕೆಂದು ಸಚಿವರು ಸಲಹೆ ನೀಡಿದರು.

ಮುಂದಿನ ವಾರ ಕಾವೇರಿಗೆ ಸಿಎಂ ಬಾಗಿನ: ಕಾರಜೋಳ

ಮೈಸೂರು, ಜು. 8(ಆರ್‌ಕೆ)– ಮೈದುಂಬಿರುವ ಕಾವೇರಿ ಮಾತೆಗೆ ಮುಂದಿನ ವಾರವೇ ಮುಖ್ಯಮಂತ್ರಿಗಳು ಬಾಗಿನ ಸಮರ್ಪಿಸಲಿದ್ದಾರೆ ಎಂದು ಜಲಸಂಪನ್ಮೂಲ ಸಚಿವ ಗೋವಿಂದ ಎಂ. ಕಾರಜೋಳ ತಿಳಿಸಿದ್ದಾರೆ.

ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಪ್ರವಾಹ ನಿರ್ವಹಣೆ ಕುರಿತ ಅರಿವು ಕಾರ್ಯಾಗಾರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಇಂದು ಬೆಳಗ್ಗೆ ಕೆಆರ್‌ಎಸ್‌ಗೆ ಭೇಟಿ ನೀಡಿ ಜಲಾಶಯ ಮತ್ತು ಅಣೆಕಟ್ಟೆ ವೀಕ್ಷಿಸಿದ್ದೇನೆ. ಒಳಹರಿವಿನ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವುದರಿಂದ ನೀರಿನ ಮಟ್ಟವೂ ಹೆಚ್ಚಾಗುತ್ತಿದೆ. ಯಾವುದೇ ಸಂದರ್ಭದಲ್ಲಾದರೂ ಕೆಆರ್‌ಎಸ್ ಜಲಾಶಯ ಭರ್ತಿಯಾಗುವ ಸಾಧ್ಯತೆ ಇದೆ ಎಂದರು. ಮುಂದಿನ ವಾರವೇ ಮುಖ್ಯಮಂತ್ರಿಗಳಿಂದ ಕಾವೇರಿ ಮಾತೆಗೆ ಬಾಗಿನ ಸಮರ್ಪಣೆ ಮಾಡಿಸಲು ಕಾರ್ಯಕ್ರಮ ನಿಗದಿ ಮಾಡಿಸುತ್ತೇವೆ ಎಂದ ಸಚಿವರು, ಕೊಡಗು ಭಾಗದಲ್ಲೂ ಮಳೆ ಮುಂದುವರಿದಿರುವುದರಿಂದ ಕೆಆರ್‌ಎಸ್ ಜಲಾಶಯದಿಂದ ಅಣೆಕಟ್ಟೆ ಸುರಕ್ಷತೆ ಹಿನ್ನೆಲೆಯಲ್ಲಿ ಯಾವ ಸಂದರ್ಭದಲ್ಲಾದರೂ ಹೆಚ್ಚುವರಿ ನೀರನ್ನು ನದಿಗೆ ಹರಿಸಲಾಗುವುದು ಎಂದರು.

ಒಂದನೇ ಪುಟದಿಂದ

ವಿಶೇಷ ಟಾಸ್ಕ್‌ಫೋರ್ಸ್ ರಚನೆ

ಕಾಯ್ದುಕೊಂಡು ಪೂರ್ಣಗೊಳಿಸಬೇಕು. ದಸರಾ ವೇಳೆಗೆ ಆದ್ಯತೆ ಮೇರೆಗೆ ಎಲ್ಲಾ ಕಾಮಗಾರಿ ಪೂರ್ಣಗೊಳಿಸಿ, ಸ್ವಚ್ಛ ಮೈಸೂರಾಗಿ ಮಾರ್ಪಡಿಸ ಬೇಕು. ಬಾಕಿಯಿರುವ ವಿದ್ಯುತ್ ಕಂಬಗಳಿಗೆ ಎಲ್‌ಇಡಿ ಬಲ್ಬ್ ಅಳವಡಿಸುವ ಕಾರ್ಯ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ಕಳೆದ ಕೆಲವು ದಿನಗಳಿಂದ ಉತ್ತಮ ಮಳೆ ಬೀಳುತ್ತಿದೆ. ಈ ಸಂದರ್ಭ ಉಪಯೋಗಿಸಿಕೊಂಡು ಮೈಸೂರಲ್ಲಿ ಗಿಡ ನೆಡಲು ಕ್ರಮ ಕೈಗೊಳ್ಳಬೇಕು. ಈಗಲೇ ಗಿಡ ನಡೆಲು ಮುಂದಾದರೆ ಮುಂಬರುವ ದಿನಗಳಲ್ಲಿ 'ಹಸಿರು ಮೈಸೂರು' ಹೆಗ್ಗಳಿಕೆ ಸಾಧ್ಯವಾಗಲಿದೆ ಎಂದರು.

ಕಡ್ಡಾಯವಾಗಿ ಗ್ಲೌಸ್ ಧರಿಸಬೇಕು: ನಗರದಲ್ಲಿ ಸ್ವಚ್ಛತೆಯನ್ನು ಕಾಪಾಡುವುದರೊಂದಿಗೆ ಸ್ವಚ್ಛ ಸರ್ವೇಕ್ಷಣೆ ಅಭಿಯಾನದಲ್ಲಿ ಪ್ರಥಮ ಸ್ಥಾನ ಪಡೆಯಲು ಕೆಲಸ ಮಾಡಬೇಕು. ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ನಡೆಸಿದ ಪೌರಕಾರ್ಮಿಕರ ಮುಖಂಡರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪೌರಕಾರ್ಮಿಕರಿಗೆ ಸ್ವಚ್ಛತಾ ಕೆಲಸ ಮಾಡಲು ಗ್ಲೌಸ್, ಗಮ್‌ಬೂಟ್ ನೀಡಿಲ್ಲ ಎಂದು ಆರೋಪ ಮಾಡಿದ್ದಾರೆ. ಬರೀ ಕೈಯ್ಯಲ್ಲಿ ಸ್ವಚ್ಛತೆ ಮಾಡಿ ಎಂದೂ ಸರ್ಕಾರ ಎಂದು ಹೇಳಿಲ್ಲ. ಸ್ಥಳೀಯ ಸಂಸ್ಥೆಗಳು ಗ್ಲೌಸ್, ಬೂಟ್ ನೀಡಿದರೂ ಅದನ್ನು ಪೌರಕಾರ್ಮಿ ಕರು ಬಳಸುತ್ತಿಲ್ಲ. ಇನ್ನು ಮುಂದೆ ಕಡ್ಡಾಯವಾಗಿ ಗ್ಲೌಸ್, ಗಮ್‌ಬೂಟ್ ಧರಿಸುವಂತೆ ಪೌರಕಾರ್ಮಿಕರಿಗೆ ತಿಳಿಸಬೇಕು. ಪಾಲಿಕೆ ವತಿಯಿಂದ ಪೌರಕಾರ್ಮಿಕರಿಗೆ ಏನೆಲ್ಲಾ ಸಲಕರಣೆ ನೀಡಿದರೂ, ದಾಖಲೀಕರಿಸಿ ಸಂಘದ ಮುಖಂಡರ ಗಮನಕ್ಕೆ ತರುವಂತೆ ಸೂಚಿಸಿದರು.

ಆರೋಗ್ಯ ತಪಾಸಣೆ ಮಾಡಿಸಿ: ಕಾಲಕಾಲಕ್ಕೆ ಪೌರ ಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಿಸಬೇಕು. ನಾವು ಪೌರಕಾರ್ಮಿಕರಿಗೆ ಕೊಡುವ ಸವಲತ್ತುಗಳು ಬಳಕೆಯಾಗುವಂತೆ ಆರೋಗ್ಯಾಧಿಕಾರಿಗಳು ಕೆಲಸ ಮಾಡಬೇಕು. ಪೌರಕಾರ್ಮಿಕರನ್ನು ನಮ್ಮವರೆಂದು ತಿಳಿದು ಅವರ ಹಿತಕಾಯಬೇಕು ಎಂದು ತಿಳಿ ಹೇಳಿದರು.

ಉದ್ಯಾನವನ ನಿರ್ವಹಣೆ: ಕಾಮಗಾರಿಯಲ್ಲಿ ಅನಗತ್ಯ ವಿಳಂಬ ಆಗಬಾರದು. ಅಧಿಕಾರಿಗಳು ಕಚೇರಿಯಲ್ಲಿ ಕೂರದೇ ಸ್ಥಳಕ್ಕೆ ತೆರಳಿ ಜನರ ಸಮಸ್ಯೆಗಳನ್ನು ಬಗೆಹರಿಸಬೇಕು. ನಗರದ ಉದ್ಯಾನಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಬೇಕು. ಒಳಚರಂಡಿ ನೀರನ್ನು ಶುದ್ಧೀಕರಿಸಿ ಅದನ್ನು ಉದ್ಯಾನ ನಿರ್ವಹಣೆಗೆ ಉಪಯೋಗಿಸಲು ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಅಗತ್ಯ ಕ್ರಮ ಕೈಗೊಳ್ಳಲಾಗಿದೆ: ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ ಮಾತನಾಡಿ, ಪಾಲಿಕೆ ವತಿಯಿಂದ ಪೌರಕಾರ್ಮಿಕರಿಗೆ ಗುಣಮಟ್ಟದ ಸಮವಸ್ತ್ರ, ಗ್ಲೌಸ್, ಬೂಟ್, ರೈನ್‌ಕೋಟ್ ನೀಡಲಾಗಿದೆ. ಮೈಸೂರಲ್ಲಿ 22 ಕಡೆಗಳಲ್ಲಿ ಪೌರಕಾರ್ಮಿಕರಿಗಾಗಿ ವಿಶ್ರಾಂತಿ ಗೃಹ ನಿರ್ಮಿಸಲು ಸ್ಥಳ ಗುರುತಿಸಿ, ಕೆಲವು ಕಡೆಗಳಲ್ಲಿ ಕಾಮಗಾರಿಗೆ ವರ್ಕ್ ಆರ್ಡರ್ ಕೊಡಲಾಗಿದೆ. ಉಳಿದ ವಾರ್ಡ್‌ಗಳಲ್ಲೂ ಸ್ಥಳ ಗುರುತಿಸುವ ಪ್ರಕ್ರಿಯೆ ನಡೆಯುತ್ತಿದೆ

ಆದಾಯ ಹೆಚ್ಚಳಕ್ಕೆ ಕ್ರಮ: ತೆರಿಗೆ ಸಂಗ್ರಹದಲ್ಲಿ ನಗರ ಪಾಲಿಕೆ ಗಣನೀಯ ಸಾಧನೆ ಮಾಡಿದೆ. ಕಳೆದ ಬಾರಿ 162 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿ ಸಲಾಗಿತ್ತು. ಆಸ್ತಿ ತೆರಿಗೆ ಸಂಗ್ರಹದಲ್ಲಿ ಶೇ.35 ರಿಂದ 40 ರಷ್ಟು ಏರಿಕೆ ಕಂಡಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿ 104 ಕೋಟಿ ರೂ. ತೆರಿಗೆ ಸಂಗ್ರಹಿಸಲಾಗಿದೆ. ಉದ್ದಿಮೆ ಪರವಾನಗಿಯಿಂದ ಕಳೆದ ಬಾರಿ 8 ಕೋಟಿ ರೂ. ಸಂಗ್ರಹಿಸ ಲಾಗಿದ್ದು, ಈ ಬಾರಿ 12 ಕೋಟಿ ರೂ. ಸಂಗ್ರಹಿಸುವ ಗುರಿ ಇದೆ ಎಂದರು.

ನೀರಿನ ಸಂಪರ್ಕ ಕಡಿತ: ನಗರದಲ್ಲಿ 40 ಸಾವಿರ ಅನಧಿಕೃತ ಕುಡಿಯುವ ನೀರಿನ ಸಂಪರ್ಕವಿದ್ದು, ಅವುಗಳ ಕಡಿತಗೊಳಿಸುವ ಕಾರ್ಯಾಚರಣೆ ಮುಂದುವರೆಸಲಾಗಿದೆ. ಇದರಿಂದ ನೀರಿನ ಹೊಸ ಸಂಪರ್ಕ ಪಡೆಯಲು ತಿಂಗಳಿಗೆ 2 ಸಾವಿರ ಅರ್ಜಿ ಸಲ್ಲಿಕೆಯಾಗುತ್ತಿದೆ. ಕಳೆದ ಮೂರು ತಿಂಗಳಿಂದ 7500 ಹೊಸ ಸಂಪರ್ಕ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಕಾರ್ಯಾ ಚರಣೆ ಮುಂದುವರೆಸಲಾಗುತ್ತದೆ ಎಂದು ತಿಳಿಸಿದರು.

ವಾಹನ ಸಮಸ್ಯೆ ನಿವಾರಣೆ: ನಗರದಲ್ಲಿ ಸ್ವಚ್ಛತೆ ಕಾಪಾಡಲು 285 ಆಟೋ ಟಿಪ್ಪರ್, ವಾರ್ಡಿಗೊಂದು ಟ್ರಾಕ್ಟರ್, 12 ಕಾಂಪಾಕ್ಟರ್ ಸೇರಿದಂತೆ ಇನ್ನಿತರ ಮೂಲ ಸೌಕರ್ಯ ಕಲ್ಪಿಸಲಾಗಿದೆ. ರಾಯನಕೆರೆ, ಕೆಸರೆ,ವಿದ್ಯಾರಣ್ಯ ಪುರಂನಲ್ಲಿ ಘನತ್ಯಾಜ್ಯ ನಿರ್ವಹಣಾ ಘಟಕವನ್ನು ನಿರ್ಮಾಣ ಮಾಡಲು ಅನುದಾನ ಮಂಜೂರಾಗಿದ್ದು, ಫೈನಾನ್ಷಿಯಲ್ ಬಿಡ್‌ಗೆ ಅನುಮೋದನೆ ನೀಡಬೇಕಿದೆ. ಅದೇ ರೀತಿ 25 ಕೋಟಿ ರೂ.ವೆಚ್ಚದಲ್ಲಿ ಪೌರ ಕಾರ್ಮಿಕರ ಗೃಹಭಾಗ್ಯ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಟೆಕ್ನಿಕಲ್ ಬಿಡ್‌ಗೆ ಅನುಮತಿ ಸಿಕ್ಕಿದ್ದು, ಫೈನಾನ್ಷಿಯಲ್ ಬಿಡ್‌ಗೆ ಅನುಮೋದನೆ ದೊರೆಯಬೇಕಿದೆ ಎಂದರು.

ಈಗಾಗಲೇ 50ಸಾವಿರ ಬಲ್ಬ್‌ಗಳನ್ನು ಅಳವಡಿಸಿದ್ದು, ಉಳಿದ 10 ಸಾವಿರ ಬಲ್ಬ್‌ಗಳನ್ನು ಅಳವಡಿಸುತ್ತೇವೆ. ಅದೇ ರೀತಿ ನಗರಪಾಲಿಕೆ ವತಿಯಿಂದ ರಿಂಗ್ ರಸ್ತೆಯಲ್ಲಿ ದೀಪಗಳನ್ನು ಅಳವಡಿಸಲು ಟೆಂಡರ್ ಕರೆಯಲಾಗಿದೆ. ನಗರದಲ್ಲಿ ಎಲ್‌ಇಡಿ ಬೀದಿ ದೀಪಗಳ ಅಳವಡಿಕೆ ಕಾರ್ಯ ನಡೆಯುತ್ತಿದ್ದು, ಇನ್ನು ಎರಡರಿಂದ ಮೂರು ತಿಂಗಳ ಒಳಗೆ ಎಲ್ಲ ಕಡೆಗಳಲ್ಲಿ ಎಲ್‌ಇಡಿ ದೀಪ ಅಳವಡಿಸಲಾಗುವುದು ಎಂದು ಹೇಳಿದರು.

ಬಿ ಖಾತೆ ಸಮಸ್ಯೆ: ಪಾಲಿಕೆ ವ್ಯಾಪ್ತಿಯಲ್ಲಿ 50 ಸಾವಿರ ಕಂದಾಯ ನಿವೇಶನಗಳಲ್ಲಿ ನಿರ್ಮಾಣಗೊಂಡಿರುವ ಮನೆಗಳಿಗೆ 'ಬಿ ಖಾತಾ' ನೀಡಲು ಅನುಮೋದನೆಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಬಿ ಖಾತಾ ನೀಡು ವುದರಿಂದ ಪಾಲಿಕೆಯ ಆದಾಯ ಹೆಚ್ಚಾಗಲಿದೆ ಎಂದು ಹೇಳಿದರು. ಈ ಕುರಿತು ಪ್ರತಿಕ್ರಿಯಿಸಿದ ಸಚಿವ ಬೈರತಿ ಬಸವರಾಜ್, ಬಿ ಖಾತಾ ನೀಡಲು ಸರ್ಕಾರ ಈಗಾಗಲೇ ನಿರ್ಣಯ ಕೈಗೊಂಡಿದ್ದು, ಈ ಕುರಿತು ಸದ್ಯದಲ್ಲಿಯೇ ಸರ್ಕಾರದ ಆದೇಶ ಪಾಲಿಕೆ ಕೈ ಸೇರಲಿದೆ. ನೀರಿನ ಶುಲ್ಕದ ಬಾಕಿ ವಸೂಲಾತಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಮಾತನಾಡಿ, ಮುಡಾ ಬಡಾವಣೆಗಳಲ್ಲಿ 102 ವಿವಿಧ ಕಾಮಗಾರಿಗಳು ನಡೆಯುತ್ತಿವೆ. ಗುಂಪು ವಸತಿ ಯೋಜನೆಯಡಿ ವಿಜಯನಗರ 4ನೇ ಹಂತ, ದಟ್ಟಗಳ್ಳಿಯಲ್ಲಿ 341 ಕೋಟಿ ರೂ.ವೆಚ್ಚದಲ್ಲಿ 952 ಮನೆಗಳ ನಿರ್ಮಾಣಕ್ಕೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾ ಗಿದೆ. ಕೇಂದ್ರದ ಸಚಿವ ನಿತಿನ್ ಗಡ್ಕರಿ ಅವರು ಬಂದಿದ್ದಾಗ ಸಂಸದ ಪ್ರತಾಪ ಸಿಂಹ ನೇತೃತ್ವದಲ್ಲಿ ಫೆರಿಫೆರಲ್ ರಸ್ತೆ ನಿರ್ಮಾಣಕ್ಕೆ ಮನವಿ ಸಲ್ಲಿಸಲಾಯಿತು. ಅದಕ್ಕೆ ರಾಜ್ಯ ಸರ್ಕಾರದ ಮೂಲಕ ಡಿಪಿಆರ್ ತಯಾರಿಸಿ ರಾಜ್ಯ ಸರ್ಕಾರಕ್ಕೆ ಸಲ್ಲಿಸುವಂತೆ ಸಲಹೆ ನೀಡಿದ್ದಾರೆ. ಅದಕ್ಕಾಗಿ ಮುಡಾ ಸಭೆಯಲ್ಲಿ ಅನುಮೋಧನೆ ಪಡೆದು, ಸರ್ಕಾರಕ್ಕೆ ಕಳುಹಿಸಲಾಗಿದೆ ಎಂದರು. ಸಭೆಯಲ್ಲಿ ಹೆಚ್ಚುವರಿ ಆಯುಕ್ತರಾದ ಎಂ.ಜೆ.ರೂಪ, ಎಂ.ಕೆ.ಸವಿತಾ, ಅಧೀಕ್ಷಕ ಅಭಿಯಂತರ ಮಹೇಶ್, ಮುಡಾ ಕಾರ್ಯದರ್ಶಿ ವೆಂಕಟರಾಜು, ಪಾಲಿಕೆ ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ, ಆರೋಗ್ಯಾಧಿಕಾರಿ ಡಾ.ಡಿ.ಜಿ. ನಾಗರಾಜ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಇಇ ಆಸೀಫ್, ವಾಣಿವಿಲಾಸ ನೀರು ಸರಬರಾಜು ಕೇಂದ್ರದ ಕಾರ್ಯಪಾಲಕ ಅಭಿಯಂತರರಾದ ಸುವರ್ಣ ಇನ್ನಿತರರು ಹಾಜರಿದ್ದರು.

ಐಷರಾಮಿ ಟೆಂಟ್‌ಗಳ ಸೊಬಗು

ಆ ಮೂಲಕ ಹೆಚ್ಚು ಆದಾಯ ಪಡೆಯುವ ದೃಷ್ಟಿಯಿಂದ 54 ಟೆಂಟುಗಳನ್ನು ನಿರ್ಮಿಸಲು ಅವಕಾಶ ಮಾಡಿಕೊಡಲಾಗುತ್ತಿದೆ. ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ರಾಜಸ್ಥಾನ ಹಾಗೂ ಮಧ್ಯ ಪ್ರದೇಶದಲ್ಲಿ ಓಬೆರಾಯ್ ಹೋಟೆಲ್ ಸಮೂಹ ಅಲ್ಲಿನ ಪ್ರವಾಸಿ ಕೇಂದ್ರಗಳಲ್ಲಿ ಇಂತಹ ಐಷರಾಮಿ ಟೆಂಟುಗಳನ್ನು ನಿರ್ಮಾಣ ಮಾಡಿದೆ. ಅದೇ ಮಾದರಿಯಲ್ಲಿ ನಾವು ಟೆಂಟ್ ನಿರ್ಮಾಣಕ್ಕೆ ಅವಕಾಶ ಮಾಡಿಕೊಟ್ಟು ಹೋಟೆಲ್ ಉದ್ಯಮ ಲಾಭದಾಯವಾಗಿ ನಡೆಯಲು ಅನುವು ಮಾಡಿಕೊಡಲಾಗುವುದು. ಮೇಲ್ನೋಟಕ್ಕೆ ಟೆಂಟು ಎಂದು ಕಂಡು ಬಂದರೂ ಒಳಗೆ ಅತ್ಯಂತ ಭವ್ಯ ಮತ್ತು ಐಷರಾಮಿ ಕೊಠಡಿಯಿಂದ ಕೂಡಿರುತ್ತದೆ. ಲಲಿತ ಮಹಲ್ ಹೋಟೆಲ್‌ನಲ್ಲಿ ಸದ್ಯಕ್ಕಿರುವ ಕೊಠಡಿಗಳು ಮದುವೆಯಂತಹ ಸಮಾರಂಭಗಳಿಗೆ ಬರುವವರಿಗೆ ಸಾಲುತ್ತಿಲ್ಲ ಎಂದ ಅವರು, ಕನಿಷ್ಟ ಪಕ್ಷ ನೂರು ಕೊಠಡಿಗಳ ಸೌಲಭ್ಯವಾದರೂ ಇದ್ದರೆ ಅನುಕೂಲವಾಗುತ್ತದೆ ಎಂದರು. ಲಲಿತ ಮಹಲ್ ವ್ಯಾಪ್ತಿಯಲ್ಲಿ ಒಂದು ಮರವನ್ನೂ ಕಡಿಯದೆ ಇಂತಹ ಟೆಂಟುಗಳನ್ನು ನಿರ್ಮಿಸಲಾಗುವುದು.

ಈಗಂತೂ ಲಲಿತ್ ಮಹಲ್ ಹೋಟೆಲ್ ಪರಿಸ್ಥಿತಿ ಕೆಟ್ಟಿದೆ. ನಾನು ಹೋದಾಗ ಒಂದು ಕಡೆ ಹೋಟೆಲ್‌ನ ಜಂತಿಯೇ ಕುಸಿಯಿತು. ಇದನ್ನು ನೋಡಿದರೆ ಯಾರಿಗಾದರೂ ಹೊಟ್ಟೆ ಉರಿಯಬೇಕು.ಇಂತಹ ಐತಿಹಾಸಿಕ ಹೋಟೆಲ್‌ನ ನಿರ್ವಹಣೆ ಸರಿಯಾಗಿ ನಡೆಯುತ್ತಿಲ್ಲ ಎಂದು ನುಡಿದರು.

ಕಾವೇರಿ ಕಲಾ ಗ್ಯಾಲರಿ: ಜು.13ಕ್ಕೆ ಉದ್ಘಾಟನೆ

ಸಚಿವ ಆನಂದ್‌ಸಿಂಗ್ ಸಮ್ಮುಖದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಜು.13ರ ಬೆಳಗ್ಗೆ 11ಕ್ಕೆ ಉದ್ಘಾಟಿಸಲಿದ್ದಾರೆ. ಇದರೊಂದಿಗೆ ವರ್ಷವಿಡೀ ಪ್ರವಾಸಿಗರ ವೀಕ್ಷಣೆಗೆ ಗ್ಯಾಲರಿ ಮುಕ್ತಗೊಳ್ಳಲಿದೆ. ಈ ಕಾರ್ಯಕ್ರಮದಲ್ಲಿ ಶಾಸಕರಾದ ಎಸ್.ಎ.ರಾಮದಾಸ್, ಜಿ.ಟಿ.ದೇವೇಗೌಡರು, ಎಲ್.ನಾಗೇಂದ್ರ, ತನ್ವೀರ್ ಸೇಠ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಶ್, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ.

ಗ್ಯಾಲರಿ ವಿಶೇಷ: ಕನ್ನಡ ನಾಡಿನ ಜೀವನದಿ 'ಕಾವೇರಿ' ಉಗಮ ಸ್ಥಾನದಿಂದ ಸಮುದ್ರಕ್ಕೆ ಸೇರುವವರೆವಿಗೂ ಸಂಪೂರ್ಣ ಚಿತ್ರಣವನ್ನೊಳಗೊಂಡ 'ಕಾವೇರಿ ಕಲಾ ಗ್ಯಾಲರಿ' ನಿರ್ಮಾಣ ನಾಲ್ಕೈದು ವರ್ಷಗಳಿಂದ ನಡೆದಿತ್ತು. ಗ್ಯಾಲರಿ ಸಜ್ಜುಗೊಂಡು ವರ್ಷ ಕಳೆದಿದ್ದರೂ ಕೊರೊನಾ ಮತ್ತಿತರ ಕಾರಣಗಳಿಂದ ಅಧಿಕೃತವಾಗಿ ಉದ್ಘಾಟನೆ ಆಗಿರಲಿಲ್ಲ. ನೀರೆರೆಯುವ ಕಾವೇರಿ ವಿಗ್ರಹ, ಕಾವೇರಿ ಕೊಳ್ಳದ ಜನಾಂಗೀಯ ವೈವಿಧ್ಯತೆ, ಕೃಷಿಯ ಮಹತ್ವ, ಕಾವೇರಿ ಹಾದಿಯ ಆಸುಪಾಸಿನಲ್ಲಿರುವ ಸಾಂಸ್ಕೃತಿಕ ವೈಭವ, ವರ್ಚುವಲ್ ಬೋಟಿಂಗ್ ಮತ್ತಿತರ ವಿಶೇಷತೆಗಳಿವೆ. ಅಲ್ಲದೆ 3ಡಿ ಸ್ಕ್ರೀನ್ ಥಿಯೇಟರ್‌ನಲ್ಲಿ ಕಾವೇರಿ ನದಿ ಕುರಿತಾದ 20 ನಿಮಿಷಗಳ ಕಿರುಚಿತ್ರ ಪ್ರಸಾರ ಮಾಡಲಾಗುತ್ತದೆ. ದೇಶದಲ್ಲಿ ಗಂಗಾ ಮತ್ತು ಬ್ರಹ್ಮಪುತ್ರ ನದಿಗಳ ಕುರಿತ ಗ್ಯಾಲರಿಗಳಿದ್ದು, ಮೂರನೆಯದಾಗಿ ಸಾಂಸ್ಕೃತಿಕ ನಗರಿ ಮೈಸೂರಿನ ಕಾವೇರಿ ಕಲಾ ಗ್ಯಾಲರಿ ಜನಾಕರ್ಷಣೆಯ ಕೇಂದ್ರವಾಗಲಿದೆ.

ವೀಕ್ಷಣೆಗೆ ಟಿಕೆಟ್: ಉದ್ಘಾಟನೆ ನಂತರ ಕಾವೇರಿ ಕಲಾ ಗ್ಯಾಲರಿಯನ್ನು ವೀಕ್ಷಣೆಗೆ ಮುಕ್ತಗೊಳಿಸಲಾಗುವುದು. ವಯಸ್ಕರಿಗೆ 20 ಹಾಗೂ ಮಕ್ಕಳಿಗೆ 10 ರೂ. ಪ್ರವೇಶ ಶುಲ್ಕ ಇರಲಿದೆ. ಸದ್ಯಕ್ಕೆ ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ಸಮಯ ನಿಗದಿಪಡಿಸಲಾಗಿದ್ದು, ಸಂದರ್ಭಾನುಸಾರ ಸಮಯದ ವಿಸ್ತರಣೆ ಮಾಡಿಕೊಳ್ಳಲಾಗುವುದು ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಕೋಲು ಹಿಡಿದು ರಾಜಕಾರಣ ಮಾಡಲ್ಲ

ಮುಂದಿನ ವಿಧಾನಸಭೆ ಚುನಾವಣೆಯೇ ನನ್ನ ಕೊನೆ ಚುನಾವಣೆ: ಸಿದ್ದರಾಮಯ್ಯ



ಕೊಳ್ಳೇಗಾಲ, ಜು.8– ಮುಂದಿನ ವಿಧಾನಸಭಾ ಚುನಾವಣೆಯೇ ನನ್ನ ಕೊನೆ ಚುನಾವಣೆ. ಶಾಸಕನಾಗಿ 39 ವರ್ಷ ಪೂರೈಸಿದ್ದೇನೆ. ನಾನು 81 ವರ್ಷ ಆದ ಬಳಿಕ ಕೋಲು ಹಿಡಿದು ರಾಜಕಾರಣ ಮಾಡುವುದಿಲ್ಲ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದ ಬಸ್ತೀಪುರ ಬಡಾವಣೆಯಲ್ಲಿ ಶುಕ್ರವಾರ ನಡೆದ ಶ್ರೀ ಸಿದ್ದಪ್ಪಾಜಿ ಕೊಂಡೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಂದಿನ ವಿಧಾನಸಭಾ ಅವಧಿ ಪೂರ್ಣಗೊಂಡಾಗ ನನಗೆ 81 ವರ್ಷ ಆಗುತ್ತದೆ. ಹಾಗಾಗಿ ಇದು ನನ್ನ ಕೊನೆಯ ಚುನಾವಣೆ. ನನ್ನ ಮಗ ಈಗಾಗಲೇ ರಾಜಕೀಯ ಪ್ರವೇಶಿಸಿ ಶಾಸಕನೂ ಆಗಿದ್ದಾನೆ. ರಾಜಕೀಯ ಎಂದರೆ ಅಧಿಕಾರ ಪಡೆದು ಹಣ ಮಾಡುವುದಲ್ಲ, ಮಜಾ ಮಾಡುವುದಲ್ಲ, ನಾಡಿನ ಜನರ ಸೇವೆ ಮಾಡುವುದು ಎಂದರು.

40 ವರ್ಷದಿಂದ ಪ್ರಾಮಾಣಿಕ ಸೇವೆ: ಮುಖ್ಯಮಂತ್ರಿ ಆಗಿ ನನ್ನ ಐದು ವರ್ಷ ಆಡಳಿತದ ಅವಧಿಯಲ್ಲಿ ಅನೇಕ ಯೋಜನೆಗಳನ್ನು ಜಾರಿಗೆ ತಂದು, ಬಡವರಿಗೆ ಸಹಾಯ ಮಾಡಿದ್ದೇನೆ. 40 ವರ್ಷಗಳಿಂದ ಪ್ರಾಮಾಣಿಕವಾಗಿ ಜನಸೇವೆ ಮಾಡಿದ್ದೇನೆ. ಮುಂದೆಯೂ ಮಾಡುತ್ತೇನೆ. ಹಿಂದೆ ನಾನು ಬಸ್ತೀಪುರಕ್ಕೆ ಚುನಾವಣಾ ಪ್ರಚಾರಕ್ಕೆ ಬಂದಿದ್ದೆ. ಈಗ ಸಿದ್ದಪ್ಪಾಜಿ ಕೊಂಡೋತ್ಸವ ಕಾರ್ಯಕ್ರಮಕ್ಕೆ ಬಂದಿದ್ದೇನೆ. ದಲಿತರು, ನಾಯಕರು ಹಾಗೂ ಕುರುಬ ಜನಾಂಗದವರು ಒಟ್ಟಾಗಿ ಸೇರಿ ಈ ಹಬ್ಬ ಮಾಡುತ್ತಿರುವುದರಿಂದ ಇಲ್ಲಿಗೆ ಬಂದಿದ್ದೇನೆ ಎಂದರು.

ಹುಟ್ಟುಹಬ್ಬ ಆಚರಿಸಿಕೊಂಡಿಲ್ಲ: 'ನನಗೆ ಹುಟ್ಟಿದ್ದ ತಾರೀಕು ಗೊತ್ತಿಲ್ಲ ನಾನು 5ನೇ ತರಗತಿಗೆ ನೇರವಾಗಿ ಪ್ರವೇಶ ಪಡೆದೆ. ರಾಜಪ್ಪ ಎಂಬ ಮುಖ್ಯಶಿಕ್ಷಕರು ಕೊಟ್ಟ ದಿನಾಂಕವೇ ನನ್ನ ಜನ್ಮ ದಿನ. ನನ್ನ ಹಿತೈಷಿಗಳು, ಅಭಿಮಾನಿಗಳು ಹಾಗೂ ಸ್ನೇಹಿತರು ಒಟ್ಟಾಗಿ ಸೇರಿ 75ನೇ ಜನ್ಮ ದಿನಾಚರಣೆಯನ್ನು ದಾವಣಗೆರೆಯಲ್ಲಿ ಮುಂದಿನ ತಿಂಗಳು 3ರಂದು ಆಚರಿಸುತ್ತಿದ್ದಾರೆ. ನೀವೂ ಬನ್ನಿ ಎಂದು ಆಹ್ವಾನ ನೀಡಿದರು.

ಸಿದ್ದರಾಮೋತ್ಸವ ಅಲ್ಲ: ಆ ಕಾರ್ಯಕ್ರಮವನ್ನು 'ಸಿದ್ದರಾಮಯ್ಯ–75 ಅಮೃತ ಮಹೋತ್ಸವ' ಎಂದು ಆಚರಿಸಲಾಗುತ್ತದೆ. ಸಿದ್ದರಾಮೋತ್ಸವ ಎಂದಲ್ಲ. ಆರ್‌ಎಸ್‌ಎಸ್‌ನವರು ಆ ರೀತಿ ಕರೆದಿದ್ದಾರೆ. ಸಿದ್ದರಾಮಯ್ಯ ಉತ್ಸವ ಎಂದರೆ ವ್ಯಕ್ತಿಪೂಜೆ ಮಾಡಿದಂತಾಗುತ್ತದೆ. ಸಂವಿಧಾನದಲ್ಲಿ ಈ ರೀತಿಯ ಉತ್ಸವಕ್ಕೆ ಮಾನ್ಯತೆ ಇಲ್ಲ ಎಂದರು.

ಸುಧಾಕರ್ ಶಾಸಕನಾಗಿದ್ದೇ ನನ್ನಿಂದ: ಮುಂದಿನ ಚುನಾವಣೆಗೆ ಕ್ಷೇತ್ರ ಹುಡುಕಾಡುತ್ತಿರುವ ಬಗ್ಗೆ ಆರೋಗ್ಯ ಸಚಿವ ಸುಧಾಕರ್ ಹೇಳಿಕೆಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, 2013ರಲ್ಲಿ ನಾನು ಸುಧಾಕರ್‌ಗೆ ಟಿಕೆಟ್ ನೀಡಿದ ಕಾರಣ ಅವನು ಶಾಸಕನಾಗಿದ್ದಾನೆ. ಅವನಿಗೆ ಟಿಕೆಟ್ ಕೊಡಬೇಕು ಎಂದು ಮಹದೇವಪ್ಪ ಶಿಫಾರಸು ಮಾಡಿದ್ದರು. ಈಗ ಅದನ್ನು ಅವನು ಮರೆತಿದ್ದಾನೆ ಎಂದರು.

ಅಧಿಕಾರಕ್ಕಾಗಿ ಮಹೇಶ್ ಪಕ್ಷ ತೊರೆದರು: ಸ್ಥಳೀಯ ಶಾಸಕ ಎನ್.ಮಹೇಶ್ ವಿರುದ್ಧ ಸಿದ್ದರಾಮಯ್ಯ ಅವರು ಏಕವಚನದಲ್ಲೇ ವಾಗ್ದಾಳಿ ನಡೆಸಿದರು. ಅಧಿಕಾರಕ್ಕಾಗಿ ಜನಸೇವೆ ಮಾಡುವವರನ್ನು ನಂಬಬೇಡಿ. ಇತ್ತೀಚಿನ ದಿನಗಳಲ್ಲಿ ಎಲ್ಲರೂ ಅಧಿಕಾರಕ್ಕೆ ಆಸೆ ಪಡುತ್ತಿದ್ದಾರೆಯೇ ವಿನಾ ಜನಸೇವೆಗಾಗಿ ಅಲ್ಲ, ನಿಮ್ಮ ಕೊಳ್ಳೇಗಾಲದ ಶಾಸಕ ಅಧಿಕಾರಕ್ಕಾಗಿ, ಹಣಕ್ಕಾಗಿ ಹೋಗಿದ್ದಾನೆ. ಆನೆ ಪಕ್ಷದಿಂದ ಗೆದ್ದು ಆನೆ ಬಿಟ್ಟು ಪರಾರಿಯಾಗಿದ್ದಾನೆ. ನನ್ನ ಅವಧಿಯಲ್ಲಿ ಇಲ್ಲಿ ಮಾಡಿರುವ ರಸ್ತೆಯೇ ಈಗಲೂ ಇದೆ. ಕ್ಷೇತ್ರಕ್ಕೆ ಹೊಸ ಅನುದಾನವನ್ನು ತಂದಿಲ್ಲ. ನನ್ನ ಅವಧಿಯಲ್ಲಿ ಬಸ್ ನಿಲ್ದಾಣ ಕಾಮಗಾರಿ ಪ್ರಾರಂಭ ಮಾಡಿದ್ದೆ. ಇನ್ನೂ ಅದನ್ನು ಮುಗಿಸಿಲ್ಲ. ಮತ್ತೆ ನಾನೇ ಬಂದು ಉದ್ಘಾಟನೆ ಮಾಡುತ್ತೇನೆ ಎಂದರು.

ಅಭಿಮಾನಿಗಳಿಂದ ಅದ್ದೂರಿ ಸ್ವಾಗತ: ಸಿದ್ದರಾಮಯ್ಯ ಅವರನ್ನು ಅಭಿಮಾನಿಗಳು ಹಾಗೂ ಬೆಂಬಲಿಗರು ಅದ್ದೂರಿಯಾಗಿ ಸ್ವಾಗತಿಸಿದರು. ಬಸ್ತೀಪುರಕ್ಕೆ ಆಗಮಿಸುತ್ತಿದ್ದಂತೆ ಪಟಾಕಿ ಸಿಡಿಸಿ ಕುಣಿದು ಕುಪ್ಪಳಿಸಿದರು. ದಾರಿಯುದ್ದಕ್ಕೂ ಮಹಿಳೆಯರು, ಮಕ್ಕಳು, ಯುವಕರು, ಯುವತಿಯರು, ಹಿರಿಯರು ಹೂವಿನ ಮಳೆಗರೆದರು. ಅಭಿಮಾನಿಗಳು 300 ಕೆ.ಜಿ ತೂಕದ ಭಾರೀ ಸೇಬಿನ ಹಾರವನ್ನು ಕ್ರೇನ್ ಮೂಲಕ ಹಾಕಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ, ಶಾಸಕರಾದ ಆರ್.ನರೇಂದ್ರ, ಪುಟ್ಟರಂಗಶೆಟ್ಟಿ, ಅನಿಲ್ ಚಿಕ್ಕಮಾದು, ಕಾಂಗ್ರೆಸ್ ಮುಖಂಡರಾದ ಡಾ.ಹೆಚ್.ಸಿ. ಮಹದೇವಪ್ಪ, ಜಯಣ್ಣ, ಎ.ಆರ್.ಕೃಷ್ಣಮೂರ್ತಿ, ಬಾಲರಾಜ್, ಜೆಡಿಎಸ್ ಜಿಲ್ಲಾ ಅಧ್ಯಕ್ಷ ಮಂಜುನಾಥ್, ಬಸ್ತೀಪುರ ಯಜಮಾನರಿದ್ದರು.

ಅಮರನಾಥ ಗುಹೆ ಬಳಿ ಮೇಘಸ್ಫೋಟ; 15ಕ್ಕೂ ಅಧಿಕ ಮಂದಿ ಸಾವು

40ಕ್ಕೂ ಹೆಚ್ಚು ಜನ ನಾಪತ್ತೆ; NDRF ದೌಡು, ಸಮರೋಪಾದಿ ರಕ್ಷಣೆ



ಶ್ರೀನಗರ, ಜು.8– ಪವಿತ್ರ ಯಾತ್ರಾತಾಣ ಅಮರನಾಥ ಗುಹೆ ಬಳಿ ಮೇಘ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ 15ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ.

ಶುಕ್ರವಾರ ಜಮ್ಮು ಮತ್ತು ಕಾಶ್ಮೀರದ ಅಮರನಾಥದ ಪವಿತ್ರ ಗುಹೆಯ ದೇಗುಲದ ಬಳಿ ಮೇಘಸ್ಫೋಟ ಸಂಭವಿಸಿದ್ದು, ಈ ವೇಳೆ ದಿಢೀರ್ ಉಂಟಾದ ಪ್ರವಾಹಕ್ಕೆ ಸಿಲುಕಿ 3 ಮಹಿಳೆಯರು, ಇಬ್ಬರು ಪುರುಷರು ಸೇರಿ 15ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದಾರೆ ಮತ್ತು ಅನೇಕರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೂಲಗಳ ಪ್ರಕಾರ ಶುಕ್ರವಾರ ಸಂಜೆ 5:30ರ ಸುಮಾರಿನಲ್ಲಿ ಮೇಘಸ್ಫೋಟ ಸಂಭವಿಸಿದ್ದು, ಈ ವೇಳೆ ದಿಢೀರ್ ಉಂಟಾದ ಪ್ರವಾಹದಲ್ಲಿ ಜನರು ಸಿಲುಕಿದ್ದಾರೆ. ಯಾತ್ರೆ ಮಾರ್ಗದಲ್ಲಿರುವ ಸಮುದಾಯ ಅಡುಗೆ ಕೋಣೆಗಳು ಮತ್ತು ಟೆಂಟ್‌ಗಳು ಕೊಚ್ಚಿ ಹೋಗಿವೆ.

ಸೇನಾ ಮೂಲಗಳ ಪ್ರಕಾರ ಮೇಘಸ್ಫೋಟ ಮತ್ತು ಅದರ ಬಳಿಕದ ಪ್ರವಾಹದಿಂದಾಗಿ 15ಕ್ಕೂ ಅಧಿಕ ಮಂದಿ ಸಾವನ್ನಪ್ಪಿದ್ದು, 40ಕ್ಕೂ ಹೆಚ್ಚು ಜನ ನಾಪತ್ತೆಯಾಗಿದ್ದಾರೆ ಎಂದು ಹೇಳಲಾಗಿದೆ. ಅಂತೆಯೇ ಪ್ರವಾಹದ ನೀರು ನೇರವಾಗಿ ಯಾತ್ರಿಕರು ತಂಗಿದ್ದ ಟೆಂಟ್ ಗಳತ್ತ ನುಗ್ಗಿದ್ದು ಇದು ಸಾವು–ನೋವಿನ ಪ್ರಮಾಣ ಹೆಚ್ಚಿಸುವ ಆತಂಕ ಎದುರಾಗಿದೆ. ಪ್ರಸ್ತುತ ಗಾಯಾಳುಗಳನ್ನು ಚಿಕಿತ್ಸೆಗಾಗಿ ಏರ್ ಲಿಫ್ಟ್ ಮಾಡಲಾಗುತ್ತಿದ್ದು, ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ತಂಡಗಳು ಮತ್ತು ಇತರ ಏಜೆನ್ಸಿಗಳಿಂದ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿವೆ. ಪ್ರವಾಹ ಮತ್ತು ಮೇಘಸ್ಫೋಟದ ಹೊರತಾಗಿಯೂ ಪರಿಸ್ಥಿತಿ ನಿಯಂತ್ರಣದಲ್ಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇನ್ನು 2 ವರ್ಷಗಳ ಕೋವಿಡ್ ಅಂತರದ ನಂತರ ಈ ವರ್ಷ ಜೂನ್ 30 ರಂದು ತೀರ್ಥಯಾತ್ರೆ ಪ್ರಾರಂಭ ವಾಗಿತ್ತು. ಈ ಹಿಂದೆ ಪ್ರತಿಕೂಲ ಹವಾಮಾನದ ಕಾರಣ ಅಮರನಾಥ ಯಾತ್ರೆಯನ್ನು ಈ ವಾರದ ಆರಂಭದಲ್ಲಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು ಅಂದಿನಿಂದ 72,000 ಕ್ಕೂ ಹೆಚ್ಚು ಯಾತ್ರಾರ್ಥಿಗಳು ದೇಗುಲದಲ್ಲಿ ತಮ್ಮ ಪೂಜೆ ಸಲ್ಲಿಸಿದ್ದಾರೆ. ಯಾತ್ರೆಯು ಆಗಸ್ಟ್ 11 ರಂದು ಕೊನೆಗೊಳ್ಳಲ್ಲಿದೆ.

ಅಮರನಾಥ ಯಾತ್ರೆ ತಾತ್ಕಾಲಿಕ ಸ್ಥಗಿತ: ಖ್ಯಾತ ಪವಿತ್ರ ಯಾತ್ರಾತಾಣ ಅಮರನಾಥ ಗುಹೆ ಬಳಿ ಮೇಘಸ್ಫೋಟ ಸಂಭವಿಸಿರುವ ಹಿನ್ನಲೆಯಲ್ಲಿ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲೀಸ್ ಮಾಹಿತಿ ನೀಡಿದೆ.

ಜನರ ಜೀವ ರಕ್ಷಣೆಗೆ ಆದ್ಯತೆ: ಇನ್ನು ಇದೇ ವಿಚಾರವಾಗಿ ಟ್ವೀಟ್ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಅಮರನಾಥ ಗುಹೆಯಲ್ಲಿ ಮೇಘಸ್ಫೋಟದಿಂದ ಉಂಟಾದ ಹಠಾತ್ ಪ್ರವಾಹಕ್ಕೆ ಸಂಬಂಧಿಸಿದಂತೆ ನಾನು ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರೊಂದಿಗೆ ಮಾತನಾಡಿದ್ದೇನೆ. NDRF, SDRF, BSF ಮತ್ತು ಸ್ಥಳೀಯ ನಿರ್ವಾಹಕರು ರಕ್ಷಣಾ ಕಾರ್ಯವನ್ನು ಮಾಡುತ್ತಿದ್ದಾರೆ. ಜನರ ಜೀವ ಉಳಿಸುವುದೇ ನಮ್ಮ ಆದ್ಯತೆಯಾಗಿದೆ ಎಂದು ಹೇಳಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲಿ ಪೆಟ್ರೋಲ್ ಬಳಕೆ ಸ್ಥಗಿತ

ನವದೆಹಲಿ, ಜು.8– ಪರ್ಯಾಯ ಇಂಧನಗಳತ್ತ ಮುಖ ಮಾಡಿರುವ ಭಾರತದಲ್ಲಿ ಮುಂದಿನ 5



ವರ್ಷಗಳಲ್ಲಿ ಪೆಟ್ರೋಲ್ ಬಳಕೆ ನಿಷೇಧವಾಗಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಮಹಾರಾಷ್ಟ್ರದ ಅಕೋಲಾದಲ್ಲಿ ಡಾ.ಪಂಜಾಬ್ರಾವ್ ದೇಶಮುಖ್ ಕೃಷಿ ವಿದ್ಯಾಪೀಠದಿಂದ ಗಡ್ಕರಿ ಅವರಿಗೆ ಡಾಕ್ಟ್ ಆಫ್ ಸೈನ್ಸ್ (ಡಿಎಸ್‌ಸಿ) ಗೌರವ ಪದವಿ ಪ್ರದಾನ ಮಾಡಲಾಯಿತು. ವಿಶ್ವವಿದ್ಯಾನಿಲಯದ 36 ನೇ ಘಟಿಕೋತ್ಸವ ಸಮಾರಂಭದಲ್ಲಿ ಗವರ್ನರ್ ಮತ್ತು ಸಾರ್ವಜನಿಕ ವಿಶ್ವವಿದ್ಯಾಲಯಗಳ ಕುಲಪತಿ ಭಗತ್ ಸಿಂಗ್ ಕೊಶ್ಯಾರಿ ಅವರು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವರಿಗೆ ಪದವಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಮಾಜಿ ಉಪಕುಲಪತಿ ಡಾ.ಮೋತಿಲಾಲ್ ಮದನ್, ಕುಲಸಚಿವ ಡಾ.ವಿಲಾಸ್ ಭಾಲೆ, ಕುಲಸಚಿವರು, ಅಧ್ಯಾಪಕರು, ಪ್ರಾಧ್ಯಾಪಕರು, ಶಿಕ್ಷಕರು ಹಾಗೂ ಪದವೀಧರ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ದೇಶದಲ್ಲಿ ಪರ್ಯಾಯ ಇಂಧನ ಬಳಕೆಯ ಮಹತ್ವದ ಕುರಿತು ಮಾತನಾಡಿದರು.

ಐದು ದಿನ ಕೊಡಗಲ್ಲಿ ಭಾರೀ ಮಳೆ ಸಾಧ್ಯತೆ

ಮೈಸೂರು, ಮಂಡ್ಯ, ಚಾ.ನಗರದಲ್ಲಿ ತುಂತುರು ಮಳೆ

ಮೈಸೂರು, ಜು.8(ಆರ್‌ಕೆಬಿ)– ಭಾರತೀಯ ಹವಾ ಮುನ್ಸೂಚನೆ ಪ್ರಕಾರ ಕೊಡಗು ಜಿಲ್ಲೆಯಲ್ಲಿ ಮುಂದಿನ 5 ದಿನ ಭಾರೀ ಮಳೆ ಆಗಲಿದೆ. ಕೊಡಗು ಜಿಲ್ಲೆಯಲ್ಲಿ ಜು.9ರಂದು 58 ಮಿ.ಮೀ, 10ರಂದು 48 ಮಿ.ಮೀ., 11ರಂದು 43 ಮಿ.ಮೀ., 12ರಂದು 38 ಮಿ.ಮೀ. ಮತ್ತು 13ರಂದು 39 ಮಿ.ಮೀ. ಮಳೆಯಾಗಲಿದೆ. ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಗರಿಷ್ಠ 25–26 ಡಿಗ್ರಿ ಸೆಲ್ಸಿಯಸ್, ಕನಿಷ್ಠ 18–19 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ನಾಗನಹಳ್ಳಿ ಹವಾಮಾನ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ. ಈ ಐದು ದಿನಗಳ ಅವಧಿಯಲ್ಲಿ ಮಳೆ ಮೈಸೂರು ಜಿಲ್ಲೆಯಲ್ಲಿ ಒಟ್ಟಾರೆ 35 ಮಿ.ಮೀ.,(ಉಷ್ಣಾಂಶ– ಗರಿಷ್ಠ 28–29 ,ಕನಿಷ್ಠ 18.20 ಡಿಗ್ರಿ ಸೆಲ್ಸಿಯಸ್, ಮಂಡ್ಯ ಜಿಲ್ಲೆಯಲ್ಲಿ ಒಟ್ಟು 19 ಮಿ.ಮೀ. (ಉಷ್ಣಾಂಶ– ಗರಿಷ್ಠ 27–28, ಕನಿಷ್ಠ 18–20 ಡಿಗ್ರಿ ಸೆಲ್ಸಿಯಸ್), ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 20 ಮಿ.ಮೀ.(ಉಷ್ಣಾಂಶ– ಗರಿಷ್ಠ 27–28, ಕನಿಷ್ಠ 20–21 ಡಿಗ್ರಿ ಸೆಲ್ಸಿಯಸ್) ಇರಲಿದೆ ಎಂದು ತಿಳಿಸಿದ್ದಾರೆ.

ಜು.11ರಂದು ರೈತ ಸಂಘದಿಂದ ಮುಖ್ಯಮಂತ್ರಿ ಮನೆಗೆ ಮುತ್ತಿಗೆ

- ಕಬ್ಬು ಬೆಲೆ ನಿಗದಿ, ಹಳೇ ಬಾಕಿ ಪಾವತಿಗೆ ಆಗ್ರಹ
- ಬಲಾತ್ಕಾರದ ಗೃಹ ವಿದ್ಯುತ್ ಬಿಲ್ ವಸೂಲಿಗೆ ವಿರೋಧ

ಮೈಸೂರು, ಜು.8(ಆರ್‌ಕೆಬಿ)– ಕಬ್ಬು ಬೆಲೆ ನಿಗದಿಪಡಿಸಬೇಕು, ಹಳೇ ಬಾಕಿ ಪಾವತಿಸಬೇಕು, ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿ ಹೇರದಂತೆ ಹಾಗೂ ಕರ ನಿರಾಕರಣೆ ಚಳುವಳಿಯಲ್ಲಿ ಕಟ್ಟಡ ಗೃಹ ವಿದ್ಯುತ್ ಬಿಲ್ ಬಲಾತ್ಕಾರ ವಸೂಲಿ ಕ್ರಮ ವಿರೋಧಿಸಿ ಜು.11ರಂದು ಕರ್ನಾಟಕ ರಾಜ್ಯ ರೈತಸಂಘದ ಆಶ್ರಯದಲ್ಲಿ ಮುಖ್ಯಮಂತ್ರಿಗಳ ಮನೆ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲ ಪುರ ನಾಗೇಂದ್ರ ಇಂದಿಲ್ಲಿ ತಿಳಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬ್ಬಿಗೆ ಪ್ರತೀ ಟನ್‌ಗೆ 4500 ರೂ. ನಿಗದಿ ಮಾಡಬೇಕು. ಹಳೇ ಬಾಕಿ ಪಾವತಿಸಬೇಕು. ಗೃಹ ವಿದ್ಯುತ್ ಬಾಕಿ ವಸೂಲಿ ನಿಲ್ಲಿಸಿ, ಹಿಂದಿನ ಸರ್ಕಾರದ ಮಾತಿನಂತೆ ನಡೆದುಕೊಳ್ಳಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಮುಖ್ಯಮಂತ್ರಿಗಳ ಗಮನ ಸೆಳೆಯಲು ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಅಂದು ಬೆಳಗ್ಗೆ 11 ಗಂಟೆಗೆ ಸಾವಿರಾರು ರೈತರು ಬೆಂಗಳೂರಿನ ರೈಲ್ವೆ ನಿಲ್ದಾಣದಿಂದ ಮುಖ್ಯಮಂತ್ರಿ ಮನೆಯವರೆಗೆ ಮೆರವಣಿಗೆಯಲ್ಲಿ ತೆರಳಿ ಮುತ್ತಿಗೆ ಹಾಕಲಿರುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೈತಸಂಘದ ವಿಭಾಗೀಯ ಕಾರ್ಯದರ್ಶಿ ಸರಗೂರು ನಟರಾಜ್, ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ತಾಲೂಕು ಅಧ್ಯಕ್ಷ ಪ್ರಭಾಕರ್ ಆನಂದೂರು, ಗೌರವಾಧ್ಯಕ್ಷ ನಾಗನಹಳ್ಳಿ ವಿಜೇಂದ್ರ, ಪ್ರಧಾನ ಕಾರ್ಯದರ್ಶಿ ಮಂಡಕಳ್ಳಿ ಮಹೇಶ್, ಮಾಜಿ ಅಧ್ಯಕ್ಷ ಪಿ.ಮರಂಕಯ್ಯ ಉಪಸ್ಥಿತರಿದ್ದರು.

ಮಕ್ಕಳಿಗೆ ವಿದ್ಯೆ ಜೊತೆಗೆ ಉತ್ತಮ ಸಂಸ್ಕೃತಿ ಕಲಿಸುವುದು ಅತ್ಯಗತ್ಯ

ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಭಗಿನಿ ಸೇವಾ ಸಮಾಜದ ನೂತನ ಕಟ್ಟಡಕ್ಕೆ ಭೂಮಿ ಪೂಜೆ

ಮೈಸೂರು, ಜು.8(ಆರ್‌ಕೆಬಿ)– ಇಂದಿನ ಸಂಸ್ಕೃತಿ ನೋಡಿದರೆ ಮುಂದೆ ಹೇಗೆ ಎಂಬ ಆತಂಕ ಉಂಟಾಗುತ್ತದೆ. ಹಾಗಾಗಿ ಮುಂದಿನ ಪೀಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಕ್ಕಳಿಗೆ ವಿದ್ಯೆಯ ಜೊತೆಗೆ ಉತ್ತಮ ಸಂಸ್ಕೃತಿ ಕಲಿಸುವುದು ಅತ್ಯಗತ್ಯ ಎಂದು ಉಡುಪಿ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ತಿಳಿಸಿದರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಭಗಿನಿ ಸೇವಾ ಸಮಾಜದ ಆವರಣದಲ್ಲಿ ವಿಜಯ ವಿಠಲ ವಿದ್ಯಾಸಂಸ್ಥೆಗಳ ಆಶ್ರಯದಲ್ಲಿ ನಿರ್ಮಾಣಗೊಳ್ಳಲಿರುವ 30 ಕೋಟಿ ಅಂದಾಜು ವೆಚ್ಚದ ನೂತನ ಕಟ್ಟಡಕ್ಕೆ ಶುಕ್ರವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಇಂದು ಶಿಕ್ಷಣಕ್ಕೇನು ಕೊರತೆಯಿಲ್ಲ. ಆದರೆ ಮಕ್ಕಳಿಗೆ ಅಕ್ಷರ ಕಲಿಸುವುದಷ್ಟೇ ಸಾಲದು, ಅವರಿಗೆ ಭಾರತೀಯ ಸಂಸ್ಕೃತಿಯನ್ನು ಕಲಿಸಬೇಕು. ಇಂದು ಕೆಲವೇ ಕೆಲವು ಅನಾಗರಿಕರು ನುಸುಳಿ ನಾಗರಿಕರಿಗೆ ಬದುಕುವುದೇ ಕಷ್ಟ ಎಂಬಂತಾಗಿದೆ. ಹಾಗಾಗಿ ವಿದ್ಯೆಯ ಜೊತೆಗೆ ಉತ್ತಮ ಸಂಸ್ಕಾರ ಹಾಗೂ ಈ ನೆಲದ ಸಂಸ್ಕೃತಿಯನ್ನು ಕಲಿಸಬೇಕು. ಇದರ ಫಲವಾಗಿ ಮುಂದೆ ಸುಸಂಸ್ಕೃತ ಪೀಳಿಗೆ ಬರುವಂತಾಗಬೇಕು. ಆ ನಿಟ್ಟಿನ ಶಿಕ್ಷಣ ನೀಡಬೇಕು ಎಂದು ಹೇಳಿದರು. ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ಮಾತನಾಡಿ, ಗಣಪತಿ ಆಶ್ರಮದ ಜೊತೆಗೆ ಪೇಜಾವರ ಶ್ರೀಗಳು ಉತ್ತಮ ಸಂಬಂಧ ಇಟ್ಟುಕೊಂಡಿದ್ದಾರೆ. ಅವರ ಸಮ್ಮುಖದಲ್ಲಿ ಇಂದು ಭಗಿನಿ ಸೇವಾ ಸಮಾಜದ ನೂತನ ಕಟ್ಟಡದ ಭೂಮಿ ಪೂಜೆ ಆಗಿದೆ. ಇಂತಹ ಸಂದರ್ಭದಲ್ಲಿ ನಾವು ಭೂವರಾಹಸ್ವಾಮಿಯನ್ನು ಸ್ಮರಿಸಬೇಕು. ಭಗಿನಿ ಸೇವಾ ಸಮಾಜದ ಬಗ್ಗೆ ಸಾಕಷ್ಟು ಕೇಳಿದ್ದೇನೆ. ಭಗಿನಿ ಅಂದರೆ ಸೋದರಿ. ಭಗವಂತನಿಗೆ ಇಷ್ಟವಾದ ಪದ ಎಂದರು.



ಮೈಸೂರಿನ ಭಗಿನಿ ಸೇವಾ ಸಮಾಜದ ಆವರಣದಲ್ಲಿ ನೂತನ ಕಟ್ಟಡಕ್ಕೆ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಭೂಮಿ ಪೂಜೆ ನೆರವೇರಿಸಿದರು. ಚಿತ್ರದಲ್ಲಿ ಶಾಸಕ ಎಸ್.ಎ.ರಾಮದಾಸ್, ಭಗಿನಿ ಸೇವಾ ಸಮಾಜದ ಅಧ್ಯಕ್ಷ ಎಂ.ಜಗನ್ನಾಥ ಶೆಣೈ ಇನ್ನಿತರನ್ನು ಕಾಣಬಹುದು.

ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಮಾತನಾಡಿ, ಉದ್ದೇಶಿತ ನೂತನ ಕಟ್ಟಡದಲ್ಲಿ ಐಎಎಸ್, ಐಪಿಎಸ್ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ 24 ಗಂಟೆಗಳ ಕಾಲ ಅಭ್ಯಾಸ ಮಾಡಬಹುದಾದ ಗ್ರಂಥಾಲಯ ಕಟ್ಟಡಕ್ಕೆ ತಮ್ಮ ಶಾಸಕರ ನಿಧಿಯಿಂದ 20 ಲಕ್ಷ ರೂ. ನೀಡುವುದಾಗಿ ಭರವಸೆ ನೀಡಿದರು.

ವಿಜಯ ವಿಠಲ ವಿದ್ಯಾಸಂಸ್ಥೆಗಳ ಅಧ್ಯಕ್ಷ ಆರ್.ಗುರು ಮಾತನಾಡಿ, ವಿಜಯ ವಿಠಲ ಸಂಸ್ಥೆಯ ಆಶ್ರಯದಲ್ಲಿ ಇಲ್ಲಿ ಕಟ್ಟಡ ನಿರ್ಮಾಣಗೊಳ್ಳುತ್ತಿರುವುದು ಸಂತಸದ ವಿಷಯ. ಕೆಲವೇ ತಿಂಗಳಲ್ಲಿ ಕಟ್ಟಡ ನಿರ್ಮಾಣಗೊಳ್ಳಲಿದ್ದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಈ ಕಟ್ಟಡವನ್ನು ನೋಡುವ ಭಾಗ್ಯ ಬರಲಿ ಎಂದು ಹಾರೈಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಭಗಿನಿ ಸೇವಾ ಸಮಾಜದ ಅಧ್ಯಕ್ಷ ಎಂ. ಜಗನ್ನಾಥ್ ಶೆಣೈ ಮಾತನಾಡಿ, ಎರಡು ವರ್ಷದೊಳಗೆ ಕಟ್ಟಡ ನಿರ್ಮಿಸುವಂತೆ ಶ್ರೀಗಳು ನೀಡಿರುವ ಸೂಚನೆಯಂತೆ ಕಾಮಗಾರಿ ಪೂರ್ಣಗೊಳಿಸುವ ಉದ್ದೇಶ ಹೊಂದಿದ್ದೇವೆ. ಇಲ್ಲಿ ವಿದ್ಯೆಯ ಜೊತೆಗೆ ಸಂಸ್ಕೃತಿ ಮತ್ತು ಸಂಸ್ಕಾರ ಕಲಿಸುವ ಜೊತೆಗೆ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಹೊಣೆಗಾರಿಕೆ ನಮ್ಮ ಮೇಲಿದೆ ಎಂದು ಹೇಳಿದರು.

ನಗರಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಭಗಿನಿ ಸೇವಾ ಸಮಾಜದ ಗೌರವಾಧ್ಯಕ್ಷ ಬಿ.ಶ್ರೀನಿವಾಸ್, ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್, ಸದಸ್ಯರಾದ ಪದ್ಮಜಾ ಶ್ರೀನಿವಾಸ್, ವಂದನಾ ಗೋವಿಂದಕೃಷ್ಣ, ಕೆ.ಎಸ್.ಗುರುರಾಜ, ಎ.ವಿಶ್ವನಾಥ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ
ಶನಿವಾರ 9 ಜುಲೈ 2022

ಕೇರಳದಲ್ಲಿ ಭಾರೀ ಮಳೆ ಹಿನ್ನೆಲೆ

ಪ್ರವಾಹ ಪರಿಸ್ಥಿತಿ ಎದುರಿಸಲು ಅಧಿಕಾರಿಗಳು ಸಜ್ಜಾಗಿ

ಮುನ್ನೆಚ್ಚರಿಕೆ ಕ್ರಮಗಳ ಸಭೆಯಲ್ಲಿ ಶಾಸಕ ಬಿ.ಹರ್ಷವರ್ಧನ್ ಸೂಚನೆ



ನಂಜನಗೂಡು, ಜು.8(ಸುದರ್ಶನ್)– ಕೇರಳದ ವೈನಾಡಿನಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕಪಿಲಾ ನದಿ ನೀರಿನ ಮಟ್ಟ ಯಾವ ಸಂದರ್ಭದಲ್ಲಾದರೂ ಹೆಚ್ಚಾಗಬಹುದು. ಹೀಗಾಗಿ ತಾಲೂಕು ಮಟ್ಟದ ಅಧಿಕಾರಿಗಳು ಪ್ರವಾಹ ಪರಿಸ್ಥಿತಿ ಎದುರಿಸಲು ಸಿದ್ಧರಾಗಿ ಎಂದು ಶಾಸಕ ಬಿ.ಹರ್ಷವರ್ಧನ್ ಸೂಚನೆ ನೀಡಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಪ್ರವಾಹ ಮುನ್ನೆಚ್ಚರಿಕೆ ಕ್ರಮಗಳ ಸಂಬಂಧ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಳೆದ 3 ವರ್ಷಗಳಿಂದ ನಂಜನಗೂಡಲ್ಲಿ ಕಪಿಲಾ ನದಿ ಪ್ರವಾಹದಿಂದ ಭಾರೀ ತೊಂದರೆಯುಂಟಾಗಿತ್ತು. ಈಗಾಲೇ 17 ಸಾವಿರ ಕ್ಯುಸೆಕ್ಸ್‌ಗೂ ಹೆಚ್ಚು ನೀರು ಹರಿದು ಬರುತ್ತಿದೆ. ಕೇರಳದ ವೈನಾಡಿನಲ್ಲಿ ಭಾರೀ ಮಳೆಯಾಗುತ್ತಿರುವ ಕಾರಣ ಯಾವ ಕ್ಷಣದಲ್ಲಾದರೂ ನದಿಯ ಹರಿವಿನ ಪ್ರಮಾಣದಲ್ಲಿ ಹೆಚ್ಚಾಗಬಹುದು. ಆದ್ದರಿಂದ ನದಿ ಅಂಚಿನಲ್ಲಿರುವ ಸರಸ್ವತಿ ಕಾಲೋನಿ, ತೋಪಿನ ಬೀದಿ, ಹಳ್ಳದ ಕೇರಿ ಬಡಾವಣೆಗಳ ಜನರನ್ನು ಸ್ಥಳಾಂತರಗೊಳಿಸಿ ಹಾಗೂ ರೈತರಿಗೆ ಮುನ್ನೆಚ್ಚರಿಕಾ ಕ್ರಮ ಅನುಸರಿಸುವಂತೆ ತಿಳುವಳಿಕೆ ನೀಡಿ, ಬೆಳೆ ವಿಮೆ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಿ. ಜೊತೆಗೆ ನೆರೆಯಿಂದ ಹಾನಿಗೀಡಾದ ಬೆಳೆಗಳ ಬಗ್ಗೆ ಮಾಹಿತಿ ಕಲೆ ಹಾಕಿ ಶೀಘ್ರ ಪರಿಹಾರ ಒದಗಿಸಲು ಮುಂದಾಗಿ ಎಂದ ಅವರು, ನಿರಾಶ್ರಿತರ ಕೇಂದ್ರ ತೆರೆಯಲು ಜಾಗಗಳನ್ನು ಗುರ್ತಿಸಿ ಸಿದ್ಧತೆ ಕೈಗೊಳ್ಳಿ, ಇಂದಿನಿಂದಲೇ ನಿರಾಶ್ರಿತರಿಗೆ ಶ್ರೀಕಂಠೇಶ್ವರ ದೇವಾಲಯದ ವತಿಯಿಂದ ಪ್ರತಿದಿನ 300 ಜನರಿಗೆ ಊಟದ ವ್ಯವಸ್ಥೆ ಮಾಡುವಂತೆ ತಾಕೀತು ಮಾಡಿದರು.

ಅಗ್ನಿಶಾಮಕದಳ ಅಧಿಕಾರಿಗಳು ಸಕಲ ಸಿದ್ಧತೆ ಕೈಗೊಂಡು ಜನರಿಗೆ ತೊಂದರೆಯಾಗದಂತೆ ಕ್ರಮವಹಿಸಿ. ದೇವಾಲಯದ ಸ್ನಾನಘಟ್ಟದ ಬಳಿ ಭಕ್ತರನ್ನು ನಿಯಂತ್ರಿಸಿ ಎಂದು ಸೂಚಿಸಿದರು. ನೆರೆಯಿಂದ ಮನೆ ಹಾನಿಗೀಡಾದಲ್ಲಿ ಮುಖ್ಯ ಮಂತ್ರಿಗಳು 5 ಲಕ್ಷ ರೂ. ಪರಿಹಾರ ನೀಡುವುದಾಗಿ ಘೋಷಣೆ ಮಾಡಿದ್ದಾರೆ. ಸಾರ್ವಜನಿಕರ ಅನುಕೂಲಕ್ಕಾಗಿ ಸಹಾಯವಾಣಿ ತೆರೆಯಲಾಗಿದ್ದು, ದೂ:08221– 223108 ನೆರೆಯಿಂದ ಮನೆ, ಬೆಳೆ, ಆಸ್ತಿ ಪಾಸ್ತಿ ನಷ್ಟ ಉಂಟಾದಲ್ಲಿ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಿದಲ್ಲಿ ಗ್ರಾಮ ಲೆಕ್ಕಾಧಿಕಾರಿ, ಪಿಡಿಓ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವರದಿ ನೀಡಲಿದ್ದಾರೆ ಎಂದರು.

ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ: ಕಳೆದ ಬಾರಿ ಅಧಿಕಾರಿಗಳು ತಪ್ಪು ವರದಿ ನೀಡಿ ತಾರತಮ್ಯ ಎಸಗಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಒಂದು ವೇಳೆ ಈಗ ಮಳೆಯಿಂದ ಹಾನಿಗೆ ಒಳಗಾದ ಸಂತ್ರಸ್ತರ ನಿಖರ ಮಾಹಿತಿಯನ್ನು ಗ್ರಾಮ ಲೆಕ್ಕಿಗರು ಕಲೆ ಹಾಕಿ ತಕ್ಷಣ ಜಿಲ್ಲಾಡಳಿತಕ್ಕೆ ವರದಿ ನೀಡಲು ಕ್ರಮ ವಹಿಸಬೇಕು. ಫಲಾನುಭವಿಗಳಿಗೆ ಪರಿಹಾರ ಒದಗಿಸುವಲ್ಲಿ ಅಧಿಕಾರಿಗಳು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡುವುದಾಗಿ ಎಚ್ಚರಿಕೆ ನೀಡಿದ ಶಾಸಕರು, ಅಧಿಕಾರಿಗಳು ನೆರೆ ಪ್ರದೇಶದಲ್ಲಿ ಹಾಜರಿದ್ದು, ಜನರಿಗೆ ಸಹಾಯ ಒದಗಿಸಬೇಕು ಎಂದು ಸೂಚನೆ ನೀಡಿದರು.

ತಹಶೀಲ್ದಾರ್ ಎಂ.ಶಿವಮೂರ್ತಿ ಮಾತನಾಡಿ, ಲೋಕೋಪಯೋಗಿ ಅಧಿಕಾರಿಗಳು ನೆರೆಯಿಂದ ರಸ್ತೆ, ಕಟ್ಟಡ, ಮನೆಗಳಿಗೆ ಹಾನಿಯುಂಟಾದ ಸಂದರ್ಭ ಎಷ್ಟು ಪ್ರಮಾಣದಲ್ಲಿ ಹಾನಿ ಉಂಟಾಗಿದೆ ಎಂಬ ಬಗ್ಗೆ ನಿಖರ ಮಾಹಿತಿ ಒದಗಿಸಿ ಎಂದರು.

ಸಭೆಯಲ್ಲಿ ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ತಾಪಂ ಇಓ ಹೆಚ್.ಜಿ.ಶ್ರೀನಿವಾಸ್, ನಗರಸಭಾ ಆಯುಕ್ತ ರಾಜಣ್ಣ, ಕೃಷಿ ಸಹಾಯಕ ನಿರ್ದೇಶಕ ದೀಪಕ್, ಸಿಪಿಐ ಲಕ್ಷ್ಮಿಕಾಂತ್ ತಳವಾರ್, ತೋಟಗಾರಿಕಾ ಅಧಿಕಾರಿ ಚಂದ್ರು, ಕಾರ್ಮಿಕ ಇಲಾಖೆ ಅಧಿಕಾರಿ ರಾಜಶೇಖರ್ ಸೇರಿದಂತೆ ಇನ್ನಿತರರಿದ್ದರು.

ಪರಿಸರ ರಕ್ಷಣೆಗೆ ಪ್ರತಿಯೊಬ್ಬರ ಸಹಕಾರ ಅಗತ್ಯ

ಭೇರ್ಯ, ಜು.8– ಪರಿಸರ ರಕ್ಷಣೆಗೆ ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು. ಸಾಲಿಗ್ರಾಮ ತಾಲೂಕಿನ ಕರ್ತಾಳು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಮೈಸೂರು ಸಾಮಾಜಿಕ ಅರಣ್ಯ ವಿಭಾಗ ಹಾಗೂ ಕೆ.ಆರ್.ನಗರ ಸಾಮಾಜಿಕ ಅರಣ್ಯ ವಲಯ ವತಿಯಿಂದ ಹಮ್ಮಿಕೊಂಡಿದ್ದ ವನ ಮಹೋತ್ಸವ ಅಂಗವಾಗಿ ಗಿಡ ನೆಟ್ಟು ನೀರೆರದು ಅವರು ಮಾತನಾಡಿದರು.



ವಿದ್ಯಾರ್ಥಿಗಳು ಗಿಡ ನೆಡುವ ಮೂಲಕ ಪರಿಸರ ಉಳಿಸಿ, ಬೆಳೆಸಬೇಕು. ಭೂಮಿಯಲ್ಲಿ ಒಂದಿಂಚು ಮಣ್ಣು ಬೆಳೆಯಬೇಕಾದರೆ ಸಾವಿರ ವರ್ಷಗಳು ಬೇಕಾಗಬಹುದು. ಆದ್ದರಿಂದ ಮುಂದಿನ ಜನಾಂಗಕ್ಕೆ ನಿಸರ್ಗ ಕಾಪಾಡಿಕೊಂಡು ಒಂದೇ ವಿಶ್ವ–ಒಂದೇ ಪರಿಸರ ಎಂಬುದನ್ನು ಬೆಳೆಸಿಕೊಂಡು ಹೋಗಬೇಕು ಎಂದರು. ಪ್ರತಿಯೊಬ್ಬರಿಗೂ ಅರಣ್ಯ ಸಂಪತ್ತು ಅವಶ್ಯವಿದ್ದು, ಪ್ರಕೃತಿ ಉಳಿಸಿ ಬೆಳೆಸುವುದು ಎಲ್ಲರ ಕರ್ತವ್ಯ ಅದರಲ್ಲಿಯೂ ವಿದ್ಯಾರ್ಥಿಗಳು ಪರಿಸರದ ಬಗ್ಗೆ ಅರಿತು ಅದನ್ನು ಉಳಿಸಿ, ಬೆಳೆಸುವ ಮಹತ್ವದ ಜವಾಬ್ದಾರಿ ನಿಭಾಯಿಸುವಂತೆ ಕರೆ ನೀಡಿದರು.

ಈ ವೇಳೆ ಕೆ.ಆರ್.ನಗರ ಸಾಮಾಜಿಕ ಅರಣ್ಯ ಇಲಾಖೆ ವಲಯ ಅರಣ್ಯಾಧಿಕಾರಿ ಹರಿಪ್ರಸಾದ್, ಉಪ ಅರಣ್ಯಾಧಿಕಾರಿ ಲಕ್ಷ್ಮೀಕಾಂತ್, ಶೋಭ, ಅರಣ್ಯ ರಕ್ಷಕ ಮಹದೇವ್, ಬಿಇಓ ಗಾಯಿತ್ರಿ, ಜಿಪಂ ಎಇಇ ವಿನುತ್, ಎಇ ದಡದಹಳ್ಳಿ ಸ್ವಾಮಿ, ಜೆಇ ಓಂಕಾರ್, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಮಧು, ಗ್ರಾಪಂ ಅಧ್ಯಕ್ಷೆ ಭಾಗ್ಯಮ್ಮ, ಉಪಾಧ್ಯಕ್ಷ ಕೆ.ಎಂ.ಮಂಜುನಾಥ್, ಸದಸ್ಯರಾದ ಧರ್ಮೇಶ್, ಕಿರಣ್ ಕುಮಾರ್, ಜಯಮ್ಮ, ಎಸ್‌ಎಂಸಿ ಅಧ್ಯಕ್ಷ ಬಸವರಾಜು, ಮುಖ್ಯಶಿಕ್ಷಕ ಹೆಚ್.ಎಂ.ಲೋಕೇಶ್, ತಾಲೂಕು ಗುತ್ತಿಗೆದಾರರ ಸಂಘದ ಅಧ್ಯಕ್ಷ ಮಂಜೇಗೌಡ, ಜೆಡಿಎಸ್ ಮುಖಂಡರಾದ ಮೂ.ರಾ.ಕುಮಾರಗೌಡ ಮತ್ತಿತರರಿದ್ದರು.

ತಿ.ನರಸೀಪುರ ಪುರಸಭೆಗೆ ನಾಗರತ್ನ ಮಾದೇಶ್ ಉಪಾಧ್ಯಕ್ಷೆ



ತಿ.ನರಸೀಪುರ, ಜು.8(ಎಸ್‌ಕೆ)– ಪಟ್ಟಣದ ಪುರಸಭೆ ಅಧ್ಯಕ್ಷೆಯಾಗಿ ಕಾಂಗ್ರೆಸ್ ಸದಸ್ಯೆ ನಾಗರತ್ನ ಮಾದೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಿಕಟಪೂರ್ವ ಉಪಾಧ್ಯಕ್ಷೆ ಪ್ರೇಮಾ ಮರಯ್ಯರ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಚುನಾವಣೆ ನಿಗದಿಯಾಗಿತ್ತು. ಚುನಾವಣೆಯಲ್ಲಿ ಕಾಂಗ್ರೆಸ್ ಸದಸ್ಯೆ ನಾಗರತ್ನ ಮಾದೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ಉಮೇದುವಾರಿಕೆ ಸಲ್ಲಿಸದ ಕಾರಣ ಚುನಾವಣಾಧಿಕಾರಿ ತಹಶೀಲ್ದಾರ್ ಸಿ.ಜೆ.ಗೀತಾ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು.

ಪುರಸಭೆಯು 23 ಸದಸ್ಯ ಬಲ ಹೊಂದಿದ್ದು, ಚುನಾವಣೆಯಲ್ಲಿ ಅಧ್ಯಕ್ಷ ಮದನ್‌ರಾಜ್, ಸದಸ್ಯರಾದ ಎನ್.ಸೋಮು, ಟಿ.ಎಂ.ನಂಜುಂಡಸ್ವಾಮಿ, ಮೆಡಿಕಲ್ ನಾಗರಾಜು, ಬಾದಾಮಿ ಮಂಜು, ಬೇಬಿ ಹೇಮಂತ್, ಪ್ರೇಮಾ ಮರಯ್ಯ, ಮಹದೇವಮ್ಮ ಜೆಡಿಎಸ್‌ನ ತುಂಬಲಾ ಪ್ರಕಾಶ್, ಮೋಹನ್, ಸಿಸ್ಟಮ್ ಸಿದ್ದು, ಪಕ್ಷೇತರರಾದ ಸಯ್ಯದ್ ಅಹ್ಮದ್, ವಸಂತ ಶ್ರೀಕಂಠ ಉಪಸ್ಥಿತರಿದ್ದರು. ಉಪತಹಶೀಲ್ದಾರ್ ಜೆ.ಕೆ.ಪ್ರಭುರಾಜ್ ಸಹಾಯಕ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು.

ಕಾಂಗ್ರೆಸ್ ಕಚೇರಿಯಲ್ಲಿ ಸನ್ಮಾನ: ಉಪಾಧ್ಯಕ್ಷರಾಗಿ ಆಯ್ಕೆಯಾದ ನಾಗರತ್ನ ಮಾದೇಶ್ ಅವರನ್ನು ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕಾರ್ಯಕರ್ತರು ಸನ್ಮಾನಿಸಿದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಪಕ್ಷಬೇಧ ಮರೆತು ಎಲ್ಲಾ ಸದಸ್ಯರ ವಿಶ್ವಾಸದೊಂದಿಗೆ ಪುರಸಭೆ ಅಭಿವೃದ್ಧಿಗೆ ಶ್ರಮಿಸುವಂತೆ ನೂತನ ಉಪಾಧ್ಯಕ್ಷರಿಗೆ ಕಿವಿಮಾತು ಹೇಳಿದರು. ಅಲ್ಲದೇ ನಾಗರತ್ನ ಮಾದೇಶ್ ಆಯ್ಕೆಗೆ ಸಹಕರಿಸಿದ ಜೆಡಿಎಸ್ ಮತ್ತು ಪಕ್ಷೇತರ ಸದಸ್ಯರಿಗೆ ಧನ್ಯವಾದ ತಿಳಿಸಿದರು.

ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಮಾತನಾಡಿ, ನೂತನ ಉಪಾಧ್ಯಕ್ಷೆಯಾಗಿ ಆಯ್ಕೆಯಾದ ನಾಗರತ್ನ ಮಾದೇಶ್‌ಗೆ ಶುಭ ಕೋರಿದರು. ಕಳೆದ ಅವಧಿಯಲ್ಲಿ ವರುಣಾ ವಿಧಾನಸಭಾ ವ್ಯಾಪ್ತಿಯ ಪುರಸಭಾ ಸದಸ್ಯರನ್ನು ಉಪಾಧ್ಯಕ್ಷರನ್ನಾಗಿ ಕಾಂಗ್ರೆಸ್ ಪಕ್ಷ ಆಯ್ಕೆ ಮಾಡಿತ್ತು. ಈ ಬಾರಿ ತಿ.ನರಸೀಪುರ ವಿಧಾನಸಭಾ ವ್ಯಾಪ್ತಿಯಲ್ಲಿ ಗೆದ್ದಿರುವ ನಾಗರತ್ನರನ್ನು ಆಯ್ಕೆ ಮಾಡಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹದೇವಣ್ಣ, ಪುರಸಭಾ ಅಧ್ಯಕ್ಷ ಮದನ್‌ರಾಜ್, ಸದಸ್ಯ ಟಿ.ಎಂ.ನಂಜುಂಡಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಮನ್ನೇಹುಂಡಿ ಮಹೇಶ್, ಹೇಮಂತ್, ಕುಪ್ಯಾ ಭಾಗ್ಯಮ್ಮ, ಲತಾ ಜಗದೀಶ್, ಪುಳ್ಳಾರಿಗೌಡ, ಅನುಪ್‌ಗೌಡ ಮತ್ತಿತರರಿದ್ದರು.

ಸರಗೂರಲ್ಲಿ ವನ ಮಹೋತ್ಸವ ಆಚರಣೆ



ಸರಗೂರು, ಜು.8(ನಾಗೇಶ್)– ಪಟ್ಟಣದ ಡಾ.ಸಿ.ಎನ್.ಮೃತ್ಯುಂಜಯಪ್ಪ ಸಹೃದಯ ಬಳಗದಿಂದ ಇಲ್ಲಿನ ಜೆಎಸ್‌ಎಸ್ ಶಾಲಾವರಣದಲ್ಲಿ ಗಿಡ ನೆಡುವ ಮೂಲಕ ವನ ಮಹೋತ್ಸವ ಆಚರಿಸಲಾಯಿತು.

ಬಳಗದ ಅಧ್ಯಕ್ಷ ಪುಟ್ಟಚನ್ನಪ್ಪ ಮಾತನಾಡಿ, ಡಾ.ಸಿ.ಎನ್.ಮೃತ್ಯುಂಜಯಪ್ಪನವರು 1983ರಲ್ಲಿ ಜೆಎಸ್‌ಎಸ್ ಶಾಲಾವರಣದಲ್ಲಿ ವನಮೋತ್ಸವ ಆಚರಿಸಿದ್ದರು. ಅಂದು ಅವರು ನೆಟ್ಟ ಗಿಡಗಳು ಇಂದು ಮರಗಳಾಗಿ ಸಾರ್ವಜನಿಕರಿಗೆ ಉತ್ತಮ ಗಾಳಿ ನೀಡುತ್ತಿವೆ. ಡಾ.ಸಿ.ಎನ್.ಮೃತ್ಯುಂಜಯಪ್ಪನವರು ವೈದ್ಯರಾಗಿ ಸಮಾಜಮುಖಿ ಸೇವೆಯಲ್ಲಿ ತೊಡಗಿಸಿಕೊಂಡು ಕಂದಾಚಾರ, ಅಸ್ಪೃಶ್ಯತೆ ತೊಡೆದು ಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು ಎಲ್ಲರೂ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂಬ ಹಂಬಲ ಹೊಂದಿದ್ದರು. ಅವರ ನಂತರವೂ ಸಮಾಜಮುಖಿ ಸೇವಾ ಕಾರ್ಯ ನಡೆಸಿಕೊಂಡು ಬರುತ್ತಿರುವ ಅವರ ಶ್ರೀಮತಿ ಸುಧಾ ಮೃತ್ಯುಂಜಯಪ್ಪನವರ ಸೇವೆ ಶ್ಲಾಘನೀಯ ಎಂದರು.

ಬಳಗದ ಗೌರವಾಧ್ಯಕ್ಷೆ ಸುಧಾ ಮೃತ್ಯುಂಜಯಪ್ಪ ಮಾತನಾಡಿ, ಡಾ.ಸಿ.ಎನ್.ಮೃತ್ಯುಂಜಯಪ್ಪನವರು ಸಾಮಾಜಿಕ ಕಳಕಳಿ ಹೊಂದಿದ್ದರು. ಯಾವುದೇ ವನ ಮಹೋತ್ಸವ ನಡೆಸಿದಾಗ ಗಿಡಗಳನ್ನು ಮಕ್ಕಳಂತೆ ಹಾರೈಕೆ ಮಾಡುತ್ತಿದ್ದರು. ಅಲ್ಲದೇ ಬಡಮಕ್ಕಳ ವಿದ್ಯಾಭ್ಯಾಸಕ್ಕೂ ಹೆಚ್ಚು ಒತ್ತು ನೀಡುವ ಮೂಲಕ ಸಮಜಸೇವೆಯಲ್ಲಿ ತೊಡಗಿಸಿಕೊಂಡಿದ್ದ ಅವರಿಗೆ ಸಾಕಷ್ಟು ಪ್ರಶಸ್ತಿಗಳು ಬಂದಿವೆ ಎಂದರು.

ಇದೇ ವೇಳೆ ಡಾ.ಸಿ.ಎನ್.ಮೃತ್ಯುಂಜಯಪ್ಪ ಸಹೃದಯ ಬಳಗದ ನೂತನ ಕಾರ್ಯಕಾರಿ ಮಂಡಳಿ ಆಯ್ಕೆ ಮಾಡಲಾಯಿತು. ಬಳಗದ ಅಧ್ಯಕ್ಷರಾಗಿ ಪುಟ್ಟಚನ್ನಪ್ಪ, ಗೌರವಾಧ್ಯಕ್ಷೆ ಸುಧಾ, ಕಾರ್ಯದರ್ಶಿ ಮಂಜುಳಾ ಪ್ರವೀಣ್, ಖಜಾಂಚಿ ಪುಷ್ಪರಾಜ್, ಸಲಹೆಗಾರರಾಗಿ ವಾಸುಕಿ ನಾಗೇಶ್, ಸದಸ್ಯರಾಗಿ ಎಂ.ನಾಗರಾಜು, ಹೆಚ್.ಎಸ್. ರಮೇಶ್, ನಾಗಸುಂದರ್, ಶೀಲಾ ದಯಾನಂದ್, ಸುಮಾ ಮಹೇಶ್, ರೇಣುಕಾ ಲೋಕೇಶ್, ಮಂಗಳ ಶ್ರೀನಿವಾಸ್, ಶೋಭಾ ಮಂಜುನಾಥ್, ಸೀಮಾ ಮೋಹನ್, ಜ್ಯೋತಿ ಶ್ರೀಕಂಠಸ್ವಾಮಿ, ರಜಿನಿ ಆದೀಶ್, ಉಮಾ ಪ್ರತಾಪ್, ಮಹಮದ್ ಅಂಜುಂಪಾಷ, ಪುಷ್ಪಲತಾ, ಗಂಗಾಧರ್, ಸವಿತ ಲೋಕೇಶ್, ಕಲಾ ಗೋವಿಂದರಾಜ್ ಅವರನ್ನು ಆಯ್ಕೆ ಮಾಡಲಾಯಿತು. ಜೆಎಸ್‌ಎಸ್‌ನ ಕೆಎಸ್.ಉಮಾಪತಿ, ಜೆಎಸ್‌ಎಸ್ ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

ಸೂರಹಳ್ಳಿಯಲ್ಲಿ ರೈತ ಸಂಘದ ನಾಮಫಲಕ ಅನಾವರಣ



ಮಲ್ಲುಂಡಿ, ಜು.8(ಚನ್ನಪ್ಪ)– ನಂಜನಗೂಡು ತಾಲೂಕಿನ ಸೂರಹಳ್ಳಿಯಲ್ಲಿ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗ್ರಾಮ ಘಟಕದ ನಾಮಫಲಕ ಅನಾವರಣಗೊಳಿಸಲಾಯಿತು.

ಈ ವೇಳೆ ಮಾತನಾಡಿದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದೇಶವನ್ನು ಲೂಟಿ ಮಾಡಲು ಹೊರಟಿವೆ. ದಿನಬಳಕೆಯ ವಸ್ತುಗಳ ಬೆಲೆ ಗಗನಕ್ಕೇರಿಸಿ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿವೆ. ಅಲ್ಲದೇ ಪಠ್ಯಪುಸ್ತಕದ ಸಮಸ್ಯೆ ಬಗೆಹರಿಸಲು ಸರ್ಕಾರ ಸಂಪೂರ್ಣ ವಿಫಲವಾಗಿದ್ದು, ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕೆ ಸಮಸ್ಯೆಯಾಗಿದೆ ಎಂದ ಅವರು, ರೈತರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ರೈತ ಸಂಘಟನೆ ಮುಖ್ಯವಾಗಿದೆ. ಹೀಗಾಗಿ ಪ್ರತಿ ಗ್ರಾಮದಲ್ಲೂ ಸಂಘಟನೆ ಮೂಲಕ ಹೋರಾಟ ಮಾಡಬೇಕಿದೆ ಎಂದರು.

ಈ ವೇಳೆ ರಾಜ್ಯ ಪ್ರಧಾನ ಕಾರ್ಯದರ್ಶಿ ಮಂಜು ಕಿರಣ್, ಜಿಲ್ಲಾ ಕಾರ್ಯದರ್ಶಿ ರಘು, ತಾಲೂಕು ಅಧ್ಯಕ್ಷ ಸತೀಶ್, ಜಿ.ಮಂಜುನಾಥ್, ಮಾದಪ್ಪ, ಕೆಂಪಣ್ಣ, ದೇವನಾಯಕ, ಮಹದೇವನಾಯಕ, ಶಾಂತಪ್ಪ ಸೇರಿದಂತೆ ರೈತ ಮುಖಂಡರು ಹಾಜರಿದ್ದರು.



ಕಂಪಲಾಪುರ ಗ್ರಾಪಂನಿಂದ 6 ಅಂಗನವಾಡಿ ಕೇಂದ್ರಗಳಿಗೆ ಫ್ಯಾನ್ ಮತ್ತು ಚೇರ್‌ಗಳನ್ನು ನೀಡಲಾಯಿತು. ಈ ವೇಳೆ ಅಧ್ಯಕ್ಷೆ ಮಮತ, ಪಿಡಿಓ ಎಸ್.ಆರ್.ಪರಮೇಶ್, ಕಾರ್ಯದರ್ಶಿ ಆರ್.ಪಿ.ಸುಷ್ಮಾ, ಸದಸ್ಯರಾದ ಮಂಜುನಾಥ್, ಸೋಮಶೇಖರ್, ರಾಣಿ, ಶೀಲಾ ಸೇರಿದಂತೆ ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಗ್ರಾಪಂ ಸಿಬ್ಬಂದಿ ಹಾಜರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಯ ವಿನಾಯಕ ಸ್ವಸಹಾಯ ಸಂಘದ 22ನೇ ವಾರ್ಷಿಕೋತ್ಸವ ಅಂಗವಾಗಿ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಬೀಚನಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಾದ ನಂಯನ, ಪಲ್ಲವಿ, ಸಹನ ಅವರನ್ನು ಸನ್ಮಾನಿಸಲಾಯಿತು. ಬಳಿಕ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್‌ಬುಕ್, ಪೆನ್ನು, ಪೆನ್ಸಿಲ್ ಇತರೆ ಸಾಮಗ್ರಿ ವಿತರಿಸಲಾಯಿತು. ಬೆಳಕು ಸಮುದಾಯ ಸಂಪನ್ಮೂಲ ಕೇಂದ್ರದ ವ್ಯವಸ್ಥಾಪಕ ಮಹದೇವಯ್ಯ, ವಿನಾಯಕ ಸ್ವಸಹಾಯ ಸಂಘದ ಅಧ್ಯಕ್ಷ ಮತ್ತು ಪ್ರತಿನಿಧಿಗಳು, ಬೆಳಕು ಸಮುದಾಯ ಸಂಪನ್ಮೂಲ ಕೇಂದ್ರದ ನಿರ್ದೇಶಕರು, ಮಹಿಳಾ ಸಂಘದ ಸದಸ್ಯರು, ಗ್ರಾಮಸ್ಥರು ಹಾಜರಿದ್ದರು.

ಶಾಲಾ–ಕಾಲೇಜುಗಳಿಗೆ ಮೂಲಸೌಕರ್ಯ ಕಲ್ಪಿಸಲು ಕಟಿಬದ್ಧ

ಶಾಸಕ ಹೆಚ್.ಪಿ.ಮಂಜುನಾಥ್ ಭರವಸೆ



ಹುಣಸೂರು, ಜು.8(ಕೆಕೆ)– ಕಳೆದ 10 ವರ್ಷಗಳಿಂದ ತಾಲೂಕಿನ ಶಿಕ್ಷಣ ಕ್ಷೇತ್ರ ಪ್ರಗತಿಯಲ್ಲಿದ್ದು, ಶೈಕ್ಷಣಿಕ ಪ್ರಗತಿಯ ಜೊತೆಗೆ ನೀರಾವರಿ, ಆರೋಗ್ಯ ಕ್ಷೇತ್ರಗಳಿಗೆ ಆದ್ಯತೆ ನೀಡಿದ್ದೇನೆಂಬ ಹೆಮ್ಮೆ ನಮಗಿದ್ದು, ಮುಂದಿನ ದಿನಗಳಲ್ಲಿ ಶಾಲಾ–ಕಾಲೇಜುಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಕಟಿಬದ್ಧರಾಗಿರುವುದಾಗಿ ಶಾಸಕ ಹೆಚ್.ಪಿ.ಮಂಜುನಾಥ್ ಭರವಸೆ ನೀಡಿದರು.

ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಎನ್‌ಎಸ್‌ಎಸ್, ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಪ್ರತಿಭಾ ಪುರಸ್ಕಾರ ನೆರವೇರಿಸಿ ಅವರು ಮಾತನಾಡಿದರು.

ಮೈಸೂರು ವಿವಿಯಿಂದ ತಾಲೂಕಿನಲ್ಲಿ ಪ್ರಥಮವಾಗಿ ಸಂಶೋಧನಾ ಕೇಂದ್ರ ಈ ಸಾಲಿನಿಂದ ಆರಂಭಗೊಂಡಿದೆ. ಪದವಿ ಪೂರ್ವ ಶಿಕ್ಷಣದ ನಂತರದಲ್ಲಿ ವಿದ್ಯಾರ್ಥಿಗಳಿಗೆ ನೂರಾರು ಅವಕಾಶಗಳಿವೆ. ನಿಮ್ಮ ಭವಿಷ್ಯಕ್ಕೆ ನೀವೇ ಹೀರೋಗಳಾಗಿದ್ದು, ನಿಮ್ಮ ಆಯ್ಕೆಯ ಗುರಿ ನೇರವಾಗಿರಲಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದ ಶಾಸಕರು, ಪೋಷಕರು, ಶಿಕ್ಷಕರು ಮಕ್ಕಳ ಗುರಿ ಮುಟ್ಟಿಸಬೇಕು. ಇತ್ತೀಚೆಗೆ ರಾಮೇಗೌಡರು ಪ್ರಾಂಶುಪಾಲರಾಗಿ ಬಂದ ನಂತರ ಕಾಲೇಜು ಸಾಕಷ್ಟು ಪ್ರಗತಿ ಕಂಡಿದೆ ಎಂದು ಪ್ರಶಂಸಿಸಿದರು.


ಕಾಲೇಜಿನ ಸಿಡಿಸಿ ಉಪಾಧ್ಯಕ್ಷ ನಾಗರಾಜ್ ರಾವ್ ಘನಾತೆ ಮಾತನಾಡಿ, ಶಾಸಕ ಮಂಜುನಾಥ್ ಕೊಡಮಾಡುವ ರತ್ನಮ್ಮ ಸುವರ್ಣ ಪ್ರಶಸ್ತಿಗೆ ಈ ಬಾರಿ ಇಬ್ಬರು ವಿದ್ಯಾರ್ಥಿಗಳು ಭಾಜನರಾಗಿದ್ದಾರೆ. ಕಾಲೇಜಿನ ಪ್ರಗತಿಗೆ ಶಾಸಕರು ತುಂಬು ಸಹಕಾರ ನೀಡುತ್ತಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಪ್ರಾಂಶುಪಾಲ ರಾಮೇಗೌಡರು, ಡಿಸಿಎಫ್ ಸೀಮಾ, ನಗರಸಭೆ ಮಾಜಿ ಅಧ್ಯಕ್ಷೆ ಅನುಷಾ, ಸಂಚಾಲಕ ಬೈರಣ್ಣ ಮಾತನಾಡಿದರು.

ಆದಿವಾಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ: ಕಾಲೇಜಿನಲ್ಲಿ 50ಕ್ಕೂ ಹೆಚ್ಚು ಆದಿವಾಸಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದು ಸಂತಸ ತಂದಿದೆ. ಕಾಲೇಜಿನಲ್ಲಿ ಶೀಘ್ರವೇ ಕಾಡುಕುಡಿಗಳ ಮಕ್ಕಳೊಂದಿಗೆ ಸಂವಾದ ನಡೆಸಿ, ಅವರ ಶೈಕ್ಷಣಿಕ ಪ್ರಗತಿಗೆ ಆಶಯಕ್ಕೆ ತಕ್ಕಂತೆ ಎಲ್ಲಾ ರೀತಿಯ ನೆರವು ನೀಡುವುದಾಗಿ ಶಾಸಕ ಮಂಜುನಾಥ್ ತಿಳಿಸಿದರು.

22 ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ: ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಸರ್ಕಾರಿ ಕಾಲೇಜುಗಳ ಪೈಕಿ ವಾಣಿಜ್ಯ ಮತ್ತು ಕಲಾ ವಿಭಾಗದಲ್ಲಿ ತಾಲೂಕಿಗೆ ಪ್ರಥಮ ಸ್ಥಾನ ಪಡೆದ ಸಾಧಿಕಾ ಬಾನು, ಐಶ್ವರ್ಯ ಸೇರಿದಂತೆ 22 ಮಂದಿ ಸಾಧಕ ವಿದ್ಯಾರ್ಥಿಗಳನ್ನು ಶಾಸಕರು ಹಾಗೂ ಗಣ್ಯರು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ನಗರಸಭಾಧ್ಯಕ್ಷೆ ಸಮೀನಾ ಪರ್ವಿನ್, ಮಾಜಿ ಅಧ್ಯಕ್ಷೆ ಸೌರಭ ಸಿದ್ದರಾಜು, ಎಸಿಎಫ್ ಅನುಷಾ, ಆರ್‌ಎಫ್‌ಓ ನಂದಕುಮಾರ್, ಡಿಆರ್‌ಎಫ್‌ಓ ಹರೀಶ್ ಹಾಗೂ ಉಪನ್ಯಾಸಕರಿದ್ದರು.

ಸಿಸಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿ ಭೂಮಿಪೂಜೆ



ತಿ.ನರಸೀಪುರ, ಜು.8(ಎಸ್‌ಕೆ)– ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುವುದಾಗಿ ಶಾಸಕ ಎಂ.ಅಶ್ವಿನ್ ಕುಮಾರ್ ಭರವಸೆ ನೀಡಿದರು.

ತಾಲೂಕಿನ ನುಗ್ಗೆಹಳ್ಳಿ ಕೊಪ್ಪಲು, ಕಟ್ಟೆ ಕೊಪ್ಪಲು, ಹೆಗ್ಗೂರು ಹಾಗೂ ಬಸವನಹಳ್ಳಿ ಗ್ರಾಮಗಳಲ್ಲಿ ಲೋಕೋಪಯೋಗಿ ಇಲಾಖೆಯ 2.5 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದ ಗ್ರಾಮಗಳಲ್ಲಿ ಮೂಲ ಸೌಕರ್ಯಕ್ಕೆ ಹೆಚ್ಚಿ ಒತ್ತು ನೀಡಿ ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆಗೆ ಕೈಗೊಳ್ಳಬೇಕಾದ ಅಗತ್ಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಗ್ರಾಮಗಳ ಅಭಿವೃದ್ಧಿ ಸೇರಿದಂತೆ ಇಡೀ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈಗ ನಡೆಯುತ್ತಿರುವ ಕಾಮಗಾರಿಗಳು 2 ವರ್ಷಗಳ ಹಿಂದೆಯೇ ಚಾಲನೆ ಪಡೆಯಬೇಕಿತ್ತಾದರೂ, ಕೊರೊನಾ ಹಿನ್ನೆಲೆಯಲ್ಲಿ ಸ್ಥಗಿತಗೊಂಡಿತ್ತು. ಮುಂದೆ ಅಭಿವೃದ್ಧಿ ಕಾಮಗಾರಿಗಳು ತ್ವರಿತವಾಗಿ ನಡೆಯಲಿದ್ದು ಕ್ಷೇತ್ರದ ಜನತೆಯ ಆಶಯಕ್ಕೆ ಅನುಗುಣವಾಗಿ ಸ್ಪಂದಿಸುತ್ತೇನೆ ಎಂದರು. ಇದೇ ವೇಳೆ ನುಗ್ಗೆಹಳ್ಳಿಕೊಪ್ಪಲು ಹಾಗೂ ಕಟ್ಟೆಕೊಪ್ಪಲು ಗ್ರಾಮದಲ್ಲಿ ತಲಾ 50 ಲಕ್ಷ, ಹೆಗ್ಗೂರು ಹಾಗೂ ಬಸವನಹಳ್ಳಿ ಗ್ರಾಮ ಗಳಲ್ಲಿ ತಲಾ 75 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವ ಸಿಸಿ ರಸ್ತೆ ಹಾಗೂ ಚರಂಡಿ ಕಾಮಗಾರಿಗೆ ಶಾಸಕರು ಭೂಮಿ ಪೂಜೆ ನೆರವೇರಿಸಿದರು.

ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಬಸವನಹಳ್ಳಿ ಗ್ರಾಪಂ ಅಧ್ಯಕ್ಷೆ ಪುಟ್ಟರತ್ನ, ಸದಸ್ಯರಾದ ಸಿ.ರಾಜು, ಮಂಜುನಾಥ್, ಜಯಲಕ್ಷ್ಮಮ್ಮ ಬಸವರಾಜು, ಗುಣ, ಭಾನುಮತಿ, ಎಪಿಎಂಸಿ ಮಾಜಿ ಅಧ್ಯಕ್ಷ ವೆಂಕಟೇಶ್, ಯಜಮಾನರಾದ ಮಾದೇಗೌಡ, ಸಿದ್ದೇಗೌಡ, ನಂಜೇಗೌಡ, ಲೋಕೋಪಯೋಗಿ ಎಇಇ ನಟೇಶ್, ಜಿಪಂ ಎಇಇ ರಾಜು ನಾಯಕ್, ಬೇವಿನಹಳ್ಳಿ ಸತೀಶ್ ಮತ್ತಿತರರಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ




ಶ್ರೀ.ಎನ್.ವಿಶ್ವನಾಥ್

ಮೈಸೂರು ಕುಂಚಿಟಿಗರ ಸಂಘದ ನಿರ್ದೇಶಕರು

ಇವರ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ ಹಾಗೂ ಇವರ ಕುಟುಂಬ ವರ್ಗದವರಿಗೆ ದುಃಖಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಸಂತಾಪ ಸೂಚಿಸುವವರು: ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಪರಿಷತ್ ಸದಸ್ಯರುಗಳು.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ.ಎನ್. ವಿಶ್ವನಾಥ್

ಶ್ರೀ ಹೊಂಬಾಳೆ ರಂಗಯ್ಯ ಧರ್ಮ ಸಂಸ್ಥೆಯ ಧರ್ಮದರ್ಶಿ

ಇವರ ಆತ್ಮಕ್ಕೆ ಭಗವಂತ ಶಾಂತಿ ನೀಡಲಿ ಹಾಗೂ ಇವರ ಕುಟುಂಬ ವರ್ಗದವರಿಗೆ ದುಃಖಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಸಂತಾಪ ಸೂಚಿಸುವವರು: ಶ್ರೀ ಹೊಂಬಾಳೆ ರಂಗಯ್ಯ ಧರ್ಮ ಸಂಸ್ಥೆಯ ಧರ್ಮದರ್ಶಿಗಳು.



